ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 16 ಶನಿವಾರ 2024


₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 327 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಇಂದು ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 429ನೇ ವರ್ಧಂತಿ; ಲಾಡು, ಪ್ರಸಾದ ವಿತರಣೆ



ಮೈಸೂರು, ಮಾ.15– ಶ್ರೀ ಸುಶಮೀಂದ್ರ ತೀರ್ಥರ ಸೇವಾ ಸಂಘದ ವತಿಯಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 429ನೇ ವರ್ಧಂತಿ ಅಂಗವಾಗಿ ಭಕ್ತಾದಿಗಳಿಗೆ ಲಾಡು ಹಾಗೂ ಪ್ರಸಾದ ವಿತರಣೆ ಕಾರ್ಯಕ್ರಮವನ್ನು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಗುರು ರಾಘವೇಂದ್ರ ಮಠದಲ್ಲಿ ಮಾರ್ಚ್ 16ರಂದು ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ ಎಂದು ಸಂಘದ ಉಪಾಧ್ಯಕ್ಷ ವರುಣಾ ಮಹದೇವ್ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಕೆ. ಹರೀಶ್‌ಗೌಡ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಉದ್ಯಮಿ ಜೆ.ರವಿ, ಕೆಪಿಸಿಸಿ ಸದಸ್ಯ ನಟರಾಜ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಉದ್ಯಮಿ ಓಂಕಾರ್ ಆನಂದ್, ಶ್ರೀ ಸುಶಮೀಂದ್ರತೀರ್ಥರ ಸೇವಾ ಸಂಘ ಅಧ್ಯಕ್ಷ ನಾಗರಾಜ್, ಬೈರತಿ ಲಿಂಗರಾಜು ಇನ್ನಿತರರು ಭಾಗವಹಿಸಲಿದ್ದಾರೆ.

ಚುನಾವಣಾ ಆಯುಕ್ತರಾಗಿ ಸುಖಬೀರ್ ಸಿಂಗ್ ಸಂಧು, ಜ್ಞಾನೇಶ್ ಕುಮಾರ್ ನೇಮಕ



ನವದೆಹಲಿ, ಮಾ. 15– ಮಾಜಿ ಐಎಎಸ್ ಅಧಿಕಾರಿಗಳಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಅವರು ಚುನಾವಣಾ ಆಯುಕ್ತರಾಗಿ ಗುರುವಾರ ನೇಮಕಗೊಂಡಿದ್ದಾರೆ. ಇವರ ನೇಮಕಾತಿ ಕುರಿತು ಕಾನೂನು ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಉನ್ನತಾಧಿಕಾರ ಆಯ್ಕೆ ಸಮಿತಿ ಗುರುವಾರ ಸಭೆ ನಡೆಸಿ ಈ ಇಬ್ಬರ ಹೆಸರನ್ನು ಶಿಫಾರಸು ಮಾಡಿತ್ತು. ಇಬ್ಬರು ಚುನಾವಣಾ ಆಯುಕ್ತರ ಆಯ್ಕೆಗೆ ಸಂಬಂಧಿಸಿದಂತೆ ಆರು ಹೆಸರುಗಳು ಸಮಿತಿಯ ಮುಂದೆ ಪ್ರಸ್ತಾಪವಾಗಿದ್ದವು. ಆ ಪೈಕಿ ಉನ್ನತಾಧಿಕಾರ ಸಮಿತಿಯ ಬಹುಪಾಲು ಸದಸ್ಯರು ಸಂಧು ಮತ್ತು ಜ್ಞಾನೇಶ್ ಅವರನ್ನು ಅಂತಿಮಗೊಳಿಸಿದರು ಎಂದು ಸಮಿತಿ ಸದಸ್ಯರೂ ಆಗಿರುವ ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧರಿ ತಿಳಿಸಿದರು. ಸಭೆಯ ಬಳಿಕ ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಅಂತಿಮವಾಗಿ ಆಯ್ಕೆಗೆ ಪರಿಗಣಿಸಲು ಹೆಸರಿಸಲಾಗಿದ್ದ ಆರು ಮಂದಿಯಲ್ಲಿ ಮಾಜಿ ಅಧಿಕಾರಿಗಳಾದ ಉತ್ಪಲ್ ಕುಮಾರ್ ಸಿಂಗ್, ಪ್ರದೀಪ್ ಕುಮಾರ್ ತ್ರಿಪಾಠಿ, ಜ್ಞಾನೇಶ್ ಕುಮಾರ್, ಇಂದೀವರ್ ಪಾಂಡೆ, ಸುಖಬೀರ್ ಸಿಂಗ್ ಸಂಧು, ಸುಧೀರ್ ಕುಮಾರ್ ಗಂಗಾಧರ್ ರಹಾಟೆ ಹೆಸರುಗಳು ಇದ್ದವು ಎಂದರು.

ಇಂದು ಒಕ್ಕಲಿಗ ಆರಕ್ಷಕರ ಸೇವಾ ಟ್ರಸ್ಟ್ ಉದ್ಘಾಟನಾ ಸಮಾರಂಭ

ಮೈಸೂರು, ಮಾ. 15– ಒಕ್ಕಲಿಗರ ಆರಕ್ಷಕ ಸೇವಾ ಟ್ರಸ್ಟ್ ಉದ್ಘಾಟನೆ ಮತ್ತು ಅಭಿನಂದನಾ ಸಮಾರಂಭವನ್ನು ನಾಳೆ (ಮಾ. 16) ಬೆಳಿಗ್ಗೆ 11ಕ್ಕೆ ಹೆಬ್ಬಾಳಿನ ಶ್ರೀ ಲಕ್ಷ್ಮೀಕಾಂತ ದೇವಸ್ಥಾನದ ಶ್ರೀ ಆದಿಚುಂಚನಗಿರಿ ಶಾಖಾ ಹೊಸ ಮಠದಲ್ಲಿ ಏರ್ಪಡಿಸಲಾಗಿದೆ.

ಶ್ರೀ ಆದಿಚುಂಚನಗಿರಿ ಶ್ರೀ ಕ್ಷೇತ್ರದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ, ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ನಿವೃತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕೆ.ಟಿ.ಬಾಲಕೃಷ್ಣ ಕಾರ್ಯಕ್ರಮ ಉದ್ಘಾಟಿಸುವರು. ಒಕ್ಕಲಿಗ ಆರಕ್ಷಕರ ಸೇವಾ ಟ್ರಸ್ಟ್ ಅಧ್ಯಕ್ಷ ಧನಂಜಯ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ನಿವೃತ್ತ ಉಪ ಪೊಲೀಸ್ ಆಯುಕ್ತ ಬಿ.ಪಿ. ಸುರೇಶ್, ನಿವೃತ್ತ ಪೊಲೀಸ್ ಅಧೀಕ್ಷಕ ಶಂಕರೇಗೌಡ ಭಾಗವಹಿಸುವರು. ಇದೇ ವೇಳೆ ನಿವೃತ್ತರಾದ ಡಿವೈಎಸ್‌ಪಿ ಸಣ್ಣೇಗೌಡ, ಆರ್‌ಪಿಐ ಹನುಮಪ್ಪ ಮತ್ತು ಆರ್‌ಎಸ್‌ಐ ಕಾಳೇಗೌಡ ಅವರನ್ನು ಸನ್ಮಾನಿಸಲಾಗುವುದು. ಇದೇ ವೇಳೆ ಪದವೀಧರರಾದ ಚಿನ್ನದ ಪದಕ ಪಡೆದ ಕು. ಪ್ರಮೋದಿನಿ, ಎಂ.ಆರ್. ಪ್ಯಾಕಿರಾಜೆಂದ್ರಪ್ಪ ಆಯ್ಕೆಯಾದ ಟಿ.ಕೆ. ಕುಸುಮ, ಪ್ರಫುಲ್ ಕುಮಾರ್ ಅವರನ್ನು ಅಭಿನಂದಿಸಲಾಗುವುದು.

ಮೈಸೂರು–ಚಾಮರಾಜನಗರ ಜಿಲ್ಲೆ ಪೊಲೀಸ್ ಕ್ರೆಡಿಟ್ ಸೊಸೈಟಿ ನಿರ್ದೇಶಕರಾಗಿ ಧನಂಜಯ, ಚೇತನ್, ಎಂ.ಜಿ.ರಘು, ವಿದ್ಯಾರಾಣಿ ಅವರನ್ನು ಆಯ್ಕೆ ಮಾಡಲಾಗಿದೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮಾ. 15– ಶ್ರೀ ವಿನಾಯಕ ದೇವಾಲಯ ಸೇವಾ ಸಂಸ್ಥೆ, ಲಯನ್ಸ್ ಕ್ಲಬ್ ಆಫ್ ಮೈಸೂರು ಹೆರಿಟೇಜ್ ಸಿಟಿ ಹಾಗೂ ಭಾರತ್ ಕ್ಯಾನ್ಸರ್ ಆಸ್ಪತ್ರೆ, ನಾರಾಯಣ ಹೃದಯಾಲಯ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಮಾ. 17 ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಆರ್.ಎಸ್. ನಾಯ್ಡುನಗರದ ಉಲ್ಲಾ ಚಾರಿಟಿ ಹಾಸ್ಪಿಟಲ್ ಮತ್ತು ಸಂತ ಅಲೋಶ್ಯಸ್ ಶಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 85536 40944, 98809 02569 ಸಂಪರ್ಕಿಸಬಹುದು.

ಏ.1ರಿಂದ ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ಪರಿಷ್ಕೃತ ಆಸ್ತಿ ತೆರಿಗೆ ಜಾರಿ

ಮೈಸೂರು, ಮಾ.15(ಎಸ್‌ಬಿಡಿ)– ಸ್ವತ್ತುಗಳ ಪರಿಷ್ಕೃತ ಮಾರುಕಟ್ಟೆ ದರದ ಆಧಾರದಲ್ಲಿ ಮೈಸೂರು ಮಹಾನಗರ ಪಾಲಿಕೆ ಆಸ್ತಿ ತೆರಿಗೆ ನಿಗದಿಪಡಿಸಿದ್ದು, ಏಪ್ರಿಲ್ 1ರಿಂದ ಜಾರಿಯಾಗಲಿದೆ. ಪೌರಾಡಳಿತ ನಿರ್ದೇಶನಾಲಯದ ಸೂಚನೆಯಂತೆ ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿಯಿಂದ ಪ್ರಕಟಿಸಿದ ಮಾರುಕಟ್ಟೆ ಮೌಲ್ಯಗಳ ಪರಿಷ್ಕೃತ ದರಗಳ ಅನ್ವಯ 2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ನಿಗದಿಪಡಿಸಲಾಗಿದೆ. ಪಾಲಿಕೆ ವ್ಯಾಪ್ತಿಯ ಎಲ್ಲಾ ಆಸ್ತಿಗಳಿಗೆ ಮುಂದಿನ ಏಪ್ರಿಲ್ 1 ರಿಂದ ಪರಿಷ್ಕೃತ ತೆರಿಗೆ ಜಾರಿಯಾಗಲಿದೆ ಎಂದು ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಪ್ರಿಲ್‌ನಲ್ಲಿ ತೆರಿಗೆ ರಿಯಾಯ್ತಿ: ಕರ್ನಾಟಕ ಪೌರ ನಿಗಮಗಳ ಅಧಿನಿಯಮ–1976ರ ಅನುಸಾರ 2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ಏ.1ರಿಂದ 30ರೊಳಗೆ ಪಾವತಿಸಿದರೆ ಶೇ.5ರಷ್ಟು ತೆರಿಗೆ ರಿಯಾಯ್ತಿ ಸೌಲಭ್ಯ ದೊರಕಲಿದೆ. ಆದ್ದರಿಂದ ಏಪ್ರಿಲ್‌ನಲ್ಲಿ 2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ಆಯಾ ವಲಯ ಕಚೇರಿಗಳಲ್ಲಿ ಪಾವತಿಸುವ ಮೂಲಕ ಶೇ.5ರಷ್ಟು ತೆರಿಗೆ ರಿಯಾಯ್ತಿ ಪಡೆದುಕೊಳ್ಳುವಂತೆ ಅವರು ಮನವಿ ಮಾಡಿದ್ದಾರೆ.

ಇನ್ಮುಂದೆ ಭಾನುವಾರವೂ ತೆರೆಯಲಿದೆ ಉಪನೋಂದಣಿ ಕಚೇರಿ

ಬೆಂಗಳೂರು, ಮಾ.15– ಇನ್ನು ಮುಂದೆ ಭಾನುವಾರವೂ ಉಪನೋಂದಣಿ ಕಚೇರಿ ತೆರೆಯುವಂತೆ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ.

ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಭಾನುವಾರವೂ ಉಪನೋಂದಣಿ ಕಚೇರಿ ತೆರೆಯುವಂತೆ ಸೂಚಿಸಲಾಗಿದೆ. ಪ್ರಾರಂಭಿಕ ಹಂತದಲ್ಲಿ ಮೊದಲು ಬೆಂಗಳೂರಿನಲ್ಲಿ ಪ್ರಾರಂಭಿಸುವಂತೆ ಆದೇಶ ನೀಡಲಾಗಿದೆ. ಏಪ್ರಿಲ್‌ನಿಂದ ಎಲ್ಲಾ ಮಹಾನಗರ ಪಾಲಿಕೆಯಲ್ಲಿ ಉಪನೋಂದಣಿ ಕಚೇರಿ ತೆರೆಯಲಿದ್ದು, ಭಾನುವಾರ ಕೆಲಸ ಮಾಡಿದ್ದ ಅಧಿಕಾರಿ, ಸಿಬ್ಬಂದಿಗೆ ಮಂಗಳವಾರ ರಜೆ ನೀಡುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಎನ್.ಎಂ.ಮಹದೇವಯ್ಯ ನಿಧನ



ಮೈಸೂರು, ಮಾ.15– ಮೈಸೂರು ತಾಲೂಕಿನ ಮರಟಿಕ್ಯಾತನಹಳ್ಳಿ ನಿವಾಸಿ, ರಾಜ್ಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿವೃತ್ತ ಅಧಿಕಾರಿ ಎನ್.ಎಂ.ಮಹದೇವಯ್ಯ(69) ತೀವ್ರ ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಮೃತರು, ಪತ್ನಿ ಗಾಯಿತ್ರಿ, ಪುತ್ರಿ ಶ್ರೀಲಕ್ಷ್ಮಿ, ಪುತ್ರ ತಿಲಕ್‌ಕುಮಾರ್ ಗೌಡ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಪುತ್ರ ಅಮೆರಿಕಾದಲ್ಲಿ ವಾಸವಿದ್ದು, ಭಾನುವಾರ ಆಗಮಿಸುವ ಹಿನ್ನೆಲೆಯಲ್ಲಿ ಸ್ವಗ್ರಾಮ ನಂಜನಗೂಡು ತಾಲೂಕು ನೇರಳೆ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಉನ್ನತ ಶಿಕ್ಷಣದಲ್ಲಿ ತಾಂತ್ರಿಕತೆ ಇದ್ದರೆ ವಿದ್ಯಾರ್ಥಿಗಳಿಗೆ ಸಹಕಾರಿ

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರೊ.ಯಜ್ಞಮೂರ್ತಿ ಶ್ರೀಕಾಂತ್

ಮೈಸೂರು, ಮಾ.15(ಜಿಎ)–ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು, ವೈಶಿಷ್ಟಪೂರ್ಣ ಸಂಯೋಜನೆಗಳು, ಕಲಿಕಾರ್ಥಿಗಳಿಗೆ ಹಲವು ಅವಕಾಶಗಳನ್ನು ಒದಗಿಸುತ್ತದೆ ಎಂದು ಆರ್‌ಐಇ ಕಾಲೇಜಿನ ಪ್ರಾಂಶುಪಾಲ ಪ್ರೊ.ಯಜ್ಞಮೂರ್ತಿ ಶ್ರೀಕಾಂತ್ ಅಭಿಪ್ರಾಯಪಟ್ಟಿದ್ದಾರೆ.

ಜಯಲಕ್ಷ್ಮಿಪುರಂನಲ್ಲಿರುವ ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ, 'ಉನ್ನತ ಶಿಕ್ಷಣದ ಪುನಶ್ಚೇತನ: ತಂತ್ರಗಳು ಮತ್ತು ಆವಿಷ್ಕಾರಗಳು' ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಉನ್ನತ ಶಿಕ್ಷಣದಲ್ಲಿ ಹೊಸ ಆವಿಷ್ಕಾರಗಳು ನಡೆದು, ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾದ ವಾತಾವರಣ ನಿರ್ಮಾಣವಾಗಬೇಕು. ವಿದ್ಯಾರ್ಥಿಗಳಿಗೆ ಕೂಡ ಶಿಕ್ಷಣದಲ್ಲಿ ಯಾವ ಬದಲಾವಣೆಯಾಗುತ್ತಿದೆ. ಅದರಿಂದ ಆಗುವ ಪ್ರಯೋಜನಗಳು ಏನು, ಅದರಿಂದ ನಮ್ಮ ಭವಿಷ್ಯ ಹೇಗೆ ಉಜ್ವಲವಾಗಲಿದೆ ಎಂಬುದರ ಮಾಹಿತಿಯನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ತಾಂತ್ರಿಕ ಶಿಕ್ಷಣ ಎಂಬುದು ಸಾಕಷ್ಟು ಬದಲಾವಣೆ ತರುತ್ತಿದೆ. ವಿದ್ಯಾರ್ಥಿಗಳು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣದಿಂದ ಆಗುವ ಪ್ರಯೋಜನಗಳ ಬಗ್ಗೆ ತಿಳಿದುಕೊಳ್ಳಬೇಕು. ಉನ್ನತ ಶಿಕ್ಷಣದಲ್ಲಿ ತಾಂತ್ರಿಕತೆ ಇದ್ದರೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅನುಕೂಲವಾಗುತ್ತದೆ ಎಂದರು. ಎಂಡಿಇಎಸ್ ಕಾರ್ಯದರ್ಶಿ ವಿಜಯಕುಮಾರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಶಿಕ್ಷಣದ ಮೂಲಕ ಉತ್ತಮ ಚಾರಿತ್ರ್ಯ ನಿರ್ಮಾಣ, ನೈತಿಕ ಮೌಲ್ಯಗಳನ್ನು ಬೆಳೆಸಬೇಕು. ವಿದ್ಯಾರ್ಥಿಗಳು ಶಿಕ್ಷಣ ಮುಗಿಸಿ ಹೋದ ನಂತರ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂದು ಹೇಳಿದರು."ವಿಚಾರ ಸಂಕಿರಣದಲ್ಲಿ ಉನ್ನತ ಶಿಕ್ಷಣದಲ್ಲಿ ಹೊಸ ಆವಿಷ್ಕಾರಗಳು, ತಂತ್ರಗಳು, ಶಿಕ್ಷಕರ ವೃತ್ತಿ ತೃಪ್ತಿ, ಶಿಕ್ಷಕರ ಬೋಧನಾ ಪರಿಣಾಮಗಳು, ಸಮನ್ವಯ ಶಿಕ್ಷಣ ಮತ್ತು ನಾವೀನ್ಯತಾ ಅಭ್ಯಾಸಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವಿಷಯಗಳನ್ನು ಮಂಡಿಸಲಾಯಿತು. ಕಾರ್ಯಕ್ರಮದಲ್ಲಿ ಎಂಡಿಇಎಸ್ ಆಡಳಿತ ನಿರ್ವಾಹಕರಾದ ಅವಿನಾಶ್, ಮೈವಿವಿಯ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕ ಸಂಪನ್ಮೂಲ ವ್ಯಕ್ತಿ ಡಾ. ಲಾನ್ಸಿ ಡಿಸೌಜಾ, ಚೆನ್ನೈನ ಶಿಕ್ಷಣ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಎಸ್. ಪ್ರಭುಶಂಕರ್, ಪ್ರಾಂಶುಪಾಲರಾದ ಡಾ. ಪ್ರಿಯಾ ಮ್ಯಾಥ್ಯೂ, ವಿಚಾರ ಸಂಕಿರಣದ ಸಂಚಾಲ ಕರಾದ ಡಾ. ಆಶಾ ಪಿ ಪಥ್ರೋಸ್ ಉಪಸ್ಥಿತರಿದ್ದರು.



ಜಯಲಕ್ಷ್ಮಿಪುರಂನಲ್ಲಿರುವ ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ, 'ಉನ್ನತ ಶಿಕ್ಷಣದ ಪುನಶ್ಚೇತನ: ತಂತ್ರಗಳು ಮತ್ತು ಆವಿಷ್ಕಾರಗಳು' ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆರ್‌ಐಇ ಕಾಲೇಜಿನ ಪ್ರಾಂಶುಪಾಲ ಪ್ರೊ.ಯಜ್ಞಮೂರ್ತಿ ಶ್ರೀಕಾಂತ್ ಉದ್ಘಾಟಿಸಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಮೈಸೂರು, ಮಾ. 15–ಮಹಿಳೆಯರು ಹಲವಾರು ಕ್ಷೇತ್ರಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಕೇವಲ ಅವರದ್ದಷ್ಟೇ ಅಲ್ಲ, ಅದು ಇಡೀ ಸಮಾಜದ ಸಮಸ್ಯೆ ಎಂದು ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹೇಳಿದರು.

ನಗರದ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಿದರು. ಬಳಿಕ ಮಾತನಾಡಿದ ಅವರು, ಮಹಿಳೆ ಕೇವಲ ಮಹಿಳೆಯಾಗಿರದೇ ಪುರುಷ ಪ್ರಧಾನ ಸಮಾಜದ ಚಲಾವಣೆ ವ್ಯಕ್ತಿಯಾಗಿದ್ದಾಳೆ. ಆಕೆ ತಾಯಿಯಾಗಿ, ಸಹೋದರಿಯಾಗಿ, ಪತ್ನಿಯಾಗಿ, ಮಗಳಾಗಿ ಮತ್ತು ಇತರೆಲ್ಲ ಸಂದರ್ಭದಲ್ಲಿ ಕಷ್ಟ ಸಹಿಷ್ಣುವಾಗಿ ಮನೆ ನಿಭಾಯಿಸುತ್ತಾಳೆ ಮತ್ತು ಕುಟುಂಬ ನಿರ್ವಹಣೆ ಮಾಡುತ್ತಾಳೆ. ಆದ್ದರಿಂದ ಆಕೆ ಎದುರಿಸುವ ಸಮಸ್ಯೆಗಳು ಕೇವಲ ಆಕೆಯದ್ದಲ್ಲ. ಅದು ಸಮಾಜದ್ದು ಎಂದು ಅಭಿಪ್ರಾಯಪಟ್ಟರು ಇದೇ ಸಂದರ್ಭದಲ್ಲಿ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹಾಗೂ ಮುತ್ತಣ್ಣ, ರಶ್ಮಿ, ಮಮತಾ, ಭಾರತಿ, ಪೂಜಾ, ವೈಷ್ಣವಿ, ಉಮಾ, ಶಾರದಾ, ಅನಿತಾ ಇನ್ನಿತರರು ಹಾಜರಿದ್ದರು.



ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.3.2024 ಶನಿವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಅಸೋಸಿಯೇಷನ್, ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು** : ಮೈಸೂರು ವಿಭಾಗ ಮಟ್ಟದ ರೋವರ್ಸ್ ಅಂಡ್ ರೇಂಜರ್ಸ್ ಸಮಾವೇಶ, ಉದ್ಘಾಟನೆ : ರಾಜ್ಯ ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ, ಮುಖ್ಯ ಅತಿಥಿಗಳು : ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ. ವಿಜಯಲಕ್ಷ್ಮಿ, ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಆಯುಕ್ತ ಪಿ. ವಿಶ್ವನಾಥ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಹೆ. ಕೆಂಪೇಗೌಡ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಮೈಸೂರು ಬುಕ್ ಕ್ಲಬ್ :** 'ಮೈಂಡ್ ಫೆಸ್ಟ್' ಅಂತರ ಕಾಲೇಜು ರಸಪ್ರಶ್ನೆ ಕಾರ್ಯಕ್ರಮ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 7.30ರಿಂದ ಮಹಾ ಪಂಚಾಮೃತ ಅಭಿಷೇಕ, ಶ್ರೀ ಮದನಗೋಪಾಲಕೃಷ್ಣ ಮಹಾಯಾಗ, ಪುರುಷ ಸೂಕ್ತ ಹೋಮ, ಮನ್ಯು ಸೂಕ್ತ ಹೋಮ, ಬಳಿತ್ಥಾ ಸೂಕ್ತ ಹೋಮ, ವೃಷಭ ಸೂಕ್ತ ಹೋಮ, ಶ್ರೀ ರಾಘವೇಂದ್ರ ಅಷ್ಟಾಕ್ಷರ ಮಂತ್ರ ಹೋಮ, ಬೆಳಗ್ಗೆ 10.30ಕ್ಕೆ ಪೂರ್ಣಾಹುತಿ, ಮ. 12ಕ್ಕೆ ಶ್ರೀ ಗುರುರಾಯರಿಗೆ ಮಹಾಮಂಗಳಾರತಿ, 12.30ಕ್ಕೆ ತೀರ್ಥಪ್ರಸಾದ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಜಯಲಕ್ಷ್ಮಿಪುರಂ.

■ **ಶ್ರೀ ದಂಡಿನ ಮಾರಮ್ಮನವರ ಪೂಜಾ ಮಹೋತ್ಸವ ಸಮಿತಿ :** ಶ್ರೀ ಮನೆಮಂಚಮ್ಮ ಶ್ರೀ ದಂಡಿನ ಮಾರಮ್ಮ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ಶ್ರೀ ಕ್ಷೇತ್ರ ದಂಡಿನಮಾರಮ್ಮ ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಮೈಸೂರು ಆರ್ಟ್ ಗ್ಯಾಲರಿ :** ಕಲಾವಿದೆ ರಾಣಿ ಎಸ್. ನಾಗವಾಲ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ರಂಗಭೂಮಿ ಕಲಾವಿದೆ ಶ್ರೀಮತಿ ದೀಪಾ ರವಿಶಂಕರ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ

■ **ಮೈತ್ರಿ ಮೈಸೂರು ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಕೈಗಾರಿಕೋದ್ಯಮಿ ಆರ್. ಗುರು, ಅಧ್ಯಕ್ಷತೆ : ಪರಿವರ್ತನ ಸಂಸ್ಥೆ ಜಿ.ಎಸ್. ರಾಜೇಗೌಡ, ಮುಖ್ಯ ಅತಿಥಿಗಳು : ಪರಿಸರ ಸಂರಕ್ಷಣೆ ಮತ್ತು ಸಮುದಾಯ ಅಭಿವೃದ್ಧಿ ಎಸ್‌ಎಸ್‌ಟಿ ಹಿರಿಯ ನಿರ್ದೇಶಕ ಎನ್. ಮೋಹನ್ ಕಾರ್ನಟ್, ಫೆವಾಡ್–ಕೆ ಕಾರ್ಯದರ್ಶಿ ಭದ್ರೀಶ್, ಓಡಿಪಿ ಸಂಸ್ಥೆ ರೆ.ಫಾ. ಅಲೆಕ್ಸ್ ಪ್ರಶಾಂತ್ ಸಿಕ್ವೇರ, ಮೈತ್ರಿ ಖಜಾಂಚಿ ಶ್ರೀಮತಿ ಹೇಮಾವತಿ, ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ಶ್ರೀಮತಿ ಸರಸ್ವತಿ, ಸ್ಥಳ: ಕುಕ್ಕರಹಳ್ಳಿ ಸಮುದಾಯ ಭವನ, ಪ್ರತಿಭೆ ಸಂಸ್ಥೆ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಒಕ್ಕಲಿಗ ಆರಕ್ಷಕರ ಸೇವಾ ಟ್ರಸ್ಟ್ :** ಉದ್ಘಾಟನೆ ಮತ್ತು ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಶ್ರೀ ಕ್ಷೇತ್ರದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ : ನಿವೃತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕೆ.ಟಿ. ಬಾಲಕೃಷ್ಣ, ಅಧ್ಯಕ್ಷತೆ : ಒಕ್ಕಲಿಗ ಆರಕ್ಷಕರ ಸೇವಾ ಟ್ರಸ್ಟ್ ಅಧ್ಯಕ್ಷ ಧನಂಜಯ, ಮುಖ್ಯ ಅತಿಥಿಗಳು : ನಿವೃತ್ತ ಉಪ ಪೊಲೀಸ್ ಆಯುಕ್ತ ಬಿ.ಪಿ. ಸುರೇಶ್, ನಿವೃತ್ತ ಪೊಲೀಸ್ ಅಧೀಕ್ಷಕ ಶಂಕರೇಗೌಡ, ಸ್ಥಳ:ಶ್ರೀ ಆದಿಚುಂಚನಗಿರಿ ಶಾಖಾ ಹೊಸಮಠ, ಶ್ರೀ ಲಕ್ಷ್ಮೀಕಾಂತ ದೇವಸ್ಥಾನ, ಹೆಬ್ಬಾಳು, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಗ್ರಾಮೀಣ ಕರ್ನಾಟಕದಲ್ಲಿ ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿಯಲ್ಲಿ ಸಾಮಾಜಿಕ–ಆರ್ಥಿಕ ಮೌಲ್ಯಮಾಪನ ಕುರಿತು ರಾಷ್ಟ್ರೀಯ ಕಾರ್ಯಾಗಾರ, ಉದ್ಘಾಟನೆ : ಪ್ರಾಧ್ಯಾಪಕರಾದ ಪ್ರೊ. ಎಚ್.ಆರ್. ಉಮಾ, ಉಪಸ್ಥಿತರು : ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ನಿವೃತ್ತ ಜಂಟಿ ನಿರ್ದೇಶಕ ಡಾ. ಕೆ. ರಾಮೇಶ್ವರಪ್ಪ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ನಳ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ :** ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ : ಯೋಗ ತರಬೇತಿದಾರ ಜೆ. ಮಹದೇವ, ಸಂಜೆ 4ಕ್ಕೆ ಹಿರಿಯ ಪತ್ರಕರ್ತ ವಿ. ಚೇತನ್ ನರಸಿಂಹ ಅವರಿಂದ ಪ್ರಸ್ತುತ ವಿದ್ಯಮಾನಗಳಲ್ಲಿ ಸಾಮಾಜಿಕ ಜಾಲತಾಣದ ಮಹತ್ವ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಕರ್ನಾಟಕ ಸ್ಪೋರ್ಟ್ಸ್ ಫೆಡರೇಷನ್ ಆಫ್ ದಿ ಡೆಫ್‌ನ ಜೆ.ವಿ. ಮಹೇಶ್‌ವರ್ಮಾ, ಅಧ್ಯಕ್ಷತೆ : ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಮುಖ್ಯಸ್ಥ ಡಾ. ಎಸ್. ಉಮಾ, ಸ್ಥಳ:ಪಾಲಿಟೆಕ್ನಿಕ್ ಆವರಣ.

■ **ಮೈಸೂರು ವಿಶ್ವವಿದ್ಯಾನಿಲಯ ಬಟಾನಿಕಲ್ ಸೊಸೈಟಿ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ :** ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಉದ್ಘಾಟನೆ : ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಮಾಜಿ ಅಧ್ಯಕ್ಷ ಪ್ರೊ. ಎಂ. ಮುನಿಯಮ್ಮ, ಮುಖ್ಯ ಅತಿಥಿಗಳು : ಹಿರಿಯ ಪ್ರಾಧ್ಯಾಪಕ ಪ್ರೊ. ಜಿ.ಆರ್. ಜನಾರ್ದನ, ಗುಲಬರ್ಗಾ ವಿವಿ ವಿಶ್ರಾಂತ ಕುಲಪತಿ ಪ್ರೊ. ಈ.ಟಿ. ಈರಯ್ಯ, ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಮಾಜಿ ಅಧ್ಯಕ್ಷ ಪ್ರೊ. ಜಿ.ಆರ್. ಶಿವಮೂರ್ತಿ, ಸ್ಥಳ: ಲೆನಿಯಸ್ ಸಭಾಂಗಣ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮ. 3.30ಕ್ಕೆ

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ಕೆ. ಶಿವರಾಮ್ ಮತ್ತು ವಾಸು ಅವರಿಗೆ ನುಡಿನಮನ, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮೈಸೂರು ವಿವಿ ಕುಲಸಚಿವ ಡಾ. ಕೆ.ಎಂ. ಮಹದೇವನ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಡಾ. ವೈ.ಡಿ. ರಾಜಣ್ಣ, ಎಂ. ಶಿವಶಂಕರ್, ಎಸ್. ಮಹದೇವಮೂರ್ತಿ, ಎಂ.ಚಂದ್ರಶೇಖರ್, ಮಹದೇಶ್, ಡಾ. ಇ.ಸಿ. ನಿಂಗರಾಜೇಗೌಡ, ಪ್ರೊ. ಎಸ್. ಶಿವರಾಜಪ್ಪ, ಡಾ. ಹೆಚ್.ಪಿ. ಜ್ಯೋತಿ, ಪ್ರೊ. ಸಪ್ನ, ಉಮೇಶ್, ಸ್ಥಳ : ವಿವಿ ಸಂಜೆ ಕಾಲೇಜು ಮುಂಭಾಗ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ವಿ.ರಂಗನಾಥ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಬದ್ರಿಪ್ರಸಾದ್, ಶಮಿತಾ ಮಲ್ನಾಡ್, ಎಸ್. ಶ್ಯಾಮಸುಂದರ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಭಾಗವಹಿಸುವವರು ಪರಿಸರ ಪ್ರೀತಿಯ ಮನು, 10.00 ಅಕ್ಕರಿ ಸುಬ್ಬಲಕ್ಷ್ಮಿ –ಹಾಡುಗಾರಿಕೆ ಹಾಗೂ ವಯೋಲಿನ್ ವಾದನ

ಮಧ್ಯಾಹ್ನ: 12.35 ದೇವರನಾಮ, 2.45 ಜನಪದ ಸಂಗೀತ, 1.20 ಭಾವಗೀತೆ–ಎ.ಎನ್. ಶೀಲಾ, 3.30 ಮಕ್ಕಳ ಮಂಟಪ–ನಂಜನಗೂಡು ತಾಲೂಕ್ ಸೂರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ 'ಊರ್ಮಿಳ್', ರಚನೆ– ಗೀತಾ ಸೀತಾರಾಮ್, ನಿರ್ಮಾಣ–ಹೆಚ್.ಎಸ್.ಸರಸ್ವತಿ, 4.30 ನೆನಪಿನಂಗಳ–ಸಾಹಿತ್ಯ ಕ್ಷೇತ್ರದ ಹಿರಿಯ ಕಾದಂಬರಿಕಾರರು ಹಾಗೂ ಬರಹಗಾರರಾದ ಆರ್.ಕೆ. ನಾರಾಯಣ್ ಅವರೊಂದಿಗೆ ಪ್ರೊ.ಸಿ.ಡಿ. ನರಸಿಂಹಯ್ಯ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ–ಕಿಸಾನ್‌ವಾಣಿ, ಭವಿಷ್ಯದ ಸ್ಮಾರ್ಟ್ ಫುಡ್ 'ಸಿರಿಧಾನ್ಯಗಳು' ಕುರಿತು ಸಂವಾದ. ಭಾಗವಹಿ ಸುವವರು ಡಾ. ಕಮಲಾಬಾಯಿ ಕೂಡಾಗಿ ಹಾಗೂ ಸಾಕಮ್ಮ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಸಿ.ಎಸ್. ರಾಜೀವ್–ಹಾಡುಗಾರಿಕೆ

■ **ಚಂಪಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಚಂಪಕ ರಾಷ್ಟ್ರೀಯ ಕಲಾ ಉತ್ಸವ, ಬೆಂಗಳೂರು ಮತ್ತು ಮೈಸೂರು ಕಲಾವಿದರಿಂದ ಭರತನಾಟ್ಯ ಪ್ರದರ್ಶನ, ಚಂಪಕ ಅಕಾಡೆಮಿ ಸಂಸ್ಥಾಪಕರಾದ ವಿದುಷಿ ಡಾ. ನಾಗಲಕ್ಷ್ಮಿ ನಾಗರಾಜನ್ ಅವರಿಂದ ಆದಿ ಶಂಕರಚಾರ್ಯರ ಸಂಯೋಜನೆಯ 'ಶ್ರೀಮದ್ ಆದಿಶಂಕರರ ಕನಕಧಾರಾ' ಭರತನಾಟ್ಯ ಪ್ರದರ್ಶನ, ಉಪಸ್ಥಿತರು : ನಾಟ್ಯ ತರಂಗ ನೃತ್ಯಾಲಯದ ನಿರ್ದೇಶಕರಾದ ವಿದುಷಿ ವೀಣಾ ಗಂಗಾಧರ್, ಭರತಾಂಜಲಿ ನೃತ್ಯ ಮತ್ತು ಯೋಗ ಟ್ರಸ್ಟ್ ನಿರ್ದೇಶಕರಾದ ವಿದುಷಿ ಡಾ. ಶೀಲಾ ಶ್ರೀಧರ್, ಮುಖ್ಯ ಅತಿಥಿಗಳು : ಬಿ.ಎನ್. ಪ್ರಮೋದ್, ಡಾ. ಸುಷ್ಮಾ ಕೃಷ್ಣಮೂರ್ತಿ, ಸ್ಥಳ: ಚಂಪಕ ಸಭಾಂಗಣ, ರಾಮಕೃಷ್ಣನಗರ, ಸಂಜೆ 4.30ಕ್ಕೆ.

■ **ಲುಂಬಿನಿ ಪ್ರಕಾಶನ, ಚಳ್ಳಕೆರೆ, ಮೈಸೂರು ಗೆಳೆಯರು :** ಎಸ್.ಕೆ. ಮಂಜುನಾಥ್ ಅವರ ಗಾಳಿಯ ಎದೆಸೀಳಿ ಹೊರಟ ಹಕ್ಕಿ ಕವನ ಸಂಕಲನ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಸೇನಾನಿ, ಪುಸ್ತಕ ಕುರಿತು ಮಾತನಾಡುವವರು : ಕವಿ ಡಾ. ಆರ್. ತಾರಿಣಿ ಶುಭದಾಯಿನಿ, ಅಧ್ಯಕ್ಷತೆ : ಸಾಹಿತಿ ಜಿ.ಪಿ. ಬಸವರಾಜು, ಉಪಸ್ಥಿತರು : ಮೋದೂರು ತೇಜ, ಎಸ್.ಕೆ. ಮಂಜುನಾಥ್, ಸ್ಥಳ: ಆರ್.ಟಿ.ಎನ್. ದೇವೇಗೌಡ ಹಾಲ್, ರೋಟರಿ ಸಭಾಂಗಣ, ಮುಡಾ ಕಚೇರಿ ಎದುರು, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಅಭ್ಯುದಯ ಮಹಿಳಾ ಸಮಾಜ :** 29ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಜಿಪಂ ಸಿಇಓ ಶ್ರೀಮತಿ ಕೆ.ಎಂ. ಗಾಯತ್ರಿ, ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಶಾರದಮ್ಮ ಈಶ್ವರ್, ಅಧ್ಯಕ್ಷತೆ : ಅಭ್ಯುದಯ ಮಹಿಳಾ ಸಮಾಜದ ಶ್ರೀಮತಿ ಚನ್ನಮ್ಮ, ಸ್ಥಳ: ಡಾ. ಪುಟ್ಟರಾಜ ಗವಾಯಿಗಳ ಕ್ರೀಡಾಂಗಣ, ಜೆ.ಪಿ.ನಗರ, ಸಂಜೆ 5ಕ್ಕೆ.

■ **ರಾಗಾ ಮ್ಯೂಸಿಕ್ ಅಕಾಡೆಮಿ :** 96ನೇ ಸಂಗೀತ ಕಛೇರಿ, ವಿದ್ವಾನ್ ಅನೀಶ್ ವಿ. ಭಟ್ ಅವರಿಂದ ಶಾಸ್ತ್ರೀಯ ವಾದನ, ವಿದ್ವಾನ್ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ವಿಕ್ರಂ ಭಾರದ್ವಾಜ್ – ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 6ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ :** ಹಿರಿಯ ಯೋಗಾಚಾರ್ಯ ಡಾ. ಪಿ.ಎನ್. ಗಣೇಶ್ ಕುಮಾರ್ ಅವರ 60ರ ಸಂಭ್ರಮ, ಉದ್ಘಾಟನೆ : ಹಿರಿಯ ಯೋಗಾಚಾರ್ಯ ಎಸ್.ವಿ. ವೆಂಕಟೇಶಯ್ಯ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗಪ್ರಕಾಶ್, ಆಶಯ ನುಡಿ : ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ. ಜಲೇಂದ್ರಕುಮಾರ್, ಮುಖ್ಯ ಅತಿಥಿಗಳು : ಡಾ. ಕೆ. ರಘುರಾಂ ವಾಜಪೇಯಿ, ಡಾ. ಕೆ. ಲೀಲಾ ಪ್ರಕಾಶ್, ಬಿ.ವಿ. ಮಂಜುನಾಥ್, ಡಾ. ಎ. ಶಶಿರೇಖಾ, ಸ್ಥಳ: ಕನ್ನಡ ಸಾಹಿತ್ಯ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ತಿಂಗಳ ಸಂಗೀತ ಕಾರ್ಯಕ್ರಮ, ವಿದ್ವಾನ್ ವಿವೇಕ್ ಸದಾಶಿವಂ ಅವರಿಂದ ಗಾಯನ, ವಿದುಷಿ ಸಿಂಧು ಸುಚೇತನ್–ಪಿಟೀಲು, ವಿದ್ವಾನ್ ಸಾಯಿಶಿವು ಲಕ್ಷ್ಮೀಕೇಶವ್–ಮೃದಂಗ, ವಿದ್ವಾನ್ ಶಮಿತ್ ಎಸ್.ಗೌಡ–ಘಟಂ, ಸ್ಥಳ: ಶ್ರೀ ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದ ಆವರಣ, ವಿ.ವಿ. ಮೊಹಲ್ಲಾ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ಶ್ರೀಮತಿ ಶೃತಿರಂಜನಿ ಎಂ.ಟಿ. ಮತ್ತು ಶ್ರೀಮತಿ ಬಿಂದುಮಾಲಿನಿ ಎಂ.ಟಿ. ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ದ್ವಂದ್ವ ಗಾಯನ, ವಿದ್ವಾನ್ ತಾಂಡವಮೂರ್ತಿ –ಪಿಟೀಲು, ವಿದ್ವಾನ್ ಜಿ.ಟಿ. ಸ್ವಾಮಿ –ಮೃದಂಗ, ಸ್ಥಳ: ಶ್ರೀರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಭಾರತೀಯ ವಿದ್ಯಾಭವನ, ಮೈಸೂರು ಕೇಂದ್ರ, ಇನ್ಫೋಸಿಸ್ ಫೌಂಡೇಷನ್ :** ತಿಂಗಳ ಸಂಗೀತ ಕಾರ್ಯಕ್ರಮ, ವಿದುಷಿ ಸ್ಫೂರ್ತಿರಾವ್ ಅವರಿಂದ ಭಕ್ತಿ ಸಂಗೀತ, ಸಿ.ವಿ. ಶ್ರುತಿ–ವಯೋಲಿನ್, ಅದುತುರೈ ಜಿ. ಗುರುಪ್ರಸಾದ್–ಮೃದಂಗ, ಸ್ಥಳ: ಭಾರತೀಯ ವಿದ್ಯಾಭವನ ಆವರಣ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 189ನೇ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಸಂಜೆ 5.30 ರಿಂದ ಸಂಧ್ಯಾರತಿ, ಸಂಜೆ 5.45 ರಿಂದ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆ ನಿವೃತ್ತ ಪ್ರಾಧ್ಯಾಪಕ ಎಸ್.ಎಸ್. ರಮೇಶ್ ಅವರಿಂದ ಆಧ್ಯಾತ್ಮಿಕ ಪರಂಪರೆಯ ವಿಶ್ವಗುರು–ಶ್ರೀರಾಮಕೃಷ್ಣ ಪರಮಹಂಸರು ಕುರಿತು ಕನ್ನಡದಲ್ಲಿ ಪ್ರವಚನ, ಸಂಜೆ 6.45 ರಿಂದ ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ತಂಡದವರಿಂದ ಭಕ್ತಿ ಸಂಗೀತ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ರಂಗಾಯಣ :** ವಾರಾಂತ್ಯ ರಂಗ ಪ್ರದರ್ಶನ, ರಂಗಾಯಣದ ರೆಪರ್ಟರಿ ಕಲಾವಿದರಿಂದ ಸಿ. ಬಸವಲಿಂಗಯ್ಯನವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ಗೋರ್‌ಮಾಟ ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ ಸಂಜೆ 6.30ಕ್ಕೆ.

ಹಾರೋಹಳ್ಳಿ ಗ್ರಾಮ (ಮೈಸೂರು ತಾಲೂಕು)

■ **ಮೈಸೂರು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ: ಗ್ರಾಮದ ಮುಖಂಡ ಸುಂದರೇಶ್, ಬೆಳಗ್ಗೆ 10 ರಿಂದ ವೈದ್ಯಕೀಯ ತಪಾಸಣಾ ಶಿಬಿರ, ಕೆ.ಹೆಚ್. ರಾಮಯ್ಯ ವಿದ್ಯಾರ್ಥಿ ನಿಲಯದ ಧರ್ಮದರ್ಶಿ ಕೆ.ಟಿ. ಕೃಷ್ಣಪ್ಪ ಅವರಿಂದ ವಿದ್ಯಾರ್ಥಿ ಮತ್ತು ಸಮಾಜ ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಾರೋಹಳ್ಳಿ ಗ್ರಾಪಂ ಸದಸ್ಯ ರೇವಣ್ಣ, ಮುಖ್ಯ ಅತಿಥಿಗಳು : ಹಾರೋಹಳ್ಳಿ ಡೈರಿ ಸಂಘದ ಅಧ್ಯಕ್ಷ ಬೀರಪ್ಪ, ಗ್ರಾಮದ ಮುಖಂಡರಾದ ಸರಗೂರು ಮಹದೇವಪ್ಪ, ರವಿ, ಮಹದೇವಸ್ವಾಮಿ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾರೋಹಳ್ಳಿ ಗ್ರಾಮ, ಮೈಸೂರು ತಾಲೂಕು, ಸಂಜೆ 4.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 16 ಶನಿವಾರ 2024

ಸಂಪುಟ: 44 | ಸಂಚಿಕೆ: 327 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದು ಲೋಕ ಸಮರ ಫಿಕ್ಸ್

● ನವದೆಹಲಿಯ ವಿಗ್ಯಾನ್ ಭವನದಲ್ಲಿ ಇಂದು (ಶನಿವಾರ) ಮಧ್ಯಾಹ್ನ ಕೇಂದ್ರ ಚುನಾವಣಾ ಆಯೋಗದ ಪತ್ರಿಕಾಗೋಷ್ಠಿ ● ಕರ್ನಾಟಕದ 28 ಸೇರಿ ಲೋಕಸಭಾ 543 ಕ್ಷೇತ್ರಗಳಿಗೆ ಚುನಾವಣಾ ವೇಳಾ ಪಟ್ಟಿ ಪ್ರಕಟ; ತಕ್ಷಣದಿಂದಲೇ ನೀತಿ ಸಂಹಿತೆ ಜಾರಿ ● 2019ರಲ್ಲಿ ಮಾ.10ರಂದು ವೇಳಾಪಟ್ಟಿ ಪ್ರಕಟಗೊಂಡಿತ್ತು; ಕರ್ನಾಟಕದಲ್ಲಿ ಎರಡು; ರಾಷ್ಟ್ರದಲ್ಲಿ 7 ಹಂತದಲ್ಲಿ ಮತದಾನ ನಡೆದಿತ್ತು ● ಇಬ್ಬರು ಆಯುಕ್ತರ ನೇಮಕ ವಿಚಾರದಲ್ಲಿ ಐದು ದಿನ ತಡವಾಗಿ ವೇಳಾಪಟ್ಟಿ ಪ್ರಕಟಗೊಳ್ಳುತ್ತಿದೆ ● ಆದರೂ ಮೇ ಅಂತ್ಯಕ್ಕೆ ಪ್ರಕ್ರಿಯೆ ಪೂರ್ಣ: ಹಾಲಿ ಲೋಕಸಭಾ ಅವಧಿ ಜೂನ್ 16ಕ್ಕೆ ಅಂತ್ಯ

ನವದೆಹಲಿ, ಮಾ. 15– ಕರ್ನಾಟಕದ 28 ಸೇರಿದಂತೆ ರಾಷ್ಟ್ರದ 543 ಲೋಕಸಭಾ ಕ್ಷೇತ್ರಗಳಿಗೆ ನಾಳೆ ಶನಿವಾರ ಕೇಂದ್ರ ಚುನಾವಣಾ ಆಯೋಗ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಿದೆ. ಆ ಕ್ಷಣದಿಂದಲೇ ಮಾದರಿ ನೀತಿ ಸಂಹಿತೆ ಜಾರಿಗೆ ಬರಲಿದೆ.

ಚುನಾವಣಾ ಆಯೋಗಕ್ಕೆ ಹೊಸದಾಗಿ ಇಬ್ಬರು ಚುನಾವಣಾ ಆಯುಕ್ತರು ನೇಮಕಗೊಳ್ಳುತ್ತಿದ್ದಂತೆ ಲೋಕಸಭಾ ಚುನಾವಣೆಗೆ ಅಧಿಸೂಚನೆ ಹೊರಡಿಸಲು ಆಯೋಗ ಮುಂದಾಗಿದೆ. ಪ್ರಸ್ತುತ ಲೋಕಸಭಾ ಅವಧಿ ಜೂನ್ 16ಕ್ಕೆ ಕೊನೆಗೊಳ್ಳಲಿದ್ದು, ಅದಕ್ಕೂ ಮುನ್ನ ಹೊಸ ಸದನ ರಚನೆ ಆಗಬೇಕಿದೆ. 2019ರಲ್ಲಿ ಲೋಕಸಭಾ ಚುನಾವಣೆಗೆ ಮಾರ್ಚ್ 10ರಂದು ಅಧಿಸೂಚನೆ ಹೊರಡಿಸಿ, ಮೇ 27ಕ್ಕೆ ಪ್ರಕ್ರಿಯೆ ಪೂರ್ಣಗೊಂಡಿತ್ತು. ಆದರೆ ಈ ಬಾರಿ ಇಬ್ಬರು ಚುನಾವಣಾ



ಆಯುಕ್ತರ ನೇಮಕಾತಿ ಹಿನ್ನೆಲೆಯಲ್ಲಿ ಐದು ದಿನ ತಡವಾಗಿ ಚುನಾವಣಾ ದಿನಾಂಕ ಘೋಷಣೆಯಾಗುತ್ತಿದೆ. ಇಷ್ಟಾದರೂ ಪ್ರಕ್ರಿಯೆಯನ್ನು ಮೇ ಅಂತ್ಯಕ್ಕೆ ಮುಗಿಸಿ, ಹೊಸ ಸರ್ಕಾರದ ಅಸ್ತಿತ್ವಕ್ಕೆ ಅವಕಾಶ ಮಾಡಿಕೊಡಬೇಕಿದೆ.

ಕಳೆದ ಚುನಾವಣೆಯಲ್ಲಿ ರಾಷ್ಟ್ರಾದ್ಯಂತ ಏಳು ಹಂತಗಳಲ್ಲಿ ಚುನಾವಣೆ ನಡೆದಿತ್ತು. ಕರ್ನಾಟಕದ 28 ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಅಂದರೆ, ಏಪ್ರಿಲ್ 18 ಹಾಗೂ 23 ರಂದು ಮತದಾನ ನಡೆದಿತ್ತು.

ರಾಜ್ಯದಲ್ಲಿ ಏಪ್ರಿಲ್ 23ಕ್ಕೆ ಮತದಾನ ಮುಗಿದಿದ್ದರೂ ಫಲಿತಾಂಶಕ್ಕಾಗಿ ಅಭ್ಯರ್ಥಿಗಳು ಒಂದು ತಿಂಗಳು ಕಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಕಳೆದ ಬಾರಿ ಮೇ 19 ರಂದು ಮತದಾನ ಅಂತ್ಯಗೊಂಡು, ಮೇ 23 ರಂದು ಆಯೋಗ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಿತ್ತು. ಕರ್ನಾಟಕದ ಮಟ್ಟಿಗೆ 28 ಕ್ಷೇತ್ರಗಳ ಪೈಕಿ ಬಿಜೆಪಿ 27ರಲ್ಲಿ ಸ್ಪರ್ಧಿಸಿ 25 ಕ್ಷೇತ್ರಗಳನ್ನು ಬುಟ್ಟಿಗೆ ಹಾಕಿಕೊಂಡಿತ್ತು, ಒಟ್ಟಾರೆ ರಾಜ್ಯದ ಜನತೆ ಬಿಜೆಪಿಗೆ ಶೇ.51.75ರಷ್ಟು ಮತ ಚಲಾಯಿಸಿದ್ದರು.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಸುಮಲತಾ ಅಂಬರೀಶ್ ● 7ನೇ ಪುಟಕ್ಕೆ

ಮಂಡ್ಯದಿಂದ ನಿಖಿಲ್ ಸ್ಪರ್ಧೆ ಸುಳಿವು

● ಮಾ.24ರ ನಂತರ ಅಧಿಕೃತ ಘೋಷಣೆ ● ಮಂಡ್ಯದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ನಿಖಿಲ್ ಇಲ್ಲವೆ ಕುಮಾರಸ್ವಾಮಿ ಸ್ಪರ್ಧೆಗೆ ಭಾರೀ ಒತ್ತಡ



ಮಂಡ್ಯ, ಮಾ.15–ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ಬಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸುಳಿವು ನೀಡಿದ್ದಾರೆಯಾದರೂ, ಮಾ.24ರ ನಂತರ ಅಧಿಕೃತವಾಗಿ ಅಭ್ಯರ್ಥಿಯನ್ನು ಘೋಷಿಸುವುದಾಗಿ ತಿಳಿಸಿದ್ದಾರೆ.

ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಸಂಬಂಧ ತಮ್ಮ ಅಧ್ಯಕ್ಷತೆಯಲ್ಲಿ ಮಂಡ್ಯದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಕರೆಯಲಾಗಿದ್ದ ಜೆಡಿಎಸ್ ಕಾರ್ಯಕರ್ತರ ಪೂರ್ವಭಾವಿ ಸಭೆಗೆ ಕುಮಾರಸ್ವಾಮಿ ಆಗಮಿಸುತ್ತಿದ್ದಂತೆಯೇ ಕಾರ್ಯಕರ್ತರು ಮಂಡ್ಯದಲ್ಲಿ ಕುಮಾರಸ್ವಾಮಿ ಅಥವಾ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಬೇಕೆಂದು ಘೋಷಣೆ ಕೂಗಿದರು. ಸಭೆಯಲ್ಲಿ ಯಾವುದೇ ಮುಖಂಡರು ಮಾತನಾಡಲು ಅವಕಾಶ ಕೊಡದ ಕಾರ್ಯಕರ್ತರು, ಸತತವಾಗಿ ಕುಮಾರಸ್ವಾಮಿ ಅಥವಾ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಬೇಕೆಂದು ಮುಗಿಲು ಮುಟ್ಟುವಂತೆ ಘೋಷಣೆ ಕೂಗುತ್ತಲೇ ಇದ್ದರು.

ಈ ವೇಳೆ ಮಧ್ಯ ● 7ನೇ ಪುಟಕ್ಕೆ

ಐದು ವರ್ಷವೂ 'ಗ್ಯಾರಂಟಿ' ಕೊಡ್ತೀವಿ...

● ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ● ಗ್ಯಾರಂಟಿಗಳ ಮೈಸೂರು ಜಿಲ್ಲಾ ಮಟ್ಟದ ಸಮಾವೇಶ



ಮೈಸೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಜಿಲ್ಲಾ ಫಲಾನುಭವಿಗಳ ಸಮಾವೇಶವನ್ನು ವಿವಿಧ ಯೋಜನೆಗಳ ಮಹಿಳಾ ಫಲಾನುಭವಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಡಿ.ರವಿಶಂಕರ್, ಅನಿಲ್ ಚಿಕ್ಕಮಾದು, ಎ.ಆರ್.ಕೃಷ್ಣಮೂರ್ತಿ, ಎಂಎಲ್‌ಸಿಗಳಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಮಾ.15(ಎಸ್‌ಬಿಡಿ)–ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳು ಐದೂ ವರ್ಷಗಳ ಕಾಲ ಚಾಲ್ತಿಯಲ್ಲಿರಲಿದ್ದು, ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವ ಮೂಲಕ ಮತ್ತಷ್ಟು ಶಕ್ತಿ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಮೈಸೂರು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಸರ್ಕಾರದ ಗ್ಯಾರಂಟಿಗಳ ಮೈಸೂರು ಜಿಲ್ಲಾ ಫಲಾನುಭವಿಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಇದು ರಾಜಕೀಯ ಸಭೆಯಲ್ಲ. ಆದರೆ ಗ್ಯಾರಂಟಿ ಘೋಷಣೆ ದಿನದಿಂದ ಬಿಜೆಪಿಯ ವರು ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಹಾಗಾಗಿ ಜನರಿಗೆ ವಸ್ತುಸ್ಥಿತಿ ತಿಳಿಸುವ ಉದ್ದೇಶದಿಂದ ಸರ್ಕಾರದ ವತಿಯಿಂದಲೇ ಎಲ್ಲಾ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಗ್ಯಾರಂಟಿ ಫಲಾನುಭವಿಗಳ ಸಮಾವೇಶ ನಡೆಸಲಾಗಿದೆ. ಬಿಜೆಪಿಯವರು ಗ್ಯಾರಂಟಿ ಘೋಷಣೆ ನಂತರ ಏನೆಲ್ಲಾ ಮಾತನಾಡಿದರು. ಪ್ರಧಾನಿ ಮೋದಿ, ವಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ● 10ನೇ ಪುಟಕ್ಕೆ

ಮೈಸೂರು ನಗರಕ್ಕೂ ಬಿಜೆಪಿ ಕೊಡುಗೆ ಶೂನ್ಯ

ನಾನು ಸಿಎಂ ಆಗಿ ಮೈಸೂರು ನಗರದಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಬಿಟ್ಟರೆ ಬಿಜೆಪಿಯವರು ಏನನ್ನೂ ಮಾಡಿಲ್ಲ. ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಕುಸಿದು ಸಮಸ್ಯೆಯಾಗಿತ್ತು. ಅದಕ್ಕಾಗಿ ಈ ವರ್ಷ ಬಜೆಟ್‌ನಲ್ಲಿ 56 ಕೋಟಿ ರೂ. ನೀಡಿದ್ದೇನೆ. ಎರಡು ಹಾಸ್ಟೆಲ್ ನಿರ್ಮಾಣಕ್ಕೆ 116 ಕೋಟಿ ಘೋಷಣೆ ಮಾಡಲಾಗಿದೆ. ಕಿದ್ವಾಯಿ ಆಸ್ಪತ್ರೆ, ನ್ಯೂರಾಲಜಿಗೂ ನಾನೇ ಹಣ ಬಿಡುಗಡೆ ಮಾಡಿದ್ದೇನೆ. ಮೆಡಿಕಲ್ ಕಾಲೇಜು ಶತಮಾನೋತ್ಸವದ ಹಿನ್ನೆಲೆಯಲ್ಲಿ 85 ಕೋಟಿ ವೆಚ್ಚದಲ್ಲಿ ಹೊಸ ಓಪಿಡಿ ಮಾಡುತ್ತಿದ್ದೇವೆ. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆಗೆಗೂ ಅನುದಾನ ಘೋಷಣೆ ಮಾಡಿದ್ದೇನೆ. ಕಾಂಗ್ರೆಸ್ ಸರ್ಕಾರ ಮಾತ್ರ ನಗರದ ಅಭಿವೃದ್ಧಿಗೆ ಸಾಕಷ್ಟು ಯೋಜನೆಗಳನ್ನು ತಂದಿದೆ. ನಮ್ಮ ಸರಕಾರ ಬಂದ ಕೂಡಲೇ ನಾಗಮೋಹನ್ ದಾಸ್ ಆಯೋಗ ರಚನೆ ಮಾಡಿ, 40 ಪರ್ಸೆಂಟ್ ಕಮಿಷನ್ ಬಗ್ಗೆ ತನಿಖೆ ಕೈಗೊಂಡಿದೆ. ಇದನ್ನು ಸಹಿಸದ ಬಿಜೆಪಿಯವರು ನಮ್ಮ ವಿರುದ್ಧವೂ ಆರೋಪ ಮಾಡಿದರು. ಆದರೆ, ಅವರಿಗೆ ಸಾಕ್ಷಿ ಕೊಡಲು ಸಾಧ್ಯವಾಗಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ಹರಿಹಾಯ್ದರು.

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : ಮಕ್ಕಳೇ, ಇಂದು ನಾನು ಹೇಳುವ ಪಾಠ ಬಹಳ ಮಹತ್ವದ್ದು. ಆದ್ದರಿಂದ ನೀವೆಲ್ಲರೂ ಲಕ್ಷ್ಯಕೊಟ್ಟು ಕೇಳಬೇಕು.

ವಿದ್ಯಾರ್ಥಿಯೋರ್ವ : ಸಾರ್ ನಿಮ್ಮ ಆ ಮಹತ್ವದ ಪಾಠವನ್ನು ನಾವು 'ಲಕ್ಷ' ಕೊಟ್ಟು ಕೇಳಬೇಕೆ?"

ಮೈಸೂರು ಮಿತ್ರ

ಶನಿವಾರ, 16 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಮನುಷ್ಯರು ಹುಟ್ಟಿನಿಂದಲೇ ಮಹಾನ್ ವ್ಯಕ್ತಿಗಳಾಗಿರುವುದಿಲ್ಲ. ತಮ್ಮ ಕರ್ಮ ಫಲದಿಂದ ಮಹಾನ್ ವ್ಯಕ್ತಿಗಳಾಗುತ್ತಾರೆ. – ಭಗವಾನ್ ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಗುಣಿತ ಬಾರದವನಿಗೆ ಕಾವ್ಯದ ಗೊಡವೆ ಏಕೆ?

ನಿಮ್ಮ ಪತ್ರಗಳು

ಶ್ರೀನಿವಾಸ್ ಪ್ರಸಾದ್ ಕಳಂಕರಹಿತ ರಾಜಕಾರಣಿ

ಮಾನ್ಯರೆ,

ಸಂಸದ ವಿ.ಶ್ರೀನಿವಾಸ ಪ್ರಸಾದ್ ತಮ್ಮ ಐವತ್ತು ವರ್ಷಗಳ ಸುದೀರ್ಘ ರಾಜಕೀಯ ಜೀವನಕ್ಕೆ ಅಂತ್ಯವಾಡಲು ಕ್ಷಣಗಣನೆ ಆರಂಭವಾಗಿದೆ. ಸಂಸದರಾಗಿ, ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ, ಶಾಸಕರಾಗಿ, ರಾಜ್ಯದಲ್ಲಿ ಕಂದಾಯ ಮಂತ್ರಿಯಾಗಿ ರಾಜಕೀಯ ಸ್ಥಿತ್ಯಂತರದಿಂದ ಕೊನೆಯ ಅವಧಿಯಲ್ಲಿ ಬಿಜೆಪಿ ಸಂಸದರಾಗಿ ಸ್ವಯಂ ನಿವೃತ್ತಿ ಹೊಂದುತ್ತಿದ್ದಾರೆ. ಇವರ ರಾಜಕೀಯ ಬದುಕು ಕಬ್ಬಿಣದ ಕಡಲೆಯಾಗಿತ್ತು. ಆದರೂ ಛಲದಂಕ ಮಲ್ಲನಂತೆ ದಿಟ್ಟತನದಿಂದ ಸಮಸ್ಯೆಗಳನ್ನು ಎದುರಿಸಿ ರಾಜಕೀಯದಲ್ಲಿ ಏಳುಬೀಳು ಕಂಡವರು. ತಮಗೆ ಮತ್ತು ತಮ್ಮ ಸಮುದಾಯಕ್ಕೆ ಅನ್ಯಾಯವಾದಾಗ ಸ್ವಪಕ್ಷ, ವಿಪಕ್ಷ ಎನ್ನದೆ ನ್ಯಾಯದ ಪರ ನಿಲ್ಲುತ್ತಿದ್ದರು. ಇವರ ಜೀವನದಲ್ಲಿ ಮತ್ತಷ್ಟು ಕಿಚ್ಚು ಹೊತ್ತಿಸಿದ್ದು ಬದನವಾಳುವಿನ ಘಟನೆ. ಹಳೆ ಮೈಸೂರು ಭಾಗದಲ್ಲಿ ಇಂದಿಗೂ ಪ್ರಸಾದ್ ಎಂದರೆ ಒಂದು ದಲಿತ ಶಕ್ತಿ ಎಂದು ಬಿಂಬಿತವಾಗಿದೆ. ಅದು ನಿಜವು ಹೌದು. ಅದಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಅವರು ಪಡೆದ 1.66ಲಕ್ಷ ಮತಗಳೇ ಸಾಕ್ಷಿ. ಪ್ರಸಾದ್ ಸಮುದಾಯ ಭವನಗಳ ಜನಕ ಎಂದರೆ ತಪ್ಪಾಗಲಾರದು. ತಮ್ಮ ವಿರುದ್ಧ ಟೀಕೆಗಳು ಕೇಳಿಬಂದಾಗ ಮುಖ್ಯಮಂತ್ರಿ, ಪ್ರಧಾನಿ ಹಾದಿಯಾಗಿ ಯಾರನ್ನು ಬಿಟ್ಟವರಲ್ಲ. ಇವರ ರಾಜಕೀಯ ಜೀವನ ಯಾವುದೇ ಭ್ರಷ್ಟಾಚಾರ, ದುರಾಡಳಿತವಿಲ್ಲದೆ ಕಳಂಕ ರಹಿತವಾಗಿ ನಡೆದು ಬಂದು ಶುದ್ದ ಹಸ್ತರಾಗಿ ನಿವೃತ್ತಿ ಹೊಂದುತ್ತಿದ್ದಾರೆ. ಇವರ ಬದುಕು ಇತರರಿಗೂ ಆದರ್ಶ. ಮುತ್ಸದಿ, ಮಾದರಿ ರಾಜಕಾರಣಿಗಳಲ್ಲಿ ಪ್ರಸಾದ್ ಕೂಡ ಒಬ್ಬರು. ಕಂದಾಯ ಸಚಿವರಾಗಿದ್ದ ಇವರನ್ನು ಸಂಪುಟದಿಂದ ತೆಗೆದುಹಾಕಿದಾಗ ನಂಜನಗೂಡು ವಿಧಾನಸಭಾ ಚುನಾವಣೆಯಲ್ಲಿ ಸೋಲಿಸಿದಾಗ ದಲಿತ ಸಮುದಾಯ ಪ್ರಸಾದ್‌ಗೆ ಆದ ಅವಮಾನವನ್ನು ಚಾಮರಾಜನಗರ ಲೋಕಸಭಾ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ಸೇಡು ತೀರಿಸಿಕೊಂಡಿತು. ಈ ಗೆಲುವಿನೊಂದಿಗೆ ರಾಜಕೀಯ ಜೀವನಕ್ಕೆ ಪೂರ್ಣ ವಿರಾಮ ಹೇಳುತ್ತಿರುವ ಪ್ರಸಾದ್ ಅವರ ಜೀವನ ಸುಖಮಯವಾಗಿರಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ಎಪಿಎಲ್ ಕಾರ್ಡಿನವರಿಗೆ ಪಡಿತರವಿಲ್ಲವೇ?

ಮಾನ್ಯರೆ,

ನಾನೊಬ್ಬ APL ಪಡಿತರ ಚೀಟಿಯನ್ನು ಹೊಂದಿರುವ ಭಾರತೀಯ ಪ್ರಜೆ. ಹಲವಾರು ಕಾರಣಗಳಿಂದ ಎರಡು ವರ್ಷಗಳಿಂದ ಪಡಿತರ ತೆಗೆದುಕೊಳ್ಳಲು ಆಗಲಿಲ್ಲ. ಈ ದಿನ ಮೈಸೂರು ಜಯನಗರದಲ್ಲಿರುವ ನಮ್ಮ ನ್ಯಾಯಬೆಲೆ ಅಂಗಡಿಗೆ ಹೋಗಿ ವಿಚಾರಿಸಿದರೆ, ಎಪಿಎಲ್ ಕಾರ್ಡ್‌ದಾರರಿಗೆ ಮೂರು ತಿಂಗಳಿಂದ ಪಡಿತರ ನಿಲ್ಲಿಸಿದ್ದಾರೆ. ನನ್ನಲ್ಲಿ ಇನ್ನೂ APL ಕಾರ್ಡ್‌ದಾರರ 160 ಕೆಜಿ ಅಕ್ಕಿಯಿದೆ. ಗಣಕಯಂತ್ರ ತಗೊಳ್ಳುತ್ತಿಲ್ಲ. ಅದರಿಂದ ಕೊಡಲು ಆಗುವುದಿಲ್ಲ ಎಂದು ಮಾಲೀಕರು ಹೇಳಿದರು. ಅಲ್ಲಾ ಸ್ವಾಮಿ ಎಪಿಎಲ್ ಕಾರ್ಡ್‌ನವರು ಪ್ರಜೆಗಳಲ್ಲವೇ? ಅವರಿಗೆ ಸವಲತ್ತುಗಳು ಬೇಡವೇ? ಅವರು ಮನುಷ್ಯರಲ್ಲವೇ? APLನವರ ವೋಟುಗಳು ಮಾತ್ರವೇ ಬೇಕು, ಸೌಲಭ್ಯ ಬೇಡವೇ? ಅವರನ್ನು ಎರಡನೇ ದರ್ಜೆ ನಾಗರಿಕರ ತರ ಕಾಣುವುದು ಎಷ್ಟು ಸರಿ. ಈ ಕೂಡಲೇ ತೊಗಲಕ್ ಮಾದರಿ ಹುಕುಂ ಅನ್ನು ವಾಪಸ್ಸು ತೆಗೆದುಕೊಳ್ಳಲಿ. ಸ್ಥಳೀಯ ಶಾಸಕರು ಇಂತಹ ವಿಷಯವನ್ನು ಮುತುವರ್ಜಿಯಾಗಿ ಗಮನಿಸಬೇಕು.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು.

ಅರಮನೆಯಿಂದ ಪಾರ್ಲಿಮೆಂಟ್ ಕಡೆಗೆ

ಮಾನ್ಯರೆ,

2024ರ ಲೋಕಸಭಾ ಚುನಾವಣೆಯ ಕಾವು ಹೇರುತ್ತಿದ್ದು, ಈಗಾಗಲೇ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಸಜ್ಜಾಗುತ್ತಿವೆ. ಅದರಂತೆ ಮೈಸೂರು ಲೋಕಸಭಾ ಕ್ಷೇತ್ರಕ್ಕೆ ಯಾರು ಅಂತಿಮ ಅಭ್ಯರ್ಥಿಯಾಗಲಿದ್ದಾರೆ ಎಂಬ ಕುತೂಹಲದ ಪ್ರಶ್ನೆಗೆ ಉತ್ತರವಾಗಿ ಮೈಸೂರಿನ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಒಡೆಯರ್ ಅವರನ್ನು ಅರಮನೆಯಿಂದ ಪಾರ್ಲಿಮೆಂಟ್ ಕಡೆಗೆ ಕಳುಹಿಸಲು ಬಿಜೆಪಿ ತೀರ್ಮಾನಿಸಿದೆ. ನಮ್ಮ ಸಂವಿಧಾನವು ರಾಜರಿಗೂ ರಾಜಕಾರಣ ಮಾಡಿ ಉತ್ತಮ ಕೆಲಸ ಮಾಡುವ ಅವಕಾಶವನ್ನು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಸಂವಿಧಾನ ನೆರವಾಗಿದೆ. ಒಂದು ವೇಳೆ ಗೆಲುವು ಇವರಾದರೇ ಸಂವಿಧಾನದ ಬದ್ಧತೆಯಿಂದ ಸಂವಿಧಾನಕ್ಕೆ ಋಣಿಯಾಗಿ ಜನಸೇವೆ ಮಾಡುವಂತಾಗಲಿ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ.

ಸಿವಿ ರಸ್ತೆಯಲ್ಲಿ ಭಾರೀ ವಾಹನಗಳ ಸಂಚಾರ ನಿಷೇಧಿಸಿ

ಮಾನ್ಯರೆ,

ಮೈಸೂರಿನ ಸಿವಿ ರಸ್ತೆಯ 4ನೇ ಕ್ರಾಸ್‌ನಲ್ಲಿ ವಾಸದ ಮನೆಗಳಿದ್ದು, ಈ ರಸ್ತೆಯಲ್ಲಿ ಭಾರೀ ಟ್ರಕ್ ವಾಹನಗಳು ದಿನದ 24 ಗಂಟೆಯೂ ಸಂಚರಿಸುತ್ತವೆ. ಭಾರೀ ವಾಹನಗಳ ಓಡಾಟದಿಂದ ಅತಿಯಾದ ಧೂಳು, ಶಬ್ದ ಮಾಲಿನ್ಯದಿಂದ ನೆಮ್ಮದಿಯಾಗಿ ವಾಸ ಮಾಡಲು ಆಗುತ್ತಿಲ್ಲ. ಅಲ್ಲದೆ, ನಾವು ಬಳಸುವ ವಾಹನಗಳನ್ನು ನಮ್ಮ ಮನೆಗಳ ಮುಂದೆ ನಿಲುಗಡೆ ಮಾಡಲು ಸ್ಥಳಾವಕಾಶವಿಲ್ಲದೆ ಪ್ರತಿನಿತ್ಯ ಕಿರಿಕಿರಿ ಉಂಟಾಗುತ್ತಿದೆ. ಈ ಸಂಬಂಧ ಸಂಚಾರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕೂಡಲೇ ಈ ರಸ್ತೆಯಲ್ಲಿ ಭಾರಿ ಟ್ರಕ್ ವಾಹನ ಸಂಚಾರ ನಿಷೇಧಿಸಬೇಕೆಂದು ಈ ಮೂಲಕ ಮನವಿ. **–ನೊಂದ ನಿವಾಸಿಗಳು, ಮೈಸೂರು.**

ಸಿಗರೇಟ್ ಅಂಗಡಿ ತೆರವಿಗೆ ಮನವಿ

ಮಾನ್ಯರೆ,

ಶಾಲಾ ಕಾಲೇಜುಗಳ ಸುತ್ತಮುತ್ತ 100 ಮೀಟರ್ ಅಂತರದಲ್ಲಿ ಬೀಡಿ ಸಿಗರೇಟ್ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಬಾರದು ಎಂಬ ನಿಯಮ ಬಹಳ ವರ್ಷಗಳಿಂದಲೂ ಇದೆ. ಮಾರಾಟ ಮಾಡಿದರೆ ದಂಡ ತೆರಬೇಕಾಗುತ್ತದೆ ಎಂಬ ಬೋರ್ಡ್‌ಗಳು ಕೇವಲ ಶಾಲಾ ಗೋಡೆಯ ಮೇಲಷ್ಟೇ ಹಾಗೂ ಆ ನಿಯಮ ಕೇವಲ ನಿಯಮವಾಗಿಯೇ ಉಳಿದಿದೆ. ನಗರದ ಕೆಲವು ಶಾಲಾ ಕಾಲೇಜುಗಳ ಬಳಿಯೇ ಬೀಡಿ ಸಿಗರೇಟು ಅಂಗಡಿಗಳು ವಿರಾಜಮಾನವಾಗಿ ನಡೆಯುತ್ತಿವೆ. ನಗರದ ಎಸ್‌ಜೆಸಿಇ ಇಂಜಿನಿಯರಿಂಗ್ ಕಾಲೇಜು ಮುಂಭಾಗ ಮಾನಸಗಂಗೋತ್ರಿ ಆವರಣದಲ್ಲಿರುವ ಮಾನಸಗಂಗೋತ್ರಿ ಶಾಲೆ ಎದುರಿಗೆ ಸಿಗರೇಟು ಅಂಗಡಿ ತೆರೆದಿರುತ್ತದೆ. ಅಂಗಡಿಯ ಮುಂಭಾಗವೇ ಶಾಲಾ ಮಕ್ಕಳು ವಾಹನಗಳಿಂದ ಇಳಿಯುವುದು, ಓಡಾಡುವುದು ಸಾಮಾನ್ಯವಾಗಿರುತ್ತದೆ. ಆ ಮಕ್ಕಳ ಎದುರಿಗೆ ಪ್ರತಿನಿತ್ಯ ಸಿಗರೇಟ್ ಸೇದುತ್ತಾ ಹಲವರು ಶಾಲಾ ಮುಂಭಾಗವೇ ನಿಂತಿರುತ್ತಾರೆ. ಇದರಿಂದ ಮಕ್ಕಳ ಮನಸ್ಸಿನ ಮೇಲೆ ಬೇರೆ ರೀತಿಯ ದುಷ್ಪರಿಣಾಮ ಬೀರುತ್ತದೆ. ಇದರಿಂದ ಮಕ್ಕಳು ಕೆಟ್ಟ ಚಟಗಳಿಗೆ ವ್ಯಸನಿಗಳಾಗುವ ಸಾಧ್ಯತೆ ಇದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಶಾಲೆ ಎದುರಿನ ಸಿಗರೇಟ್ ಅಂಗಡಿಯನ್ನು ತೆರವುಗೊಳಿಸಬೇಕೆಂದು ಈ ಮೂಲಕ ಮನವಿ.

–ಕರ್ಣ, ಬೋಗಾದಿ, ಮೈಸೂರು.

ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸಪ್ರಸಾದರ ಚುನಾವಣಾ ರಾಜಕೀಯ ಪಯಣಕ್ಕೆ 50 ವರ್ಷ

ನನ್ನದು ಹೋರಾಟದ ರಾಜಕೀಯ ಬದುಕು...



“ಮೈಸೂರಿನ ವಿ.ಶ್ರೀನಿವಾಸ ಪ್ರಸಾದ್, ರಾಜ್ಯ ಮಾತ್ರವಲ್ಲ ದೇಶದ ಹಿರಿಯ ರಾಜಕೀಯ ಮುತ್ಸದ್ದಿ. ಆರ್‌ಎಸ್‌ಎಸ್ ಮೂಲಕ ಸಂಘಟನಾತ್ಮಕ ನಾಯಕತ್ವ ಗುಣ ಬೆಳೆಸಿಕೊಂಡವರು. ಹೋರಾಟದ ಮೂಲಕವೇ ರಾಜಕೀಯಕ್ಕೆ ಅಡಿ ಇಟ್ಟವರು. ಸಮಯ–ಸಂದರ್ಭ, ಕೆಲವು ಸಂದಿಗ್ಧ ಪರಿಸ್ಥಿತಿಯಲ್ಲಿ ಪಕ್ಷಾಂತರ ಮಾಡಿದರೂ ತತ್ವಾಂತರಿಯಾಗದ ಅಪರೂಪದ ರಾಜಕಾರಣಿ. ಯಾವ ಸಂದರ್ಭದಲ್ಲೂ 'ಸ್ವಾಭಿಮಾನ' ಬಲಿ ಕೊಡದ ನಾಯಕ. 77 ವರ್ಷದ ವಿ.ಶ್ರೀನಿವಾಸ ಪ್ರಸಾದರು ಇದೇ ಮಾ.17ಕ್ಕೆ ಬರೋಬ್ಬರಿ 50 ವರ್ಷವನ್ನು ಚುನಾವಣಾ ರಾಜಕಾರಣದಲ್ಲಿ ಪೂರೈಸಿ, ಅಂದೇ ಸಕ್ರಿಯ ರಾಜಕಾರಣದಿಂದಲೇ ನಿವೃತ್ತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅದೇ ದಿನ ಮೈಸೂರಿನಲ್ಲಿ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಸಮಾರಂಭವನ್ನೂ ಆಯೋಜಿಸಲಾಗಿದೆ. ಈ ವೇಳೆ 'ಮೈಸೂರು ಮಿತ್ರ'ನೊಂದಿಗೆ ಅವರು ಮುಕ್ತವಾಗಿ ಮಾತನಾಡಿ, ತಮ್ಮ ಸುದೀರ್ಘ ಹೋರಾಟದ ರಾಜಕೀಯ ಪಯಣವನ್ನು ಮೆಲುಕು ಹಾಕಿದ್ದಾರೆ.

■ ಸಂದರ್ಶನ: ಎಸ್.ಬಿ.ದೇವರಾಜ

ಮೈಸೂರು ಮಿತ್ರ: *ಚುನಾವಣಾ ರಾಜಕೀಯದಲ್ಲಿ 50 ವರ್ಷದ ಸುದೀರ್ಘ ಪಯಣದ ಬಗ್ಗೆ ನಿಮ್ಮ ಮೊದಲ ಪ್ರತಿಕ್ರಿಯೆ ಏನು?.*

ಸಂಸದ ವಿ.ಶ್ರೀನಿವಾಸ ಪ್ರಸಾದ್: ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ 1974ರ ಮಾರ್ಚ್ 17ರಂದು ನಡೆದ ಉಪ ಚುನಾವಣೆಯಲ್ಲಿ ನಾನು ಪಕ್ಷೇತರನಾಗಿ ಸ್ಪರ್ಧಿಸಿದ್ದೆ. ಅದೇ ನನ್ನ ಮೊದಲ ಚುನಾವಣೆ. 2024ರ ಮಾರ್ಚ್ 17ಕ್ಕೆ ನನ್ನ ಚುನಾವಣಾ ರಾಜಕಾರಣಕ್ಕೆ 50 ವರ್ಷವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಂದು **ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಅಭಿನಂದನಾ ಸಮಾರಂಭ**ವನ್ನು ನನ್ನ ಅಭಿಮಾನಿಗಳು ಆಯೋಜಿಸಿದ್ದಾರೆ. ಸುದೀರ್ಘ ರಾಜಕೀಯ ಜೀವನದ ಏಳು–ಬೀಳು, ಸೋಲು–ಗೆಲುವಿನ ಮಧ್ಯೆ ನನ್ನ 14 ಚುನಾ ವಣೆಗಳಲ್ಲೂ ನನ್ನ ಬೆಂಬಲಿಸಿದ ಮತದಾರರಿಗೆ ಅದೇ ವೇದಿಕೆಯಲ್ಲಿ ಕೃತಜ್ಞತೆ ಸಮರ್ಪಿಸುತ್ತೇನೆ. ಅಂದೇ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತಿದ್ದೇನೆ.

ಮಿತ್ರ: *ನಿಮಗೆ ರಾಜಕೀಯದ ಬಗ್ಗೆ ಆಸಕ್ತಿ ಮೂಡಿದ ಸಂದರ್ಭವನ್ನು ತಿಳಿಸಬಹುದೇ?*

ಪ್ರಸಾದ್: ಪ್ರೌಢಶಾಲೆ ವಿದ್ಯಾರ್ಥಿಯಾಗಿದ್ದಾಗಲೇ ನನಗೆ ರಾಜಕೀಯದ ಬಗ್ಗೆ ಆಸಕ್ತಿ ಇತ್ತು. ನಾನು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ದವನು. ಆರ್‌ಎಸ್‌ಎಸ್ ಅಂಗ ಘಟಕಗಳಾದ ಜನಸಂಘ, ವಿದ್ಯಾರ್ಥಿ ಪರಿಷತ್, ವಿಶ್ವ ಹಿಂದೂ ಪರಿಷತ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಅದರಲ್ಲೂ ವಿಶೇಷವಾಗಿ ಜನಸಂಘದಲ್ಲಿ 1962ರಿಂದ 72ರವರೆಗೆ ಹತ್ತು ವರ್ಷ ಬಹಳ ಸಕ್ರಿಯವಾಗಿ ಕೆಲಸ ಮಾಡಿದ್ದೆ. ಪ್ರತಿಯೊಂದು ಚುನಾವಣೆಯಲ್ಲೂ ಪೋಸ್ಟರ್ ಅಂಟಿಸುವುದು, ಪ್ರಚಾರ, ರ‍್ಯಾಲಿ ಹೀಗೆ ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸಿದ್ದೆ. ಆದರೆ ಚುನಾವಣೆ ಯಲ್ಲಿ ಸ್ಪರ್ಧಿಸಬೇಕೆಂಬ ಭಾವನೆ ಆಗ ಇರಲಿಲ್ಲ.

ಮಿತ್ರ: *ಹಾಗಾದರೆ ಚುನಾವಣಾ ರಾಜಕೀಯಕ್ಕೆ ತಮ್ಮ ಪ್ರವೇಶ ಹೇಗಾಯ್ತು?*

ಪ್ರಸಾದ್: ರಾಜ್ಯದಲ್ಲಿ 1973ರಲ್ಲಿ ಹೊಸ ಬೆಳವಣಿಗೆ ಆಯಿತು. ಆಗ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದರು. ಅವರ ಮಂತ್ರಿಮಂಡಲದಲ್ಲಿ **ದಲಿತ ನಾಯಕ ಬಿ.ಬಸವಲಿಂಗಪ್ಪ**ನವರು ಪೌರಾಡಳಿತ ಸಚಿವರಾಗಿದ್ದರು. ವಿಚಾರಪೂರಿತವಾಗಿದ್ದ ಅವರ ಭಾಷಣಗಳಿಂದ ನಾವು ಪ್ರಭಾವಿತರಾಗಿದ್ದೆವು. ಮೈಸೂರಲ್ಲಿ ಒಂದು ಕಾರ್ಯಕ್ರಮದಲ್ಲಿ ಅವರು ಬೂಸಾ ಸಾಹಿತ್ಯದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅದು ದೊಡ್ಡ ವಿಷಯವಾಗಿ ಪರ ಮತ್ತು ವಿರೋಧ ಹೋರಾಟಗಳಾದವು. ಈ ವಿಚಾರ ವಿಕೋಪಕ್ಕೆ ಹೋಗಿ ಬಸವಲಿಂಗಪ್ಪನವರನ್ನು ಮಂತ್ರಿಮಂಡಲದಿಂದ ಕೈಬಿಟ್ಟಿದ್ದರಿಂದ ದಲಿತರೆಲ್ಲಾ ಸೇರಿ ಪ್ರತಿಭಟನೆ, ರ‍್ಯಾಲಿ ಮಾಡಿದ್ದೆವು. ಅದು ಬೂಸಾ ಚಳವಳಿ ಎಂದೇ ಹೆಸರಾಯಿತು.

ಅದೇ ವೇಳೆ, 1974ರಲ್ಲಿ ಕೃಷ್ಣರಾಜ ಕ್ಷೇತ್ರದ ಉಪ ಚುನಾ ವಣೆ ಎದುರಾಯ್ತು. ನಾನು ಹುಟ್ಟಿ–ಬೆಳೆದ ಅಶೋಕಪುರಂ ಮತದಾರರೇ ಆ ಚುನಾವಣೆಯಲ್ಲಿ ನಿರ್ಣಾಯಕರೆನಿಸಿದ್ದರು. ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದ ಎಲ್ಲರೂ ಒಮ್ಮತದಿಂದ ನನ್ನನ್ನು ಚುನಾವಣೆಗೆ ನಿಲ್ಲಿಸಿದರು. ಅಶೋಕಪುರಂನ ಶೇ.90ರಷ್ಟು ಮತ ನನಗೆ ಬಂದಿದ್ದರಿಂದ 1972ರ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದಿದ್ದ ಕಾಂಗ್ರೆಸ್, ಉಪ ಚುನಾವಣೆಯಲ್ಲಿ ಮೂರನೇ ಸ್ಥಾನಕ್ಕಿಳಿಯಿತು. ಇಲ್ಲಿ ಸಂಸ್ಥಾ ಕಾಂಗ್ರೆಸ್ ಗೆಲುವು ಸಾಧಿಸಿತು.

ಮಿತ್ರ: *ನಂತರದಲ್ಲಿ ನಿಮ್ಮ ರಾಜಕೀಯ ಪಯಣ ಸಾಗಿದ್ದು ಹೇಗೆ?.*

ಪ್ರಸಾದ್: ಆಗ ಸಂಸ್ಥಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದ ರಾಮಕೃಷ್ಣ ಹೆಗಡೆಯವರು ನನ್ನನ್ನು ಮೈಸೂರಿನ ಹೃದಯ ಭಾಗದಲ್ಲಿರುವ ಹಳೆಯ ದಾಸಪ್ರಕಾಶ್ ಹೋಟೆಲ್‌ಗೆ ಕರೆಸಿ, ಅಭಿನಂದಿಸಿದರು. ನಿಮ್ಮಿಂದ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗೆ ಗೆಲುವಾಯಿತು. ರಾಜಕೀಯಕ್ಕೆ ನೀವೂ ಬನ್ನಿ. ನಿಮ್ಮಂತಹ ಹೋರಾಟಗಾರರು ವಿಪಕ್ಷದಲ್ಲಿರಬೇಕು. ಆಡಳಿಯ ಪಕ್ಷಕ್ಕೆ ಹೋದರೆ ನೂರರಲ್ಲಿ ಒಬ್ಬರಾಗುತ್ತೀರಿ ಎಂದು ಹೇಳಿ ಸಂಸ್ಥಾ ಕಾಂಗ್ರೆಸ್‌ಗೆ ಸೇರಿಸಿಕೊಂಡರು.

ಮಿತ್ರ: *ರಾಜಕಾರಣದಲ್ಲಿ ನಿಮಗೆ ಅಂದು 'ಮಾದರಿ' ನಾಯಕರು ಯಾರು?.*

ಪ್ರಸಾದ್: ರಾಮಕೃಷ್ಣ ಹೆಗಡೆ ಹಾಗೂ **ವೀರೇಂದ್ರ ಪಾಟೀಲ್** ನನಗೆ ಆಗ ಮಾದರಿ ನಾಯಕರು. **ರಾಮಕೃಷ್ಣ ಹೆಗಡೆಯವರು ನನ್ನ ಪೊಲಿಟಿಕಲ್ ಗಾಡ್‌ಫಾದರ್**. ನಂತರ ಸಂಸ್ಥಾ ಕಾಂಗ್ರೆಸ್ ಸೇರಿದಂತೆ ನಾಲ್ಕಾರು ಪಕ್ಷಗಳು ವಿಲೀನವಾಗಿ 1977ಕ್ಕೆ ಜನತಾ ಪಕ್ಷ ಉದಯವಾಯಿತು. ರಾಮಕೃಷ್ಣ ಹೆಗಡೆಯವರು ಎಲ್ಲಾ ಸೇರಿ 1977ರಲ್ಲಿ ನನ್ನನ್ನು ಚಾಮರಾಜನಗರ ಲೋಕಸಭಾ ಕ್ಷೇತ್ರದ ಜನತಾ ಪಕ್ಷದ ಅಭ್ಯರ್ಥಿ ಮಾಡಿದರು. ಆ ಚುನಾವಣೆಯಲ್ಲಿ ನಾನು ಸೋತೆ. ಮತ್ತೆ, 1978ರಲ್ಲಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರದಿಂದ ಜನತಾ ಪಕ್ಷದಿಂದ ನಿಂತು ಸೋತೆ. ತುರ್ತು ಪರಿಸ್ಥಿತಿಯಲ್ಲಿ ಜನತಾ ಪಕ್ಷ ಹೋರಾಟ ಮಾಡಿ ದೊಡ್ಡ ದೊಡ್ಡ ನಾಯಕರು ಜೈಲು ಶಿಕ್ಷೆ ಅನುಭವಿಸಿದರು. ಪ್ರಥಮ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ 1977ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. ಸ್ವತಃ ಇಂದಿರಾಗಾಂಧಿ ಸೋತು, ಹತಾಶರಾದರು. ಆಗ ಮೊರಾರ್ಜಿ ದೇಸಾಯಿ ದೇಶದ ಪ್ರಧಾನಮಂತ್ರಿಯಾಗಿ ಉತ್ತಮ ಮಂತ್ರಿಮಂಡಲ ರಚಿಸಿದರು. ಆದರೆ ಎರಡೂವರೆ ವರ್ಷದಲ್ಲಿ ಭಿನ್ನಾಭಿಪ್ರಾಯ ಮೂಡಿ ಮೈತ್ರಿ ಒಡೆಯಿತು. ಬಹಳಷ್ಟು ಜನ ಹತಾಶರಾಗಿ ಬೇರೆ ಬೇರೆ ಪಕ್ಷಗಳ ಸೇರಿದರು. ಇದೇ ವೇಳೆ ಹಿಂದಿನ ಜನಸಂಘ 1979ರಲ್ಲಿ ಬಿಜೆಪಿಯಾಗಿ ರೂಪುಗೊಂಡಿತು. ಇತ್ತ ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್ ಎಲ್ಲರೂ ಇಂದಿರಾ ಕಾಂಗ್ರೆಸ್ ಸೇರಿದರು.

ಮಿತ್ರ: *ಚುನಾವಣೆಯಲ್ಲಿ ನಿಮ್ಮ ಮೊದಲ ಗೆಲುವಿನ ಬಗ್ಗೆ ತಿಳಿಸುವಿರಾ?.*

ಪ್ರಸಾದ್: ಸರಿ, ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಮತ್ತೊಂದು ಬೆಳವಣಿಗೆ ಆಯ್ತು. ಒಂದೇ ನಾಣ್ಯದ ಎರಡು ಮುಖಗಳಂತಿದ್ದ ಇಂದಿರಾ ಗಾಂಧಿ ಹಾಗೂ ದೇವರಾಜ ಅರಸು ಬೇರೆ ಬೇರೆಯಾದರು. ಇಂದಿರಾಗಾಂಧಿ ಮಾತಿಗೆ ಯಾರೂ ಮಣೆ ಹಾಕಲಿಲ್ಲ. ಆಗ ಕಾಂಗ್ರೆಸ್(ಐ) ಪಕ್ಷ ಉದಯವಾಯ್ತು. ಆರ್.ಗುಂಡೂರಾವ್ ಅದರ ಸಂಚಾಲಕರಾಗಿದ್ದರು. ಆಗ ಸ್ವತಃ ಗುಂಡೂರಾಯರೇ ನನ್ನನ್ನು ಕರೆಸಿ, ಒತ್ತಾಯ ಮಾಡಿದ್ದರಿಂದ ನಾನು 1979ರಲ್ಲಿ ಕಾಂಗ್ರೆಸ್(ಐ) ಸೇರಬೇಕಾಯ್ತು. ಅಷ್ಟರಲ್ಲಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಬಗ್ಗೆ ಕ್ಷಮೆ ಕೇಳಿದ್ದರು. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ನಾನು ಹಾಗೂ ಮೈಸೂರಿನಿಂದ ರಾಜ ಶೇಖರ ಮೂರ್ತಿ ಸ್ಪರ್ಧಿಸಿ, ಇಬ್ಬರೂ ಗೆಲುವು ಸಾಧಿಸಿದೆವು. ಅಲ್ಲಿಂದ ನಿರಂತರವಾಗಿ ಈ ಕ್ಷೇತ್ರದಿಂದ ನಾಲ್ಕು ಬಾರಿ ಗೆದ್ದೆ.

ಮಿತ್ರ: *ನೀವು ಕೇಂದ್ರದ ಸಚಿವರಾಗುವ ಸಂದರ್ಭ ಹೇಗೆ ಒದಗಿ ಬಂತು?.*

ಪ್ರಸಾದ್: ಪಟ್ಟಭದ್ರ ಹಿತಾಸಕ್ತಿಗಳಿಂದ 1996ರಲ್ಲಿ ನನಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿತು. ಆದರೂ ಹತಾಶನಾಗದೆ ಪಕ್ಷೇತರನಾಗಿ ಸ್ಪರ್ಧಿಸಿದೆ. ಚಾಮರಾಜನಗರದಲ್ಲಿ 1952ರಿಂದ ಗೆಲ್ಲುತ್ತಿದ್ದ ಕಾಂಗ್ರೆಸ್ ಆ ಚುನಾವಣೆಯಲ್ಲಿ ಸೋತು, ಜನತಾ ದಳ ಗೆಲುವು ಸಾಧಿಸಿತು. 1998ರಲ್ಲಿ ಕಾಂಗ್ರೆಸ್‌ನಿಂದ ನನಗೆ ಟಿಕೆಟ್ ನೀಡಿದರು. ಆಗಲೂ ನನಗೆ ಸೋಲಾಯಿತು. ಆಗ ಕಾಂಗ್ರೆಸ್‌ನಿಂದ ಹೊರಗಿದ್ದು ಹೋರಾಟ ಮಾಡುವ ತೀರ್ಮಾನ ಮಾಡಿದೆ. ಆ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರನ್ನು ಜನತಾ ದಳದಿಂದ ಉಚ್ಚಾಟನೆ ಮಾಡಿದ್ದರಿಂದ ಅವರು **ಲೋಕಶಕ್ತಿ ಪಾರ್ಟಿ** ಕಟ್ಟಿದ್ದರು. ಅವರು ನನ್ನನ್ನು ಕರೆಸಿಕೊಂಡು ತಮಗೆ ಸಹಕಾರ ನೀಡುವಂತೆ ಕೇಳಿದರು.

ಆ ಕ್ಷಣವೇ ನಾನು ಒಪ್ಪಿದೆ. ಲೋಕಶಕ್ತಿ ಇನ್ನಿತರ ನಾಲ್ಕು ಪಕ್ಷ ಸೇರಿ ಜೆಡಿಯು ಆಯ್ತು. 1999ರಲ್ಲಿ ನಾನು ಜೆಡಿಯು ಅಭ್ಯರ್ಥಿಯಾಗಿ ಐದನೇ ಬಾರಿ ಗೆಲುವು ಸಾಧಿಸಿದೆ. 26 ಅಂಗ ಪಕ್ಷಗಳು ಎನ್‌ಡಿಎ ಜೊತೆ ಸೇರಿದ್ದವು. ಜಾರ್ಜ್ ಫರ್ನಾಂಡೀಸ್ ಎನ್‌ಡಿಎ ಸಂಚಾಲಕರಾಗಿದ್ದರು. ಅಟಲ್ ಬಿಹಾರಿ ವಾಜಪೇಯಿ ಅವರು ಎನ್‌ಡಿಎ ಪ್ರಧಾನಿ ಅಭ್ಯರ್ಥಿಯಾದರು. ಜಮ್ಮು–ಕಾಶ್ಮೀರಕ್ಕಿದ್ದ ವಿಶೇಷ ಸ್ಥಾನಮಾನದ ಆರ್ಟಿಕಲ್ 370, ರಾಮಜನ್ಮಭೂಮಿ ವಿವಾದ ಪ್ರಸ್ತಾಪ ಮಾಡಬಾರದು ಹಾಗೂ ಕಾಮನ್ ಸಿವಿಲ್ ಕೋಡ್ ತರಬಾರದು ಎಂಬ ಷರತ್ತು ಹಾಗೂ ಎನ್‌ಡಿಎ ಸಾಮಾನ್ಯ ಕಾರ್ಯಸೂಚಿಯಂತೆ ಆಡಳಿತ ನಿರ್ವಹಿಸುವ ನಿರ್ಣಯ ಕೈಗೊಳ್ಳಲಾಯಿತು. ಜೆಡಿಯುಗೆ ಬಿಹಾರ್‌ನಲ್ಲಿ ಹೆಚ್ಚು ಸ್ಥಾನ, ಕರ್ನಾಟಕದಲ್ಲಿ ಮೂರು ಸ್ಥಾನ ಬಂದಿದ್ದವು. ಕೇಂದ್ರದ ರಾಜ್ಯ ಸಚಿವ ಸ್ಥಾನಕ್ಕೆ ಕರ್ನಾಟಕದಿಂದ ನನ್ನನ್ನು ಆಯ್ಕೆ ಮಾಡಿದರು.

ಮಿತ್ರ: *ನೀವು ಜೆಡಿಎಸ್ ಸೇರಿದ್ದು, ಮತ್ತೆ ಅಲ್ಲಿನ ಅನುಭವದ ಬಗ್ಗೆ ತಿಳಿಸಬಹುದೇ?.*

ಪ್ರಸಾದ್: ಹೆಚ್.ಡಿ.ದೇವೇಗೌಡರು ನನ್ನನ್ನು ಭೇಟಿ ಮಾಡಿ, ನಮ್ಮ ಪ್ರಾದೇಶಿಕ ಪಕ್ಷ ಜೆಡಿಎಸ್ ಬಲಗೊಳಿಸೋಣ ಬನ್ನಿ ಎಂದು ಆಹ್ವಾನಿಸಿದರು. ಆಗ ಸಿದ್ದರಾಮಯ್ಯ ಜೆಡಿಎಸ್ ಅಧ್ಯಕ್ಷರಾಗಿದ್ದರು. 2004ರಲ್ಲಿ ಚಾಮರಾಜನಗರ ಕ್ಷೇತ್ರದಲ್ಲಿ ಮೊಟ್ಟ ಮೊದಲಿಗೆ ಜೆಡಿಎಸ್ ಅಭ್ಯರ್ಥಿ ಕಾಗಲವಾಡಿ ಶಿವಣ್ಣನನ್ನು ಲೋಕಸಭೆಗೆ ಗೆಲ್ಲಿಸಿದೆವು. ಆಗ ರಾಜ್ಯದಲ್ಲಿ ಯಾವ ಪಕ್ಷಕ್ಕೂ ಬಹುಮತವಿರಲಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ಧರ್ಮಸಿಂಗ್ ಮುಖ್ಯಮಂತ್ರಿ, ಸಿದ್ದರಾಮಯ್ಯ ಉಪಮುಖ್ಯಮಂತ್ರಿ, ಜೊತೆಗೆ ಹಣಕಾಸು ಸಚಿವರಾದರು.

ಸ್ವಲ್ಪ ದಿನದ ನಂತರ ದೇವೇಗೌಡರು ಹಾಗೂ ಸಿದ್ದರಾಮಯ್ಯನವರ ನಡುವೆ ವೈಮನಸ್ಸು ಬಂದು, ಸಿದ್ದರಾಮಯ್ಯ ಅವರನ್ನು ಜೆಡಿಎಸ್ ಪಕ್ಷದಿಂದ ಉಚ್ಚಾಟನೆ ಮಾಡಿದರು. ಸಿದ್ದರಾಮಯ್ಯ ಅಲ್ಲಿಂದ ಹೊರಬಂದ ನಂತರ 'ಅಹಿಂದ' ಸಮಾವೇಶ ಮಾಡಿದರು. ಬಸವ ಕಲ್ಯಾಣದಲ್ಲಿ ಸ್ವತಃ ನಾನೇ ಅಹಿಂದ ಸಮಾವೇಶಕ್ಕೆ ಚಾಲನೆ ನೀಡಿದೆ. ಜೆಡಿಎಸ್‌ನಲ್ಲಿದ್ದರೂ ಸಿದ್ದರಾಮಯ್ಯಗೆ ಬೆಂಬಲ ಕೊಟ್ಟಿದ್ದೆ. ನಂತರ ಅವರು ಸೋನಿಯಾಗಾಂಧಿ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದರು.

ಮಿತ್ರ: *ಜೆಡಿಎಸ್‌ನಲ್ಲಿದ್ದ ನೀವು ಪಕ್ಷದಿಂದ ಹೊರಹೋಗಿದ್ದ ಸಿದ್ದರಾಮಯ್ಯರನ್ನು ಬೆಂಬಲಿಸಲು ಕಾರಣವೇನು?.*

ಪ್ರಸಾದ್: ಜೆಡಿಎಸ್‌ನಿಂದ ಗೆದ್ದಿದ್ದ ಸಿದ್ದರಾಮಯ್ಯ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಿತು. ಸಿದ್ದರಾಮಯ್ಯ ಕಾಂಗ್ರೆಸ್ ಅಭ್ಯರ್ಥಿಯಾದರು, ಶಿವಬಸಪ್ಪ ಜೆಡಿಎಸ್‌ನಿಂದ ಸ್ಪರ್ಧಿಸಿದ್ದರು. ಸಿದ್ದರಾಮಯ್ಯಗೆ ಗೆಲುವು ಕಷ್ಟವೆನಿಸಿತು. ಆಗ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ಕಾಗೋಡು ತಿಮ್ಮಪ್ಪ ಅವರು ನಮ್ಮ ಮನೆಗೆ ಬಂದು ಪರಿಸ್ಥಿತಿ ತಿಳಿಸಿದ್ದರು. ಅಷ್ಟರಲ್ಲಿ ಸಿದ್ದರಾಮಯ್ಯನವರೂ ಬಂದು ನಿಮ್ಮ ಸಹಕಾರ ಬೇಕು ಎಂದರು. ಆಗ ಸಿದ್ದರಾಮಯ್ಯ ಬಗ್ಗೆ ಮರುಕ ಬಂತು. ಓರ್ವ ಹಿಂದುಳಿದ ವರ್ಗದ ನಾಯಕ ಎಂದು ಅವರನ್ನು ಬೆಂಬಲಿಸಿದೆ. ಆ ಚುನಾವಣೆಯಲ್ಲಿ ಸಿದ್ದರಾಮಯ್ಯ ಗೆದ್ದಿದ್ದು ಕೇವಲ 257 ಮತಗಳಿಂದ.

ಮಿತ್ರ: *ನೀವು ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ ಸಂದರ್ಭವನ್ನು ತಿಳಿಸಬಹುದೇ?.*

ಪ್ರಸಾದ್: ಮಲ್ಲಿಕಾರ್ಜುನ ಖರ್ಗೆ ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಆಸ್ಕರ್ ಫರ್ನಾಂಡಿಸ್ ಕೇಂದ್ರದಲ್ಲಿ ಮಂತ್ರಿಯಾಗಿದ್ದರು. ಕಾಂಗ್ರೆಸ್‌ನಲ್ಲಿ ಆಸ್ಕರ್ ಫರ್ನಾಂಡಿಸ್ ನನ್ನ ರಾಜಕೀಯ ಗಾಡ್‌ಫಾದರ್. ಐದು ಬಾರಿ ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದ ನನಗೆ ಮತ್ತೆ ಏನೂ ಆಗುವ ಆಸೆ ಇರಲಿಲ್ಲ. 2008ರಲ್ಲಿ ವಿಧಾನಸಭೆ ಚುನಾವಣೆ ಬಂತು. ಅದೇ ವೇಳೆಗೆ ನಂಜನಗೂಡು ಕ್ಷೇತ್ರ ಮೊದಲ ಬಾರಿಗೆ ಮೀಸಲು ಕ್ಷೇತ್ರವಾಯಿತು. ಒತ್ತಾಯ ಮಾಡಿದ್ದರಿಂದ ಆ ಚುನಾವಣೆಯಲ್ಲಿ ಸ್ಪರ್ಧಿಸಿದೆ. ಕ್ಷೇತ್ರ ಪುನರ್ ವಿಂಗಡನೆಯಿಂದಾಗಿ ವರುಣಾ ಕ್ಷೇತ್ರವೂ ಹೊಸದಾಗಿ ರಚನೆಯಾಗಿತ್ತು. ಸಿದ್ದರಾಮಯ್ಯರಿಗೆ ಕ್ಷೇತ್ರದ ಬಗ್ಗೆ ವಿವರಣೆ ನೀಡಿ, ಇದು ನಿಮಗೆ ತುಂಬಾ ಸುರಕ್ಷಿತವಾದ ಕ್ಷೇತ್ರವೆಂದು ನಿಲ್ಲಿಸಿದೆ. ಅವರು ರೇವಣ್ಣಸಿದ್ದಯ್ಯ ವಿರುದ್ಧ ಗೆದ್ದರು. ನಾನೂ ಗೆದ್ದೆ.

ಮಿತ್ರ: *ಇಷ್ಟೊಂದು ಆತ್ಮೀಯರಾಗಿದ್ದ ನಿಮ್ಮ ನಡುವೆ ಅಸಮಾಧಾನಕ್ಕೆ ಕಾರಣವೇನು?.*

ಪ್ರಸಾದ್: 2013ರಲ್ಲಿ ಬಿಜೆಪಿ ವಿಭಾಗವಾಗಿದ್ದರಿಂದ ಕಾಂಗ್ರೆಸ್‌ಗೆ ಸುಲಭವಾಗಿ ಬಹುಮತ ಬಂತು. ಕಾಂಗ್ರೆಸ್ ಕಚೇರಿಯಲ್ಲಿ ಸೀಕ್ರೇಟ್ ಬ್ಯಾಲೆಟ್ ಮಾಡಿದಾಗ ಶೇ.80ರಷ್ಟು ಶಾಸಕರ ಬೆಂಬಲ ಸಿಕ್ಕಿದ್ದರಿಂದ ಸಿದ್ದರಾಮಯ್ಯರನ್ನು ಸಿಎಲ್‌ಪಿ ನಾಯಕರಾಗಿ ಘೋಷಣೆ ಮಾಡಿದರು. ಸಚಿವ ಸ್ಥಾನ ನೀಡುವಂತೆ ನಾನೇನು ಕೇಳಿರಲಿಲ್ಲ. ಆದರೂ ಕಂದಾಯ ಸಚಿವನಾಗಿ ಮಾಡಿದರು. ಮೂರು ವರ್ಷ ಆದ ಮೇಲೆ ಸಿದ್ದರಾಮಯ್ಯ ಪರಿಣಾಮಕಾರಿ ಸರ್ಕಾರ ಬೇಕು, ಮಂತ್ರಿಮಂಡಲ ಪುನರ್ ರಚನೆ ಮಾಡಬೇಕು ಎಂದಾಗ ಎಲ್ಲರೂ ಒಪ್ಪಿಗೆ ಕೊಟ್ಟೆವು. ಆದರೆ ವಿವೇಚನೆ ಇಲ್ಲದೆ ಇಷ್ಟ ಬಂದ ಹಾಗೆ ಮಂತ್ರಿಮಂಡಲ ಪುನರ್ರಚನೆ ಮಾಡಿದರು. ಆರೋಗ್ಯ ಸರಿಯಿಲ್ಲ ಎಂದು ನನ್ನನ್ನು ಮಂತ್ರಿ ಮಂಡಲದಿಂದ ಕೈಬಿಟ್ಟರು. ಖರ್ಗೆಗೆ ನನ್ನನ್ನು ಬಿಡಲು ಇಷ್ಟವಿರಲಿಲ್ಲ. ಆದರೂ ನಿಮ್ಮ ಮಗನ ಮಂತ್ರಿ ಮಾಡ್ತೀವಿ ಒಪ್ಪಿಕೊಳ್ಳಿ ಎಂದು ಬೇರೆಯವರ ಮೂಲಕ ಒಪ್ಪಿಸಿದರು. ನನ್ನನ್ನು ಸಚಿವ ಸ್ಥಾನದಿಂದ ಇಳಿಸಿದ್ದಕ್ಕೆ ಬೇಸರವಿಲ್ಲ. ಆದರೆ ಒಬ್ಬ ಹಿರಿಯ, ಸೌಜನ್ಯಕ್ಕಾದರೂ ಒಂದು ಮಾತೂ ಹೇಳಲಿಲ್ಲ. ನನ್ನನ್ನು ಇಳಿಸಿದ್ದರ ಬದಲಿಗೆ ಮೊದಲ ಬಾರಿ ಗೆದ್ದಿದ್ದ ಚಿಕ್ಕ ವಯಸ್ಸಿನ ಪ್ರಿಯಾಂಕ್ ಖರ್ಗೆಯನ್ನು ಮಂತ್ರಿ ಮಾಡಿದರು. ಖರ್ಗೆ ಮತ್ತು ಸಿದ್ದರಾಮಯ್ಯನ ಮೇಲೆ ಬೇಜಾರಿಗೆ ಇದೇ ಕಾರಣ. ಅಧ್ಯಕ್ಷರಾಗಿದ್ದ ಪರಮೇಶ್ವರ್ ಕೂಡ ಅವರ ಕಡೆ ಸೇರಿಕೊಂಡರು. ಆಗ ರಾಜಕೀಯವೇ ಬೇಡ ಎಂದು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದೆ.

ಮಿತ್ರ: *ನಿಮ್ಮ ರಾಜೀನಾಮೆ ನಂತರದ ಬೆಳವಣಿಗೆ ಬಗ್ಗೆ ಹೇಳುವಿರಾ?*

ಪ್ರಸಾದ್: ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಯಡಿಯೂರಪ್ಪ, ಕುಮಾರಸ್ವಾಮಿ ಮನೆಗೆ ಬಂದು ನನ್ನನ್ನು ಒತ್ತಾಯಿಸಿದರು. 'ಸ್ವಾಭಿಮಾನ ಸಮಾವೇಶ' ಮಾಡಿ ಮತದಾರರ ಅಭಿಪ್ರಾಯ ಕೇಳಿದಾಗ ಎಲ್ಲರೂ ಬಿಜೆಪಿಗೆ ಸೇರಿ ಎಂದು ಹೇಳಿದ್ದರಿಂದ ನಾನು ಬಿಜೆಪಿ ಸೇರಿದೆ. ಆದರೂ ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆ ಇರಲಿಲ್ಲ. ಯಡಿಯೂರಪ್ಪನವರ ಒತ್ತಾಯದಿಂದ ಸ್ಪರ್ಧಿಸಿದೆ. ಆದರೆ ಆ ಚುನಾವಣೆಯಲ್ಲಿ ಹಣ ವಿಪರೀತವಾಗಿ ಓಡಾಡಿತು.

ಉಪ ಚುನಾವಣೆಯ ವಿಶೇಷವೆಂದರೆ ನನ್ನ ವಿರುದ್ಧ ಸ್ಪರ್ಧಿಸುವ ಅಭ್ಯರ್ಥಿ ಕಾಂಗ್ರೆಸ್‌ನಲ್ಲಿ ಇರಲೇ ಇಲ್ಲ. ಹಾಗಾಗಿ ನನ್ನ ವಿರುದ್ಧ 2 ಬಾರಿ ಸೋತಿದ್ದು, ಜೆಡಿಎಸ್ ತಾಲೂಕು ಅಧ್ಯಕ್ಷನಾಗಿದ್ದ ಕಳಲೆ ಕೇಶವಮೂರ್ತಿಯನ್ನು ಕರೆತಂದು ನಿಲ್ಲಿಸಿದರು. ಜೆಡಿಎಸ್ ನಾಯಕರ ಅನುಮತಿ ಪಡೆದೇ ಅವರನ್ನು ಕರೆತಂದು ಕಾಂಗ್ರೆಸ್ ಅಧಿಕೃತ ಅಭ್ಯರ್ಥಿ ಮಾಡಿದರು. ನಾನು ರಾಜಕೀಯಕ್ಕೆ ತಂದಿದ್ದ ಧ್ರುವನಾರಾಯಣ್ ಕೂಡ ಕೇಶವಮೂರ್ತಿ ಬೆಂಬಲಿಸಿದರು. ಏನೆಲ್ಲಾ ಕುತಂತ್ರ ಮಾಡಿ ನನ್ನನ್ನು ಸೋಲಿಸಿದರು.

ಆದರೆ ನಾನು ಹಠವಾದಿ. 2018ರ ಚುನಾವಣೆಯಲ್ಲಿ ನಂಜನಗೂಡು ಕ್ಷೇತ್ರದಲ್ಲಿ ನನ್ನ ಅಳಿಯ ಹರ್ಷವರ್ಧನ್ ನಿಲ್ಲಿಸಿ, ಗೆಲ್ಲಿಸಿದೆ. ಜಿ.ಟಿ.ದೇವೇಗೌಡರ ಮನವೊಲಿಸಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅವರಿಗೆ ಬೆಂಬಲ ನೀಡಿದೆ. ಅವರು 36 ಸಾವಿರ ಅಂತರದಿಂದ ಗೆದ್ದರು. ಮುಖ್ಯಮಂತ್ರಿಯಾಗಿ ಇಲ್ಲಿ ಸೋತ ಸಿದ್ದರಾಮಯ್ಯ ಬಾದಾಮಿಯಲ್ಲಿ ಕಡಿಮೆ ಮತಗಳಿಂದ ಗೆದ್ದರು. ಮಾಜಿ ಶಾಸಕರಾಗಿದ್ದ ಗುರುಸ್ವಾಮಿ ಅವರು ನೀವು ಸೋತು ನಿವೃತ್ತರಾಗಬೇಡಿ ಎಂದು ಲೋಕಸಭೆಗೆ ಸ್ಪರ್ಧಿಸಲು ಕೇಳಿದರು. ಆರೋಗ್ಯ ಸರಿ ಇಲ್ಲದಿದ್ದರೂ 2019ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ಧ್ರುವನಾರಾಯಣ್ ವಿರುದ್ಧ ಗೆದ್ದು 6ನೇ ಬಾರಿ ಸಂಸದನಾದೆ.

ಮಿತ್ರ: *ಒಟ್ಟಾರೆ ನಿಮ್ಮ ತುಂಬು ರಾಜಕೀಯ ಜೀವನದ ಬಗ್ಗೆ ಏನು ಹೇಳುತ್ತೀರಿ?.*

ಪ್ರಸಾದ್: ನನಗೆ ತುಂಬಾ ತೃಪ್ತಿ ಇದೆ. ನನ್ನದು ಹೋರಾಟದ ರಾಜಕೀಯ ಬದುಕು. ಅದು ಸಾರ್ಥಕವಾಗಿದೆ. ಜನ ನನಗೆ ಬಹಳ ವಿಶ್ವಾಸ, ಪ್ರೀತಿ ತೋರಿದ್ದಾರೆ. 50 ವರ್ಷ ಯಾವುದೇ ಕಳಂಕವಿಲ್ಲದೆ, ಸಣ್ಣ ಕಪ್ಪುಚುಕ್ಕೆ ಇಲ್ಲದೆ, ಕ್ಷೇತ್ರದ ಜನರಿಗೆ ಕೆಟ್ಟ ಹೆಸರು ಬಾರದಂತೆ ಕೆಲಸ ಮಾಡಿದ್ದೇನೆ. ರಾಜಕಾರಣಿಯಾಗಿ ಉತ್ತಮ ಕೆಲಸ ಮಾಡಿದ ಆತ್ಮತೃಪ್ತಿ ನನಗಿದೆ.

ಮಿತ್ರ: *ನಿಮ್ಮ ಸುದೀರ್ಘ ರಾಜಕೀಯ ಅನುಭವದಲ್ಲಿ ಪ್ರಸ್ತುತ ರಾಜಕೀಯ ಪರಿಸ್ಥಿತಿ ಬಗ್ಗೆ ಏನು ಹೇಳ್ತೀರಾ?.*

ಪ್ರಸಾದ್: ರಾಜಕೀಯ ಪಕ್ಷಗಳು ಹಾಗೂ ಮತದಾರರ ಮನಃಸ್ಥಿತಿ ಬದಲಾಗಿದೆ. ಹಿಂದೆ ರಾಜಕೀಯ ಪಕ್ಷಗಳಲ್ಲಿ ಬದ್ಧತೆ ಹಾಗೂ ಸಿದ್ಧಾಂತವಿತ್ತು. ಯಾವುದೇ ಹಣದ ವ್ಯವಹಾರವಿಲ್ಲದೆ ಪ್ರೀತಿ–ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು. ಗೆದ್ದವರೂ ಭ್ರಷ್ಟಾಚಾರದಲ್ಲಿ ಮುಳುಗದೆ ಇತಿಮಿತಿಯೊಳಗೆ ಜನರ ಕೆಲಸ ಮಾಡುತ್ತಿದ್ದರು. ಈಗ ಎಲ್ಲವೂ ಕಲುಷಿತವಾಗಿವೆ. ರಾಜಕೀಯ ಒಂದು ರೀತಿ ಬಂಡವಾಳ ಹಾಕಿ ಲಾಭ ತೆಗೆಯುವ ಉದ್ಯಮವಾಗಿದೆ. ಯಾರು ಹೆಚ್ಚು ಹಣ ನೀಡುತ್ತಾರೆ ಅವರಿಗೆ ಮತ ಎಂಬ ಮನಃಸ್ಥಿತಿ ಮತದಾರರಲ್ಲಿ ಬಂದಿದೆ. ಈಗಲೂ ಶುದ್ಧವಾಗಿರುವ ಪ್ರಜ್ಞಾವಂತ ಮತದಾರರ ಗುಂಪು ಇದೆ. ಆದರೆ ಹಣ ಪಡೆದು ಮತ ಹಾಕುವವರ ಸಂಖ್ಯೆ ಹೆಚ್ಚಾಗಿದೆ. ಪಂಚಾಯ್ತಿಯಿಂದ ಪಾರ್ಲಿಮೆಂಟ್‌ವರೆಗೂ ಮತ ಹಾಕಲು ಹಣ ತೆಗೆದುಕೊಳ್ಳುತ್ತಾರೆ. ಹಣ ಕೊಟ್ಟವರು ಅದನ್ನು ಸಂಪಾದಿಸಲು ಅಡ್ಡದಾರಿಗಳನ್ನು ಹಿಡಿಯುತ್ತಾರೆ. ಅಂತಿಮವಾಗಿ ಮತದಾರ ಕೈಕೈ ಹಿಸುಕಿಕೊಳ್ಳುವಂತಾಗುತ್ತದೆ. ಇದು ಬದಲಾಗುವುದು ಅನಿವಾರ್ಯವಾಗಿದೆ. ಮತದಾನದ ಹಕ್ಕು, ಪಾವಿತ್ರ್ಯತೆಯನ್ನು ಎಲ್ಲರೂ ಅರಿತುಕೊಳ್ಳಬೇಕಿದೆ.

ಮಿತ್ರ: *ತಮ್ಮ ಸುದೀರ್ಘ ರಾಜಕೀಯ ಜೀವನದ ನೆನಪುಗಳನ್ನು ದಾಖಲಿಸುವ ಬಗ್ಗೆ ಚಿಂತನೆ ಇದೆಯೇ?.*

ಪ್ರಸಾದ್: 27 ವರ್ಷ ಲೋಕಸಭಾ ಸದಸ್ಯನಾಗಿ, 8 ವರ್ಷ ಶಾಸಕನಾಗಿ ಕೆಲಸ ಮಾಡಿರುವ ನನ್ನ ಅನುಭವ ದಾಖಲಿಸಬೇಕೆಂಬ ಯೋಚನೆ ಇದೆ. ನಾನು ಲೋಕಸಭಾ ಸದಸ್ಯನಾಗಿ ಇಂದಿರಾಗಾಂಧಿಯಿಂದ ಮೋದಿವರೆಗೆ 7 ಜನ ಪ್ರಧಾನಿಗಳ ಆಡಳಿತ ನೋಡಿದ್ದೇನೆ. ಅವರೆಲ್ಲರ ಆಡಳಿತ ಚಿತ್ರಣ ನನ್ನ ಕಣ್ಮುಂದಿದೆ. ಅವರ ವ್ಯಕ್ತಿತ್ವ, ಅವರ ಆಡಳಿತ ವೈಖರಿ ಹಾಗೂ ನನ್ನ ಅನುಭವ ಎಲ್ಲವೂ ಜ್ಞಾಪಕವಿದೆ. ಆರೋಗ್ಯ ಸುಧಾರಿಸಿದರೆ ಎಲ್ಲವನ್ನೂ ದಾಖಲಿಸುತ್ತೇನೆ

ಮಿತ್ರ: *ಪ್ರಸ್ತುತ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳ ಆಯ್ಕೆ ಹಾಗೂ ಒಟ್ಟಾರೆ ದೇಶದ ರಾಜಕೀಯ ವಾತಾವರಣದ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?.*

ಪ್ರಸಾದ್: ಮೈಸೂರು–ಕೊಡಗು, ಚಾಮರಾಜನಗರ ಅಭ್ಯರ್ಥಿ ಆಯ್ಕೆ ಬಗ್ಗೆ ಏನೂ ಹೇಳುವುದಿಲ್ಲ. ಅಳೆದು–ಸುರಿದು, ಚರ್ಚೆ ಮಾಡಿ ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಯಾವುದೇ ಪ್ರತಿಕ್ರಿಯೆ ಕೊಡುವುದಿಲ್ಲ. ದೆಹಲಿ ಮಟ್ಟದಲ್ಲಿ ನಾನು ಅವಲೋಕನ ಮಾಡಿದಾಗಲೂ ಎನ್‌ಡಿಎಗೆ ಬಹುಮತ ಬರುತ್ತದೆ. ಮೋದಿ ಮತ್ತೆ ಪ್ರಧಾನಿ ಆಗುತ್ತಾರೆ ಎನ್ನಿಸುತ್ತದೆ. ಆದರೆ ರಾಜ್ಯದಲ್ಲಿ ಎಷ್ಟು ಸ್ಥಾನ ಬರುತ್ತದೆ ಎಂದು ಖಚಿತವಾಗಿ ಹೇಳಲಾಗದು.

> **“ರಾಜಕೀಯ ಪಕ್ಷಗಳು ಹಾಗೂ ಮತದಾರರ ಮನಃಸ್ಥಿತಿ ಬದಲಾಗಿದೆ. ಹಿಂದೆ ರಾಜಕೀಯ ಪಕ್ಷಗಳಲ್ಲಿ ಬದ್ಧತೆ ಹಾಗೂ ಸಿದ್ಧಾಂತವಿತ್ತು. ಯಾವುದೇ ಹಣದ ವ್ಯವಹಾರವಿಲ್ಲದೆ ಪ್ರೀತಿ–ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು. ಗೆದ್ದವರೂ ಭ್ರಷ್ಟಾಚಾರದಲ್ಲಿ ಮುಳುಗದೆ ಇತಿಮಿತಿಯೊಳಗೆ ಜನರ ಕೆಲಸ ಮಾಡುತ್ತಿದ್ದರು. ಈಗ ಎಲ್ಲವೂ ಕಲುಷಿತವಾಗಿವೆ. ರಾಜಕೀಯ ಒಂದು ರೀತಿ ಬಂಡವಾಳ ಹಾಕಿ ಲಾಭ ತೆಗೆಯುವ ಉದ್ಯಮವಾಗಿದೆ. ಯಾರು ಹೆಚ್ಚು ಹಣ ನೀಡುತ್ತಾರೆ ಅವರಿಗೆ ಮತ ಎಂಬ ಮನಃಸ್ಥಿತಿ ಮತದಾರರಲ್ಲಿ ಬಂದಿದೆ. ಈಗಲೂ ಶುದ್ಧವಾಗಿರುವ ಪ್ರಜ್ಞಾವಂತ ಮತದಾರರ ಗುಂಪು ಇದೆ. ಆದರೆ ಹಣ ಪಡೆದು ಮತ ಹಾಕುವವರ ಸಂಖ್ಯೆ ಹೆಚ್ಚಾಗಿದೆ. ಪಂಚಾಯ್ತಿಯಿಂದ ಪಾರ್ಲಿಮೆಂಟ್ ವರೆಗೂ ಮತ ಹಾಕಲು ಹಣ ತೆಗೆದುಕೊಳ್ಳುತ್ತಾರೆ. ಹಣ ಕೊಟ್ಟವರು ಅದನ್ನು ಸಂಪಾದಿಸಲು ಅಡ್ಡದಾರಿಗಳನ್ನು ಹಿಡಿಯುತ್ತಾರೆ. ಅಂತಿಮವಾಗಿ ಮತದಾರ ಕೈ ಕೈ ಹಿಸುಕಿಕೊಳ್ಳುವಂತಾಗುತ್ತದೆ. ಇದು ಬದಲಾಗುವುದು ಅನಿವಾರ್ಯವಾಗಿದೆ.**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಸಮ ಸಮಾಜದ ಪರಿಕಲ್ಪನೆ ಸಾಕಾರಗೊಳಿಸಲು ರಾಜ್ಯ ಸರ್ಕಾರ ಗ್ಯಾರಂಟಿಗಳ ಜಾರಿಗೊಳಿಸಿದೆ

● ಮೈಸೂರು ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಪುನರುಚ್ಚಾರ ● ಕೊಟ್ಟ ಮಾತಿನಂತೆ ನಡೆದಿರುವುದು ಭಾರತದಲ್ಲೇ ರಾಜ್ಯ ಕಾಂಗ್ರೆಸ್ ಸರ್ಕಾರ ಮಾತ್ರ; ಪ್ರತಿಪಾದನೆ

ಮೈಸೂರು, ಮಾ.15(ಎಂಕೆ)– ಭಾರತ ಸಂವಿಧಾನದಲ್ಲಿ ಇರುವಂತೆಯೇ ಸಂಪತ್ತು ಎಲ್ಲರಿಗೂ ಸಮವಾಗಿ ವಿತರಣೆಯಾಗಬೇಕು. ಅಸಮಾನತೆ ತೊಲಗಬೇಕು. ಸಮಸಮಾಜದ ನಿರ್ಮಾಣ ಪರಿಕಲ್ಪನೆಯ ಆಶೋತ್ತರಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆಯೇ ಹೊರತು ರಾಜಕೀಯ ಪ್ರೇರಿತವಲ್ಲ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹೇವಪ್ಪ ಹೇಳಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸರ್ಕಾರದ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಇದು ರಾಜಕೀಯ ಕಾರ್ಯಕ್ರಮವಲ್ಲ. ನಮ್ಮ ರಾಜ್ಯದ ಜನರು ಹಸಿವಿನಿಂದ, ಬಡತನದ ಸಂಕಷ್ಟದ ನೋವಿನಿಂದ ಬದುಕಬಾರದು ಎಂಬ ಉದ್ದೇಶದಿಂದ ಕಾಂಗ್ರೆಸ್ ಪಕ್ಷ ನೀಡಿದ ಭರವಸೆ ಈಡೇರಿಸಿದೆ. ಇಡೀ ಭಾರತ ದೇಶದಲ್ಲೇ ಕೊಟ್ಟ ಮಾತಿಗೆ ತಪ್ಪದೇ ನಡೆದುಕೊಂಡಿರುವ ಏಕೈಕ ಸರ್ಕಾರವೆಂದರೆ ಅದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಎಂದು ತಿಳಿಸಿದರು.

ಸಂವಿಧಾನದ ಆಶಯದಂತೆ ಆಡಳಿತ ನಡೆಸಿ ದೇಶವನ್ನು ಸರ್ವಾಂಗೀಣ ಅಭಿವೃದ್ಧಿಯತ್ತ ಕೊಂಡೊಯ್ದು ಬಡತನ ನಿವಾರಣೆ ಮಾಡಿ ಪ್ರತಿಯೊಂದು ಕುಟುಂಬವು ಸ್ವಾಭಿಮಾನ, ಘನತೆಯಿಂದ ಸ್ವಾವಲಂಬಿ ಬದುಕನ್ನು ನಡೆಸಬೇಕೆಂಬ ಉದ್ದೇಶದಿಂದ ಇಂತಹ ಐತಿಹಾಸಿಕ ಯೋಜನೆಗಳನ್ನು ಜಾರಿ ಮಾಡಿದ್ದೇವೆ. ನಮ್ಮ ಸರ್ಕಾರ ಬಡವರು, ದೀನ–ದಲಿತರು ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಕಾರ್ಮಿಕರು ಹಾಗೂ ರೈತರ ಪರವಾಗಿದೆ. ರಾಜ್ಯದ ಪ್ರತಿಯೊಂದು ಕುಟುಂಬವು ಸ್ವಾವಲಂಬನೆಯಿಂದ ಬದುಕು ಕಟ್ಟಿಕೊಳ್ಳುವಂತಹ ಅತ್ಯುತ್ತಮ ಕೆಲಸ ಮಾಡಿದ್ದೇವೆ. ನೀವು ಕೂಡ ನಿಮ್ಮ ಪರವಾಗಿ ಇರುವಂತಹ ಈ ಸರ್ಕಾರಕ್ಕೆ ನಿಮ್ಮ ಬೆಂಬಲ ಮತ್ತು ಸಹಕಾರವನ್ನು ನೀಡಬೇಕೆಂದು ಮನವಿ ಮಾಡುತ್ತೇನೆ ಎಂದರು.



ಸಂಘ–ಸಂಸ್ಥೆಗಳು ಸಹಕರಿಸಿ: ಸಮಾವೇಶದ ಪ್ರಾಸ್ತಾವಿಕವಾಗಿ ಮಾತನಾಡಿದ ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 10 ತಿಂಗಳಾಗುತ್ತಿದೆ. ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಶೇ.80 ರಿಂದ 90 ರಷ್ಟು ಫಲಾನುಭವಿಗಳನ್ನು ತಲುಪಿದೆ. ಶೇ.100 ರಷ್ಟು ಫಲಾನುಭವಿಗಳಿಗೆ ತಲುಪಬೇಕಾದರೆ ಸಂಘ–ಸಂಸ್ಥೆಗಳು, ಸಮಾಜಮುಖಿ ಕಾಳಜಿಯುಳ್ಳವರು ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಅರಿವು ಮೂಡಿಸುವಂತೆ ಮನವಿ ಮಾಡಿದರು.

ರಾಷ್ಟ್ರವ್ಯಾಪಿ ಅನುಸರಣೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಚುನಾವಣಾ ಗಿಮಿಕ್, ಜಾರಿಗೊಳಿಸಲು ಸಾಧ್ಯವೇ ಇಲ್ಲ ಎಂದು ಟೀಕಿಸಿದವರೇ ರಾಷ್ಟ್ರವ್ಯಾಪ್ತಿ ಅನುಸರಣೆ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರದ ಗ್ಯಾರಂಟಿಗಳನ್ನೇ ಬಳಸಿಕೊಂಡು ಪ್ರಧಾನಿ ಗ್ಯಾರಂಟಿ ಎನ್ನುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಡಿ. ರವಿಶಂಕರ್, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಡಾ.ಡಿ. ತಿಮ್ಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ.ಪುಷ್ಪ ಅಮರನಾಥ್, ಸೂರಜ್ ಹೆಗ್ಡೆ, ವರುಣಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ, ಮುಡಾ ಅಧ್ಯಕ್ಷ ಕೆ.ಮರಿಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಒ ಕೆ.ಎಂ. ಗಾಯತ್ರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ದವಸ–ಧಾನ್ಯಗಳಲ್ಲಿ ಉಚಿತ ಗ್ಯಾರಂಟಿ ಯೋಜನೆಗಳ ಆಕರ್ಷಕ ಚಿತ್ರಣ...

ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಜಿಲ್ಲಾ ಸಮಾವೇಶದ ವೇದಿಕೆ ಎದುರು ದವಸ–ಧಾನ್ಯಗಳು, ಸಿರಿಧಾನ್ಯ, ಮೈಸೂರು ವಿಳ್ಯೆದೆಲೆ, ನಂಜನಗೂಡು ರಸಬಾಳೆಯಿಂದ 'ಬ್ರಾಂಡ್ ಮೈಸೂರು' ಲೋಗೋ ಸಹಿತ 'ಅನ್ನಭಾಗ್ಯ', 'ಗೃಹಲಕ್ಷ್ಮಿ', 'ಗೃಹ ಜ್ಯೋತಿ', 'ಶಕ್ತಿ' ಹಾಗೂ ಯುವನಿಧಿ ಗ್ಯಾರಂಟಿ ಯೋಜನೆಗಳ ಲೋಗೋಗಳನ್ನು ಆಕರ್ಷಕವಾಗಿ ಚಿತ್ರಿಸಲಾಗಿತ್ತು. ಸಮಾವೇಶಕ್ಕೂ ಮುನ್ನ ಗಾಯಕ ಅಮ್ಮ ರಾಮಚಂದ್ರ ಮತ್ತು ತಂಡದ ವತಿಯಿಂದ ಜಾನಪದ ಹಾಡುಗಳ ಗಾಯನ ಹಾಗೂ ಕೀರಾಳು ಮಹೇಶ್ ತಂಡದ ವತಿಯಿಂದ ವೀರಗಾಸೆ ನೃತ್ಯ ಪ್ರದರ್ಶನ ನೀಡಲಾಯಿತು.

ಕಿಕ್ಕಿರಿದು ತುಂಬಿದ್ದ ಫಲಾನುಭವಿಗಳ ದಂಡು... ಸಾಮಾನ್ಯರ ಪರದಾಟ...

ಸರ್ಕಾರದ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದ ಹಿನ್ನಲೆಯಲ್ಲಿ ಮೈಸೂರು ಮಹಾರಾಜ ಕಾಲೇಜು ಮೈದಾನ ಫಲಾನುಭವಿಗಳಿಂದ ಕಿಕ್ಕಿರಿದು ತುಂಬಿತ್ತು. ಸುಮಾರು 35 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ಸಮಾವೇಶದಲ್ಲಿ ಭಾಗಿಯಾಗಿದ್ದರು. ಮುಖ್ಯವಾಗಿ ಮಹಿಳೆಯರ ಸಂಖ್ಯೆ ಹೆಚ್ಚಾಗಿತ್ತು. ಸಮಾವೇಶದ ಕೊನೆಯಲ್ಲಿ ಗ್ಯಾರಂಟಿ ಯೋಜನೆಗಳ ಪ್ಲೆ ಕಾರ್ಡ್‌ಗಳನ್ನು ಸಾಂಕೇತಿಕವಾಗಿ ಪಡೆದ ಫಲಾನುಭವಿಗಳು ಸಮಾವೇಶದ ವೇದಿಕೆಯ ಹೊರಗೂ ಸಂಭ್ರಮಿಸುತ್ತಿದ್ದ ದೃಶ್ಯಗಳು ಕಂಡು ಬಂದವು. ಜಿಲ್ಲೆಯ ಪ್ರತಿ ಗ್ರಾಪಂ ವ್ಯಾಪ್ತಿಯಿಂದ ಎರಡ್ಮೂರು ಬಸ್‌ಗಳಿಂದ ಸಮಾವೇಶಕ್ಕೆ ಜನರನ್ನು ಕರೆತರಲಾಗಿತ್ತು. ಪರಿಣಾಮ ಬಸ್‌ಗಳಿಲ್ಲದೆ ಸಾಮಾನ್ಯ ಜನರು ಪರದಾಡುತ್ತಿದ್ದ ದೃಶ್ಯಗಳು ಸಹ ಸಾಮಾನ್ಯವಾಗಿತ್ತು.

ಪಕ್ಷದ ವಿರುದ್ಧ ಕೆ.ಎಸ್. ಈಶ್ವರಪ್ಪ ಬಂಡಾಯ

ಶಿವಮೊಗ್ಗದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಘೋಷಣೆ

ಶಿವಮೊಗ್ಗ, ಮಾ.15– ಕಳೆದ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಸಿಗದೆ ಅಸಮಾಧಾನಗೊಂಡಿದ್ದ ಮಾಜಿ ಸಚಿವ ಕೆಎಸ್ ಈಶ್ವರಪ್ಪ ಅವರು ಇದೀಗ ಲೋಕಸಭೆ ಚುನಾವಣೆಯಲ್ಲೂ ತಮ್ಮ ಪುತ್ರನಿಗೆ ಟಿಕೆಟ್ ಸಿಗದಿದ್ದಕ್ಕೆ ಬಿಜೆಪಿ ವಿರುದ್ಧ ತೀವ್ರ ಆಕ್ರೋಶಗೊಂಡಿದ್ದಾರೆ. ಅಲ್ಲದೆ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುವುದಾಗಿ ಘೋಷಿಸಿದ್ದಾರೆ.



ಪುತ್ರ ಕಾಂತೇಶ್‌ಗೆ ಹಾವೇರಿ ಲೋಕಸಭೆ ಕ್ಷೇತ್ರದ ಟಿಕೆಟ್ ಕೈ ತಪ್ಪಿದ ಹಿನ್ನಲೆಯಲ್ಲಿ ಪುತ್ರನ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಈಶ್ವರಪ್ಪ ಇದೀಗ ಅಖಾಡಕ್ಕಿಳಿದಿದ್ದಾರೆ. ಇಂದು ಬೆಂಬಲಿಗರು, ಹಿತೈಷಿಗಳು, ಅಭಿಮಾನಿಗಳೊಂದಿಗೆ ನಗರದ ಬಂಜಾರ ಕನ್ವೆನ್ಷನ್ ಹಾಲ್ ನಲ್ಲಿ ಸಭೆ ನಡೆಸಿದ ಈಶ್ವರಪ್ಪ, ಲೋಕಸಭೆ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ.

ನಾನು ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದೇನೆ ಹೊರತು ಮೋದಿ ಹಾಗೂ ಬಿಜೆಪಿ ವಿರುದ್ಧ ಹೋಗುತ್ತಿಲ್ಲ. ಬಿಜೆಪಿ ಪಕ್ಷ ಒಂದು ಕುಟುಂಬದ ಕೈಯಲ್ಲಿ ಸಿಲುಕಿದೆ. ಅದನ್ನು ತಪ್ಪಿಸಲು ಸ್ಪರ್ಧೆಗೆ ಮುಂದಾಗಿದ್ದೇನೆ ಎಂದು ಪರೋಕ್ಷವಾಗಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ವಿರುದ್ಧ ಗುಡುಗಿದ್ದಾರೆ.

ಇದೇ ವೇಳೆ ಮಾತನಾಡಿದ ಅವರು ಪ್ರಾಣ ಹೋದರೂ ನಾನು ನರೇಂದ್ರ ಮೋದಿ ವಿರುದ್ಧ ಹೋಗುವುದಿಲ್ಲ. ಮೋದಿ ಪ್ರಧಾನಿ ಆಗುವ ಮೊದಲು ಎಲ್ಲಾ ದೇಶಗಳು ಪಾಕಿಸ್ತಾನ ಜೊತೆಗಿದ್ದವು. ಆದರೆ, ಮೋದಿ ಪ್ರಧಾನಿ ಆದ ನಂತರ ಜಗತ್ತಿನ ಬಲಿಷ್ಠ ದೇಶಗಳು ಭಾರತದ ಜೊತೆಗಿವೆ. ಮುಸ್ಲಿಂ ರಾಷ್ಟ್ರಗಳು ಕೂಡ ಮೋದಿಗೆ ರತ್ನಗಂಬಳಿ ಹಾಕಿ ನಮ್ಮ ದೇಶಕ್ಕೆ ಬನ್ನಿ ಎಂದು ದುಂಬಾಲು ಬೀಳುತ್ತಿವೆ ಎಂದರು.

ಈ ನಿರ್ಧಾರ ಬಿಜೆಪಿ ವಿರುದ್ಧವಾಗಿದ್ದು, ಒಂದೇ ಕುಟುಂಬದವರ ಕಪಿಮುಷ್ಠಿಗೆ ಒಳಗಾಗಬಾರದು. ನಾನು ಬಿಜೆಪಿಯ ಸಿದ್ಧಾಂತಕ್ಕಾಗಿ ಹೋರಾಡುತ್ತಿದ್ದೇನೆಯೇ ಹೊರತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅಲ್ಲ, ಮೋದಿಯವರ ಕಟ್ಟಾ ಅನುಯಾಯಿಯಾಗಿರುವ ನಾನು ಪಕ್ಷದಲ್ಲೇ ಇರುತ್ತೇನೆ ಎಂದು ಹೇಳಿದರು.

ಧರ್ಮಯುದ್ಧದಲ್ಲಿ ನನ್ನನ್ನು ಗೆಲ್ಲಿಸಿ, ಸತ್ಯಕ್ಕೆ ಜಯ ಸಿಗಲೇಬೇಕು

ಬೆಂಗಳೂರು ಗ್ರಾಮಾಂತರ ಬಿಜೆಪಿ ಅಭ್ಯರ್ಥಿ ಡಾ.ಮಂಜುನಾಥ್ ಮನವಿ

ರಾಮನಗರ, ಮಾ.15– ಬೆಂಗಳೂರು ಲೋಕಸಭಾ ಚುನಾವಣೆ ಗರಿಗೆದರಿದ್ದು, ಟಿಕೆಟ್ ಘೋಷಣೆ ಬಳಿಕ ಮೊದಲ ಬಾರಿಗೆ ರಾಮನಗರಕ್ಕೆ ಆಗಮಿಸಿದ ಮೈತ್ರಿ ಅಭ್ಯರ್ಥಿ ಡಾ.ಮಂಜುನಾಥ್ ಇಂದು ಬಿಜೆಪಿ ಕಾರ್ಯಕರ್ತರ ಸಭೆ ನಡೆಸಿದ್ದಾರೆ.




ಲೋಕಸಭಾ ಚುನಾವಣೆ ಯುದ್ಧದಲ್ಲಿ ಡಿಕೆ ಬ್ರದರ್ಸ್‌ಗೆ ಟಕ್ಕರ್ ಕೊಡಲು ಕಣಕ್ಕಿಳಿದಿರುವ ಮಂಜುನಾಥ್ ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ ನಡೆಸಿ ಗೆಲುವಿಗೆ ತಂತ್ರ ರೂಪಿಸಿದರು. ಇದೇ ವೇಳೆ ಮಾತನಾಡಿದ ಅವರು, ಬೆಂಗಳೂರು ಗ್ರಾಮಾಂತರ ಕ್ಷೇತ್ರಕ್ಕೆ ನಾನು ಸ್ಪರ್ಧೆ ಮಾಡಿದ್ದೇನೆ. ನಿಮ್ಮೆಲ್ಲರ ಸಹಕಾರ, ಸಲಹೆ ಮುಖ್ಯ. ಇಲ್ಲಿನ ಜನ ಎಷ್ಟು ಪ್ರೀತಿ ಮಾಡುತ್ತಾರೆ ಎಂದರೆ ನಾನು ಬಂದಾಗ ಪ್ರೀತಿಯ ಸಂಕೇತವಾದ ಗುಲಾಬಿ ಹೂ ನೀಡಿದರು. ಪ್ರಧಾನಿ ನರೇಂದ್ರ ಮೋದಿ ನಿಸ್ವಾರ್ಥ ಸೇವೆ ಮೂಲಕ ಹೊಸ ಭಾರತ ಕಟ್ಟಲು ಮುಂದಾಗಿದ್ದಾರೆ. ಅವರ ಕೆಲಸಕ್ಕೆ ನಾವು ಕೈಜೋಡಿಸಬೇಕು ಎಂದರು.

ನಾವು ಈ ಚುನಾವಣೆಯಲ್ಲಿ ಒಳ್ಳೆಯ ಈಜುಗಾರರಾಗಬೇಕು. ಆಗಲೇ ಸಮುದ್ರದಲ್ಲಿ ಮುತ್ತು ಸಿಗೋದು. ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ದಶಪಥ ಹೆದ್ದಾರಿ, ರಸ್ತೆ, ರೈಲ್ವೆ, ವಿಮಾನ ಸೇವೆ ಅಭಿವೃದ್ಧಿ ಮಾಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಎಲ್ಲರಿಗೂ ವ್ಯಾಕ್ಸಿನ್ ಕೊಡುವ ಕೆಲಸ ಆಯಿತು. ದೇಶದ ಕೋವಿಡ್ ನಿಯಂತ್ರಣದ ಬಗ್ಗೆ ವಿಶ್ವಸಂಸ್ಥೆ ಕೂಡ ಹೊಗಳಿದೆ. ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ನನಗೆ ಪ್ರೇಮಿಗಳ ರೀತಿ ಕಾಣುತ್ತಿದ್ದಾರೆ. ನಾನು ಹೃದ್ರೋಗ ತಜ್ಞನಾಗಿ ಕೆಲಸ ಮಾಡಿದ್ದೇನೆ. ಬಡವರನ್ನು ಕಂಡರೆ ನನಗೆ ಬಹಳ ಪ್ರೀತಿ. ಈಗ ನಡೆಯುತ್ತಿರುವುದು ಧರ್ಮ ಯುದ್ಧ. ಈ ಯುದ್ಧದಲ್ಲಿ ನಾವು ಜಯಶೀಲರಾಗಬೇಕು. ಈ ಯುದ್ಧದಲ್ಲಿ ಸತ್ಯಕ್ಕೆ ಜಯ ಸಿಗಬೇಕು. ಈ ಬಾರಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ನನ್ನನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು.

ಈಶ್ವರಪ್ಪನ ಮನವೊಲಿಸುತ್ತೇವೆ: ಬೊಮ್ಮಾಯಿ

ಹಾವೇರಿ, ಮಾ.15– ಬಿಜೆಪಿ ಪಕ್ಷವನ್ನು ಈಶ್ವರಪ್ಪ ಕಟ್ಟಿ ಬೆಳೆಸಿದ್ದಾರೆ. ಅವರು ಶಿಸ್ತಿನ ಸಿಪಾಯಿ ಆಗಿದ್ದು, ಅವರ ಜೊತೆಗೆ ಮಾತನಾಡಿ ಮನವೊಲಿಸುತ್ತೇನೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಪ್ರವಾಸಿ ಮಂದಿರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಈಶ್ವರಪ್ಪ ಪಕ್ಷೇತರವಾಗಿ ನಿಲ್ಲುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ಬಿಜೆಪಿ ಸಂಸದೀಯ ಮಂಡಳಿಯಲ್ಲಿ ಏನೇನು ನಡೆದಿದೆ ಅದೆಲ್ಲವೂ ಈಶ್ವರಪ್ಪನವರಿಗೆ ತಿಳಿದಿದೆ. ಮೊದಲು ನನ್ನ ಹೆಸರು ಇರಲಿಲ್ಲ. ಆದರೆ ನಾನು ಚುನಾವಣೆಗೆ ನಿಲ್ಲಬೇಕು ಎನ್ನುವುದು ವರಿಷ್ಠರ ತೀರ್ಮಾನ. ನಾನು ಮೋಸ ಮಾಡಿಲ್ಲ ಎಂದು ಹೇಳಿದರು.

ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಬೇರೆಯವರಿಗೆ ಅವಕಾಶ ಕೊಡಿ ಎಂದು ಹೇಳಿದ್ದೆ. ಆದರೆ ಪ್ರಧಾನಿ ನರೇಂದ್ರ ಮೋದಿ, ಜೆಪಿ ನಡ್ಡಾ, ಅಮಿತ್ ಶಾ ತಿಳಿಸಿದ ಬಳಿಕ ಚುನಾವಣೆಗೆ ಸ್ಪರ್ಧಿಸುವ ನಿರ್ಧಾರ ಮಾಡಬೇಕಾಯಿತು ಎಂದರು.

ಶಿಗ್ಗಾವಿ ಉಪಚುನಾವಣೆ ನಡೆದರೆ ಪುತ್ರ ಭರತ್ ಬೊಮ್ಮಾಯಿಗೆ ಟಿಕೆಟ್ ಸಿಗುತ್ತಾ ಎಂಬ ಪ್ರಶ್ನೆಗೆ, ಈಗ ನಾನಿನ್ನೂ ಸ್ಪರ್ಧೆ ಮಾಡಿ ಲೋಕಸಭಾ ಚುನಾವಣೆ ಗೆಲ್ಲಬೇಕು. ಬಳಿಕ ಶಿಗ್ಗಾವಿಗೆ ಉಪಚುನಾವಣೆ ನಡೆಯಲಿದೆ. ಊಹೆ ಮಾಡಿ ನಾನು ಹೇಳಲು ಸಾಧ್ಯವಿಲ್ಲ. ಆ ಸಂದರ್ಭದಲ್ಲಿ ಜನರ ಅಭಿಪ್ರಾಯ, ಪಕ್ಷದ ಕೇಳಬೇಕು ಎಂದು ಉತ್ತರಿಸಿದರು.

ಮೈಸೂರಿನ ಸಿಎಂ ಸಿದ್ದರಾಮಯ್ಯ ಮನೆ 'ಪವರ್ ಹೌಸ್'

ದಿನವಿಡೀ ಲೋಕಸಭಾ ಚುನಾವಣಾ ಟಿಕೆಟ್ ಆಕಾಂಕ್ಷಿಗಳ ಪರೇಡ್; ಬಿಜೆಪಿಯಲ್ಲಿ ಟಿಕೆಟ್ ಕೈ ತಪ್ಪಿದವರೂ ಸರದಿಯಲ್ಲಿ ಮುಖ್ಯಮಂತ್ರಿ ಭೇಟಿ

- ಯದುವೀರ್‌ಗೆ ಪೈಪೋಟಿ ನೀಡುವ ಅಭ್ಯರ್ಥಿಗೆ ಶೋಧ
- ತವರು ಜಿಲ್ಲೆ ಪ್ರತಿಷ್ಠೆ ಉಳಿಸಿಕೊಳ್ಳಲು ಸಿಎಂ ರಣತಂತ್ರ
- ಶ್ರೀನಿವಾಸ ಪ್ರಸಾದ್ ಅಳಿಯ ಡಾ.ಮೋಹನ್; ಕೋಟೆ ಶಿವಣ್ಣ, ನಂಜುಂಡಸ್ವಾಮಿ ಭೇಟಿಯಾಗಿ ಮಾತುಕತೆ



ಮೈಸೂರು, ಮಾ.15(ಬಿಎಲ್‌ಯು)– ಲೋಕಸಭಾ ಚುನಾವಣಾ ವೇಳಾಪಟ್ಟಿ ಘೋಷಣೆ ಹಿಂದಿನ ದಿನವಾದ ಶುಕ್ರವಾರ, ಮುಖ್ಯಮಂತ್ರಿ ಸಿದ್ದರಾಮಯ್ಯರ ಮೈಸೂರಿನ ನಿವಾಸ ಪವರ್ ಹೌಸ್ ಆಗಿತ್ತು. ಟಿಕೆಟ್ ಆಕಾಂಕ್ಷಿಗಳು ದಿನವಿಡೀ ಅವರ ಮನೆಗೆ ಪರೇಡ್ ನಡೆಸಿದರು. ಆ ಮೂಲಕ ಶತಾಯ ಗತಾಯ ಟಿಕೆಟ್ ಗಿಟ್ಟಿಸುವ ಮಹಾ ಪ್ರಯತ್ನ ಮಾಡಿದರು.

ಮಂಡ್ಯ ಹೊರತುಪಡಿಸಿ ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ಆದರೆ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಈಗಾಗಲೇ ಏಳು ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳ ಘೋಷಿಸಿದೆ. ಅತ್ತ ಬಿಜೆಪಿಯಲ್ಲಿ ಟಿಕೆಟ್ ಸಿಗದವರು ಈಗ ಕಾಂಗ್ರೆಸ್ ಬಾಗಿಲು ತಟ್ಟಿದ್ದಾರೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ, ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಕಣಕ್ಕಿಳಿಸಿದೆ. ಈಗ ಪ್ರಬಲ ಪೈಪೋಟಿ ನೀಡುವ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಅನಿವಾರ್ಯತೆ ಕಾಂಗ್ರೆಸ್‌ಗಿದೆ. ತಮ್ಮ ತವರು ಕ್ಷೇತ್ರ ಮೈಸೂರಿನ ಗೆಲುವು ಸಿದ್ದರಾಮಯ್ಯ ಅವರಿಗೆ ಪ್ರತಿಷ್ಠೆಯಾಗಿರುವ ಕಾರಣ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಆಲೋಚನೆಯಲ್ಲಿ ಸಿದ್ದರಾಮಯ್ಯ ತೊಡಗಿದ್ದಾರೆ.

ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಸಿದ್ದರಾಮಯ್ಯ ಹಲವು ನಾಯಕರ ಜೊತೆ ಮಾತುಕತೆ ನಡೆಸಿದರು. ಯದುವೀರ್ ಹೆಸರು ಘೋಷಣೆ ಆದ ಮೇಲೆ ಮೈಸೂರು ಮತ್ತು ಕೊಡಗು ಕ್ಷೇತ್ರದಲ್ಲಿ ಆಗಿರುವ ರಾಜಕೀಯ ಬೆಳವಣಿಗೆ ಹಾಗೂ ಮತದಾರರ ಒಲವಿನ ಬಗ್ಗೆ ಆಪ್ತರು ಹಾಗೂ ಪೊಲೀಸ್ ಗುಪ್ತಚರ ಅಧಿಕಾರಿಗಳಿಂದ ಸಿದ್ದರಾಮಯ್ಯ ಮಾಹಿತಿ ಪಡೆದರು.

ಪ್ರಸಾದರ ಅಳಿಯ ಭೇಟಿ: ಇದೇ ವೇಳೆ ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಹಾಲಿ ಸಂಸದ ಶ್ರೀನಿವಾಸ ಪ್ರಸಾದ್ ಅಳಿಯ ಡಾ.ಮೋಹನ್ ಇಂದು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಚಾಮರಾಜನಗರ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದ ಡಾ.ಮೋಹನ್ ಅವರಿಗೆ ಅವಕಾಶ ಕೈತಪ್ಪಿದೆ. ಮಾಜಿ ಶಾಸಕ ಬಾಲರಾಜ್‌ಗೆ ಟಿಕೆಟ್ ಕೊಟ್ಟಿರುವುದರಿಂದ ತೀವ್ರ ಅಸಮಾಧಾನಗೊಂಡಿರುವ ಡಾ.ಮೋಹನ್, ಕಾಂಗ್ರೆಸ್ ಕದ ತಟ್ಟಿದ್ದಾರೆ.

ಇಂದು ಬೆಳಗ್ಗೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸುಮಾರು 15 ನಿಮಿಷಗಳ ಕಾಲ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ನೀಡುವಂತೆ ಸಿದ್ದರಾಮಯ್ಯ ಬಳಿ ಮನವಿ ಮಾಡಿದರೆನ್ನಲಾಗಿದೆ. ಹಲವು ವರ್ಷಗಳಿಂದ ಚಾಮರಾಜನಗರ ಜನರ ಜೊತೆ ಒಡನಾಟ ಹೊಂದಿದ್ದೇನೆ. ಅಲ್ಲಿನ ಜನರ ಕಷ್ಟ-ನಷ್ಟಕ್ಕೆ ಸ್ಪಂದಿಸಿದ್ದೇನೆ. ಈ ಬಾರಿಯೂ ಬಿಜೆಪಿ ಟಿಕೆಟ್ ಕೈತಪ್ಪಿದೆ. ಅಲ್ಲಿನ ಜನರ ಒಲವು ನನಗಿರುವ ಕಾರಣ ಕಾಂಗ್ರೆಸ್‌ನಿಂದ ಟಿಕೆಟ್ ಕೊಟ್ಟರೆ ಗೆದ್ದೆ ಗೆಲ್ಲುತ್ತೇನೆ ಎಂದು ಡಾ.ಮೋಹನ್ ವಿಶ್ವಾಸ ವ್ಯಕ್ತಪಡಿಸಿದರೆನ್ನಲಾಗಿದೆ. ಆದರೆ ಸಿದ್ದರಾಮಯ್ಯ ಯಾವುದೇ ಭರವಸೆ ನೀಡದೆ ಪರಿಶೀಲನೆ ಮಾಡುತ್ತೇನೆ ಎಂದಷ್ಟೆ ತಿಳಿಸಿದರೆನ್ನಲಾಗಿದೆ.

ಕೋಟೆ ಶಿವಣ್ಣ ಮನವಿ: ಡಾ.ಮೋಹನ್, ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಹೊರ ನಡೆದ ಕೆಲವೇ ನಿಮಿಷಗಳಲ್ಲಿ ಬಿಜೆಪಿಯಲ್ಲಿ ಮತ್ತೊಬ್ಬ ಆಕಾಂಕ್ಷಿಯಾಗಿದ್ದ ಮಾಜಿ ಸಚಿವ ಕೋಟೆ ಎಂ. ಶಿವಣ್ಣ ಕೂಡ ಅವರನ್ನು ಭೇಟಿ ಮಾಡಿದರು.

ನಾನು ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲೇ ಇದ್ದೆ. ಆಗ ಮಂತ್ರಿ ಕೂಡ ಆಗಿದ್ದೆ. ಆದರೆ ಕೆಲವು ರಾಜಕೀಯ ಭಿನ್ನಾಭಿಪ್ರಾಯದಿಂದ ಕಾಂಗ್ರೆಸ್ ಬಿಟ್ಟಿದ್ದೆ. ಬಿಜೆಪಿಯಲ್ಲಿ ಈಗ ಟಿಕೆಟ್ ಕೈತಪ್ಪಿದೆ. ಕಾಂಗ್ರೆಸ್‌ನಿಂದ ಟಿಕೆಟ್ ಕೊಟ್ಟರೆ ಗೆಲುವು ಸಾಧಿಸುತ್ತೇನೆ ಎಂದು ಶಿವಣ್ಣ ಸಿದ್ದರಾಮಯ್ಯ ಬಳಿ ಮನವಿ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಇದೇ ವೇಳೆ ಚಾಮರಾಜನಗರ ಮಾಜಿ ಸಂಸದ ಕಾಗಲವಾಡಿ ಶಿವಣ್ಣ ಕೂಡ ಪುತ್ರಿಯೊಂದಿಗೆ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ, ಪುತ್ರಿಗೆ ಟಿಕೆಟ್ ನೀಡುವಂತೆ ಮನವಿ ಮಾಡಿದರು.

ಬಿಜೆಪಿ ನಾಯಕರು ಟಿಕೆಟ್‌ಗಾಗಿ ಸಿದ್ದರಾಮಯ್ಯ ಭೇಟಿ ಮಾಡಿರುವ ವಿಚಾರ ತಿಳಿಯುತ್ತಿದ್ದಂತೆ ಮಾಜಿ ಶಾಸಕ ನಂಜುಂಡಸ್ವಾಮಿ, ಸಿದ್ದರಾಮಯ್ಯ ಮನೆಗೆ ದೌಡಾಯಿಸಿದರು. ಹಲವು ವರ್ಷಗಳಿಂದ ನಾನು ಕಾಂಗ್ರೆಸ್‌ನಲ್ಲೇ ಇದ್ದೇನೆ. ಜೊತೆಗೆ ಸ್ಥಳೀಯನಾಗಿದ್ದೇನೆ. ನನಗೇ ಟಿಕೆಟ್ ನೀಡುವಂತೆ ನಂಜುಂಡಸ್ವಾಮಿ ಕೂಡ ಮನವಿ ಮಾಡಿದ್ದಾರೆ.

ಈ ಎಲ್ಲಾ ರಾಜಕೀಯ ಬೆಳವಣಿಗೆ ತರುವಾಯ ಮನೆಯಿಂದ ಹೊರ ಬಂದ ಸಿದ್ದರಾಮಯ್ಯ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಆದರೆ ಪತ್ರಕರ್ತರಿಗೆ ಯಾವುದೇ ಪ್ರತಿಕ್ರಿಯೆ ನೀಡದೆ, ಅಲ್ಲಿಂದ ತೆರಳಿದರು. ಮೈಸೂರಿನ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿ ತಾವು ಹೊಸದಾಗಿ ಮನೆ ನಿರ್ಮಾಣ ಮಾಡುತ್ತಿರುವಲ್ಲಿಗೆ ಭೇಟಿ ನೀಡಿದ ನಂತರ ಮತ್ತೆ ರಾಮಕೃಷ್ಣನಗರದ ಮನೆಗೆ ಬಂದರು. ಆದರೆ ಪತ್ರಕರ್ತರನ್ನು ನೋಡುತ್ತಲೇ ಕಾರಿನಿಂದ ಕೆಳಗಿಳಿಯದೆ ಅಲ್ಲಿಂದ ನಿರ್ಗಮಿಸಿದರು.

ಸಂಸದ ಪ್ರತಾಪ್‌ಸಿಂಹರಿಗೂ ಕಾಂಗ್ರೆಸ್ ಗಾಳ...!

'ಕೈ' ಹಿಡಿಯಲು ಡಿಸಿಎಂ ಡಿಕೆಶಿ ಆಹ್ವಾನ



ಮೈಸೂರು, ಮಾ.15(ಬಿಎಲ್‌ಯು)– ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ವಂಚಿತ ಹಾಲಿ ಸಂಸದ ಪ್ರತಾಪ್ ಸಿಂಹರಿಗೆ ಕಾಂಗ್ರೆಸ್ ಗಾಳ ಹಾಕಿದೆ. ಪ್ರತಾಪ್ ಸಿಂಹ, ತಾವು ಎರಡು ಬಾರಿ ಮಾಡಿರುವ ಅಭಿವೃದ್ಧಿ ಕಾರ್ಯಗಳಿಂದ ತಮಗೆ ಟಿಕೆಟ್ ಸಿಗುತ್ತದೆ ಎಂಬ ಅಚಲ ವಿಶ್ವಾಸ ಹೊಂದಿದ್ದರು. ಆದರೆ ಬಿಜೆಪಿ ಹೈಕಮಾಂಡ್ ಈಗ ಮೈಸೂರು ರಾಜವಂಶಸ್ಥ ಯದುವೀರ್‌ಗೆ ಟಿಕೆಟ್ ನೀಡಿದೆ. ಸಹಜವಾಗಿಯೇ ಪ್ರತಾಪ್ ಸಿಂಹ ಬಹಿರಂಗವಾಗಿಯೇ ತಮ್ಮ ಬೇಸರ ವ್ಯಕ್ತಪಡಿಸಿದ್ದರು. ಕಾಂಗ್ರೆಸ್, ಈಗ ಪ್ರತಾಪ್ ಸಿಂಹ ಸೆಳೆಯಲು ಮುಂದಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರತಾಪ್ ಸಿಂಹರಿಗೆ ಫೋನ್ ಮಾಡಿ ಕಾಂಗ್ರೆಸ್‌ಗೆ ಆಹ್ವಾನ ನೀಡಿದ್ದಾರೆನ್ನಲಾಗಿದೆ. ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಪ್ರತಾಪ್ ಸಿಂಹ, ಡಿ.ಕೆ.ಶಿವಕುಮಾರ್ ನನಗೆ ಕಾಂಗ್ರೆಸ್ ಸೇರುವಂತೆ ಆಹ್ವಾನ ನೀಡಿದ್ದರೆ ನಿಮಗೆ ಹೇಳುತ್ತಿದ್ದಾ... ಎಂದು ಅಡ್ಡ ಗೋಡೆ ಮೇಲೆ ದೀಪ ಇಟ್ಟಂತೆ ಪ್ರತಿಕ್ರಿಯಿಸಿದರು. ಅವರ ಈ ಪ್ರತಿಕ್ರಿಯೆ ತೀವ್ರ ಕುತೂಹಲ ಮೂಡಿಸಿದೆ. ಪ್ರಸ್ತುತ ರಾಜಕಾರಣದಲ್ಲಿ ಯಾರು, ಎಲ್ಲಿ ನೆಲೆ ಕಂಡುಕೊಳ್ಳುತ್ತಾರೋ ಎಂದು ಹೇಳುವುದು ಕಷ್ಟ,



ಮೈಸೂರಿನ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾಜಿ ಮುಡಾ ಅಧ್ಯಕ್ಷ ರಾಜೀವ್ ಶುಕ್ರವಾರ ಭೇಟಿ ಮಾಡಿದರು.

ಕಮಲ ಬಿಟ್ಟು 'ಕೈ' ಹಿಡಿಯುತ್ತಿರುವ ಬಿಜೆಪಿ ಮುಖಂಡ ಹೆಚ್.ವಿ.ರಾಜೀವ್

ಮೈಸೂರು, ಮಾ.15(ಬಿಎಲ್‌ಯು)– ಮಹತ್ವದ ರಾಜಕೀಯ ಬೆಳವಣಿಗೆಯಲ್ಲಿ ಮಾಜಿ ಮುಡಾ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಹೆಚ್.ವಿ.ರಾಜೀವ್ ಕಾಂಗ್ರೆಸ್ ಸೇರ್ಪಡೆಯಾಗುತ್ತಿದ್ದಾರೆ.

ಮೈಸೂರಿನ ಶಾರದಾದೇವಿನಗರದ ಕಲ್ಯಾಣ ಮಂಟಪದಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರ ಭೇಟಿ ಮಾಡಿದ ರಾಜೀವ್, ಕಾಂಗ್ರೆಸ್ ಸೇರ್ಪಡೆ ಕುರಿತು ಮಾತುಕತೆ ನಡೆಸಿದರು.

ಸಿದ್ದರಾಮಯ್ಯ ಅವರಿಗೆ ಪುಷ್ಪಗುಚ್ಛ ನೀಡಿದ ನಂತರ ಕಾಂಗ್ರೆಸ್ ಸೇರ್ಪಡೆ ದಿನಾಂಕವನ್ನು ಖಚಿತಪಡಿಸಿಕೊಂಡರು.

ಮೈಸೂರಿನ ವಿದ್ಯಾರಣ್ಯಪುರಂನ ಭೂತಾಳೆ ಫಿಚ್ ಮೈದಾನದಲ್ಲಿ ಮಾರ್ಚ್ 27ರಂದು ರಾಜೀವ್ ಕಾಂಗ್ರೆಸ್ ಸೇರಲು ಸಿದ್ದರಾಮಯ್ಯ ಸಮ್ಮತಿ ಸೂಚಿಸಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಕೆ.ಆರ್.ಕ್ಷೇತ್ರದ ಬಿಜೆಪಿ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದ ರಾಜೀವ್‌ಗೆ ಅವಕಾಶ ಸಿಕ್ಕಿರಲಿಲ್ಲ. ನಂತರದ ದಿನಗಳಲ್ಲಿ ಬಿಜೆಪಿ ಕಾರ್ಯಕ್ರಮಗಳಿಂದ ರಾಜೀವ್ ಪೂರ್ಣ ಅಂತರ ಕಾಯ್ದುಕೊಂಡಿದ್ದರು. ಜೊತೆಗೆ ರಾಜಕೀಯ ಚಟುವಟಿಕೆಗಳಿಂದಲೂ ದೂರ ಉಳಿದಿದ್ದರು. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ರಾಜೀವ್ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರ್ಪಡೆಯಾಗುತ್ತಿರುವುದು ಸಹಜವಾಗಿಯೇ ಕೇಸರಿ ಪಾಳೆಯದಲ್ಲಿ ಅಚ್ಚರಿ ಮೂಡಿಸಿದೆ.

ಸಿದ್ದರಾಮಯ್ಯ ಭೇಟಿಗೆ ದೌಡಾಯಿಸಿದ ಡಾ.ಮಹದೇವಪ್ಪ



ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಸಹ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಬಿಜೆಪಿ ಟಿಕೆಟ್ ಕೈ ತಪ್ಪಿದವರೆಲ್ಲಾ ಈಗ ಚಾಮರಾಜನಗರದ ಕಾಂಗ್ರೆಸ್ ಟಿಕೆಟ್‌ಗಾಗಿ ತೀವ್ರ ಲಾಬಿಯಲ್ಲಿ ತೊಡಗಿದ್ದು, ಸಿದ್ದರಾಮಯ್ಯ ಅವರನ್ನು ಒಬ್ಬರಾದ ಮೇಲೆ ಒಬ್ಬರು ಭೇಟಿಯಾದ ನಂತರ ಡಾ.ಮಹದೇವಪ್ಪ, ಸಿಎಂ ಭೇಟಿಗೆ ದೌಡಾಯಿಸಿದರು. ಶಾರದಾದೇವಿನಗರದ ಕಲ್ಯಾಣ ಮಂಟಪದಲ್ಲಿ ಹುಟ್ಟೂರು ಸಿದ್ದರಾಮನಹುಂಡಿ ಗ್ರಾಮಸ್ಥರಿಗೆ ಸಿದ್ದರಾಮಯ್ಯ ಆಯೋಜಿಸಿದ್ದ ಭೋಜನ ಕೂಟದಲ್ಲಿ ಭೇಟಿ ಮಾಡಿದ ಡಾ.ಮಹದೇವಪ್ಪ, ಮಗನ ಟಿಕೆಟ್ ಬಗ್ಗೆ ಮಾತುಕತೆ ನಡೆಸಿದರೆನ್ನಲಾಗಿದೆ. ಕಳೆದ ಹತ್ತು ವರ್ಷಗಳಿಂದ ನನ್ನ ಮಗ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದಾನೆ. ಗೆಲ್ಲುವ ಉತ್ಸಾಹದಿಂದ ಅಲ್ಲಿನ ಜನರೊಡನೆ ಒಡನಾಟ ಹೊಂದಿದ್ದಾನೆ. ಈಗ ಯಾರು ಏನೇ ಲಾಬಿ ನಡೆಸಿದರೂ ನನ್ನ ಮಗನಿಗೆ ಟಿಕೆಟ್ ನೀಡುವಂತೆ ಡಾ.ಮಹದೇವಪ್ಪ ಮನವಿ ಮಾಡಿದರು ಎನ್ನಲಾಗಿದೆ.

ಚಾಮರಾಜನಗರದಿಂದ ಸಚಿವ ಡಾ.ಮಹದೇವಪ್ಪ ಸ್ಪರ್ಧೆ ಅವಶ್ಯಕತೆ ಇಲ್ಲ



ಮೈಸೂರು, ಮಾ.15(ಬಿಎಲ್‌ಯು)–ಚಾಮರಾಜನಗರ ಲೋಕಸಭಾ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆಯಾಗಿದ್ದು, ಸಾಮಾನ್ಯ ಕಾರ್ಯಕರ್ತನನ್ನು ಕಣಕ್ಕಿಳಿಸಿದರೂ ಕಾಂಗ್ರೆಸ್ ಗೆಲುವು ನಿಶ್ಚಿತ ಎಂದು ಕೊಳ್ಳೇಗಾಲ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮರಾಜನಗರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲು ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಂತಹ ಹಿರಿಯ ನಾಯಕರನ್ನೇ ಕಣಕ್ಕಿಳಿಸಬೇಕು ಎಂಬ ಅವಶ್ಯಕತೆ ಇಲ್ಲ. ಸಣ್ಣ ಮಟ್ಟದ ನಾಯಕರು ಸ್ಪರ್ಧಿಸಿದರೂ ಗೆಲುವು ಸಾಧಿಸುತ್ತಾರೆ ಎಂದರು. ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ತಾವೂ ಟಿಕೆಟ್ ಆಕಾಂಕ್ಷಿಯಾಗಿದ್ದು, ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಕೂಡ ಆಕಾಂಕ್ಷಿಯಾಗಿದ್ದಾರೆ. ಅಂತಿಮವಾಗಿ ಅಭ್ಯರ್ಥಿಯನ್ನು ಪಕ್ಷದ ಹೈಕಮಾಂಡ್ ನಿರ್ಧರಿಸಲಿದ್ದು, ಯಾರೇ ಅಭ್ಯರ್ಥಿಯಾದರೂ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿ ಗೆಲ್ಲಿಸುತ್ತೇವೆ ಎಂದು ನಂಜುಂಡಸ್ವಾಮಿ ಹೇಳಿದರು.

ಸಿದ್ದರಾಮನಹುಂಡಿ ಸಿದ್ದಪ್ಪಾಜಿ ಕಂಡಾಯ ಪೂಜೆ ಹಿನ್ನೆಲೆ

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಹುಟ್ಟೂರಿನವರಿಗೆ ಭೂರಿ ಭೋಜನ

ಮೈಸೂರು, ಮಾ.15(ಬಿಎಲ್‌ಯು)– ಸಿದ್ದಪ್ಪಾಜಿ ಕಂಡಾಯ ಪೂಜೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಹುಟ್ಟೂರು ಸಿದ್ದರಾಮನಹುಂಡಿ ಗ್ರಾಮಸ್ಥರಿಗೆ ಇಂದು ವಿಶೇಷ ಭೋಜನ ಕೂಟ ಏರ್ಪಡಿಸಿದ್ದರು. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ, ಸೊಸೆ ಸ್ಮಿತಾ, ಪುತ್ರ ಡಾ.ಯತೀಂದ್ರ ಈ ವೇಳೆ ಉಪಸ್ಥಿತರಿದ್ದರು.

ಮೈಸೂರಿಗೆ ನಿನ್ನೆ ಆಗಮಿಸಿದ ಸಿದ್ದರಾಮಯ್ಯ ರಾತ್ರಿ ಸಿದ್ದರಾಮನಹುಂಡಿಗೆ ಭೇಟಿ ನೀಡಿದ್ದರು. ತಮ್ಮ ನಿವಾಸದಲ್ಲಿ ಸಿದ್ದಪ್ಪಾಜಿ ಕಂಡಾಯ ವಿಶೇಷ ಪೂಜೆ ನೆರವೇರಿಸಿದರು. ಪೂಜೆ ತರುವಾಯ ಕುಟುಂಬಸ್ಥರೊಡನೆ ತುಪ್ಪಾ ಕಜ್ಜಾಯದ ಸಿಹಿ ಊಟ ಸವಿದಿದ್ದರು. ಮಾರನೆ ದಿನ ಸಿದ್ದಪ್ಪಾಜಿ ದೇವರಿಗೆ ಮತ್ತೊಮ್ಮೆ ಪೂಜೆ ಸಲ್ಲಿಸಿ ಬಾಡೂಟ ಹಾಕಿಸುವುದು ಸಂಪ್ರದಾಯ.


ಈ ಹಿನ್ನೆಲೆಯಲ್ಲಿ ಸಿದ್ದರಾಮನಹುಂಡಿಯಲ್ಲಿ ಸಿದ್ದರಾಮಯ್ಯನವರ ಮನೆಯವರು ಸಿದ್ದಪ್ಪಾಜಿ ದೇವರಿಗೆ ಇಂದು ಮರಿ ಒಪ್ಪಿಸಿ ಸಿದ್ದಪ್ಪಾಜಿ ಗುಡ್ಡಪ್ಪ ಅವರಿಗೆ ಊಟ ಹಾಕಿಸಿದ್ದರು. ತರುವಾಯ ಗ್ರಾಮದಿಂದ ತೀರ್ಥ ಪ್ರಸಾದ ತಂದು ಪೂಜೆ ಸಲ್ಲಿಸಿ ಮೈಸೂರಿನ ಖಾಸಗಿ ಕಲ್ಯಾಣ ಮಂಟಪದಲ್ಲಿ ಭರ್ಜರಿ ಬಾಡೂಟ ಏರ್ಪಾಡು ಮಾಡಿದ್ದರು. ಸಿದ್ದರಾಮನಹುಂಡಿಯಿಂದ ಬಂದ ಸಾವಿರಾರು ಜನ ಸಿದ್ದರಾಮಯ್ಯನವರ ಮನೆಯ ಸಾಂಪ್ರದಾಯಿಕ ಹಬ್ಬ ಆಚರಣೆಯಲ್ಲಿ ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ರಾಜಕೀಯ ಜಂಜಾಟ ಮರೆತ ಸಿದ್ದರಾಮಯ್ಯ ಊರಿನವರ ಜೊತೆ ಲೋಕಾಭಿರಾಮವಾಗಿ ಹರಟೆಯಲ್ಲಿ ತೊಡಗಿದ್ದರು. ಅಲ್ಲದೆ ಗ್ರಾಮಸ್ಥರೊಡನೆ ಭೋಜನ ಸವಿದರು.



ಮೈಸೂರಿನ ಸಿದ್ದರಾಮನಹುಂಡಿ ಸಿದ್ದಪ್ಪಾಜಿ ಕಂಡಾಯ ಪೂಜೆ ಹಿನ್ನೆಲೆಯಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹುಟ್ಟೂರಿನ ಜನರಿಗೆ ಭೋಜನಕೂಟ ಏರ್ಪಡಿಸಿದ್ದರು.

ಚುನಾವಣಾ ಬಾಂಡ್ ಹೆಸರಲ್ಲಿ ಬಿಜೆಪಿಗೆ ಭಾರೀ ಪ್ರಮಾಣದ ದೇಣಿಗೆ; ಉನ್ನತ ಮಟ್ಟದ ತನಿಖೆಗೆ ಖರ್ಗೆ ಆಗ್ರಹ

ಕಾಂಗ್ರೆಸ್ ಬ್ಯಾಂಕ್ ಖಾತೆಯ 300 ಕೋಟಿ ಸ್ಥಗಿತ ಮಾಡಿದ್ದಾರೆ; ನಾವು ಚುನಾವಣೆ ಎದುರಿಸೋದು ಹೇಗೆ?



ಬೆಂಗಳೂರು, ಮಾ.15(ಕೆಎಂಶಿ)– ಚುನಾವಣಾ ಬಾಂಡ್ ಹೆಸರಿನಲ್ಲಿ ಬಿಜೆಪಿ ಹೇಗೆ ಹಣ ಮಾಡುತ್ತಿದೆ ಎಂಬುದು ಸುಪ್ರೀಂಕೋರ್ಟ್ ನೀಡಿರುವ ಆದೇಶದಿಂದ ಬಹಿರಂಗಗೊಂಡಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ಟೀಕಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಸತ್ಯಹರಿಶ್ಚಂದ್ರನಂತೆ ಮಾತನಾಡುತ್ತಾರೆ, 'ನಾ ಖಾವೂಂಗಾ..., ನಾ ಖಾನೇ ದೂಂಗಾ...' ಎಂದು ಹೇಳುತ್ತಾರೆ. ಚುನಾವಣಾ ಬಾಂಡ್ ವಿವರ ಬಹಿರಂಗಪಡಿಸುವಂತೆ ಸುಪ್ರೀಂಕೋರ್ಟ್ ನೀಡಿರುವ ಆದೇಶದಿಂದ ಯಾವ ರಾಜಕೀಯ ಪಕ್ಷಕ್ಕೆ ಎಷ್ಟು ಹಣ ಸಂದಾಯವಾಗಿದೆ ಎಂಬುದು ಜನತೆಗೆ ಗೊತ್ತಾಗಲಿದೆ ಎಂದರು.

ಎಸ್‌ಬಿಐ ನೀಡಿರುವ ಅಂಕಿ-ಅಂಶಗಳ ಪ್ರಕಾರ ಶೇ.50ರಷ್ಟು ದೇಣಿಗೆಯನ್ನು ಬಿಜೆಪಿ ಪಡೆದರೆ, ಕಾಂಗ್ರೆಸ್ ಪಕ್ಷ ಕೇವಲ ಶೇ.11ರಷ್ಟು ದೇಣಿಗೆ ಪಡೆದಿದೆ.

ಬಿಜೆಪಿ ದೊಡ್ಡ ಪ್ರಮಾಣದಲ್ಲಿ ದೇಣಿಗೆ ಪಡೆಯಲು ಹೇಗೆ ಸಾಧ್ಯ, ಇದರಲ್ಲಿ ಅನೇಕ ನಕಲಿ ದೇಣಿಗೆದಾರರಿದ್ದಾರೆ. ಇವರಲ್ಲಿ ಬಹುತೇಕರು ಇಡಿ, ಆದಾಯ ತೆರಿಗೆ ಹಾಗೂ ಇತರೆ ತನಿಖಾ ಸಂಸ್ಥೆಗಳ ಪ್ರಕರಣ ಎದುರಿಸುತ್ತಿರುವವರು ಇದ್ದಾರೆ.

ಮೊದಲು ಇಡಿ ದಾಳಿ ನಡೆಸಿ, ನಂತರ ಮೋದಿ ಹಾಗೂ ಅವರ ಪಕ್ಷ ಹೆಚ್ಚಿನ ದೇಣಿಗೆ ನೀಡಲು ಬೆದರಿಕೆ ಹಾಕುತ್ತಾರೆ. ಮತ್ತೊಂದೆಡೆ ಕಾಂಗ್ರೆಸ್ ಖಾತೆಯಲ್ಲಿರುವ 300 ಕೋಟಿ ಹಣವನ್ನು ತಡೆ ಹಿಡಿಯಲಾಗಿದೆ ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆ ಎದುರಿಸಲು ಹೇಗೆ ಸಾಧ್ಯ? ವಿರೋಧ ಪಕ್ಷಗಳ ಖಾತೆ ತಡೆದರೆ ಚುನಾವಣೆ ನಡೆಸಲು ಹೇಗೆ ಸಾಧ್ಯ?

ದೇಣಿಗೆ ವಿಚಾರವಾಗಿ ಉನ್ನತಮಟ್ಟದ ತನಿಖೆ ಆಗಬೇಕು, ಇಲ್ಲದಿದ್ದರೆ ಸತ್ಯಾಂಶ ಹೊರಬರುವುದಿಲ್ಲ, ತನಿಖೆ ವೇಳೆ ಬಿಜೆಪಿ ಬ್ಯಾಂಕ್ ಖಾತೆಯನ್ನೂ ತಡೆ ಹಿಡಿಯಬೇಕು ಎಂದು ಒತ್ತಾಯಿಸಿದರು.

ಇಡಿ, ಸಿಬಿಐ ದಾಳಿ ನಂತರ ಬಿಜೆಪಿ ಸೇರಿದ ನಾಯಕರು ನಿರಪರಾಧಿಗಳಾಗಿ, ಅವರ ಪಕ್ಷದಲ್ಲಿ ಸ್ಥಾನಮಾನ ಪಡೆಯುತ್ತಿದ್ದಾರೆ. ಇದೇ ನಾಯಕರು ವಿರೋಧ ಪಕ್ಷದಲ್ಲಿದ್ದಾಗ ಕಳಂಕಿತರಾಗಿರುತ್ತಾರೆ. ಸುಪ್ರೀಂಕೋರ್ಟ್ ಆದೇಶದಿಂದ ಬಿಜೆಪಿ ಮೋಸ ಬಹಿರಂಗವಾಗಿದೆ.

ದೇಣಿಗೆ ವಿಚಾರದಲ್ಲಿ ಪ್ರಧಾನಮಂತ್ರಿ ಹೊಣೆಗಾರಿಕೆ ಹೊರಬೇಕು. 'ಇದು ಮೋದಿ ಸರ್ಕಾರ, ಮೋದಿ ಪಕ್ಷ' ಎಂದು ಎಲ್ಲಾ ವಿಚಾರದಲ್ಲೂ ತಮ್ಮ ಹೆಸರನ್ನೇ ಬಳಸುತ್ತಾರೆ. ಮೋದಿ ಅವರು ತಮ್ಮದು 56 ಇಂಚಿನ ಎದೆ ಎಂದು ಹೇಳಿಕೊಳ್ಳುತ್ತಾರೆ, 'ಬಿಜೆಪಿಯಲ್ಲಿ ಎಲ್ಲವೂ ತನ್ನಿಂದಲೇ' ಎಂದು ಹೇಳಿಕೊಳ್ಳುತ್ತಾರೆ. ದೇಶದಲ್ಲಿ ಏನೇ ಆಗಿದ್ದರೂ ಅದು ತನ್ನಿಂದಲೇ ಎಂದು ಹೇಳುತ್ತಾರೆ. ಅವರ ಪ್ರಕಾರ 2014ರ ನಂತರವಷ್ಟೇ ದೇಶ ಸ್ವಾತಂತ್ರ್ಯ ಪಡೆದಿದೆ ಎನ್ನುವಂತೆ ಬಿಂಬಿಸುತ್ತಾರೆ. ಮೋದಿ ಅವರು ಪ್ರಜಾಪ್ರಭುತ್ವ ಹಾಗೂ ಒಕ್ಕೂಟ ವ್ಯವಸ್ಥೆ ನಾಶ ಮಾಡುತ್ತಿದ್ದಾರೆ. ಜನರ ಮೇಲೆ ಒತ್ತಡ ಹಾಕಿ ಧ್ವನಿ ಅಡಗಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಖರ್ಗೆ ಆರೋಪಿಸಿದರು.

ಶಿಕ್ಷಕರು ಹೊಸ ತಂತ್ರಜ್ಞಾನ ಬಳಸಿಕೊಂಡು ಬೋಧನೆ ಮಾಡಬೇಕು



'ಪ್ರಶಿಕ್ಷಣ ಪರ್ವ'ವನ್ನು ವಿವಿ ಶಿಕ್ಷಣ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಜಿ.ಶೀಲಾ ಉದ್ಘಾಟಿಸಿದರು.

ಮೈಸೂರು, ಮಾ.15(ಎಂಟಿವೈ)– ಶಾಲಾ ಶಿಕ್ಷಕರು ಹೊಸ ತಂತ್ರಜ್ಞಾನ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಬೋಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಜಿ.ಶೀಲಾ ಸಲಹೆ ನೀಡಿದ್ದಾರೆ.

ಮೈಸೂರಿನ ಶ್ರೀ ನಟರಾಜ ಪ್ರತಿಷ್ಠಾನದ ವಾತ್ಸಲ್ಯ ಬಿ.ಇಡಿ ಕಾಲೇಜಿನಲ್ಲಿ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗಾಗಿ ಆಯೋಜಿಸಿದ್ದ 'ಪ್ರಶಿಕ್ಷಣ ಪರ್ವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈಗಿನ ಕಾಲದ ಮಕ್ಕಳು ತಂತ್ರಜ್ಞಾನವನ್ನು ಅತ್ಯದ್ಭುತವಾಗಿ ಬಳಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶಿಕ್ಷಕರು ತಂತ್ರಜ್ಞಾನದ ಬಳಕೆಯಲ್ಲಿ ಮುಂದೆ ಇರಬೇಕು. ಬೋಧಕ ವರ್ಗ ತಂತ್ರಜ್ಞಾನ ಬಳಕೆ ತಿಳಿದಿದ್ದರೆ, ಮಕ್ಕಳಲ್ಲಿರುವ ಜ್ಞಾನವನ್ನು ಹೊರತೆಗೆಯಲು ಸಹಾಯಕವಾಗುತ್ತದೆ. ಶಿಕ್ಷಕರಾಗಿ ನಾವು ಪ್ರತಿಯೊಂದು ವಿಚಾರದಲ್ಲಿಯೂ ಅಪ್ಡೇಟ್ ಆಗಬೇಕು. ಇಲ್ಲವಾದರೆ ಈಗಿನ ಮಕ್ಕಳ ಸಾಮರ್ಥ್ಯ ಅರಿಯಲು ಕಷ್ಟವಾಗುತ್ತದೆ ಎಂದರು. ಶಿಕ್ಷಕ ವೃತ್ತಿ ತರಬೇತಿಯಲ್ಲಿ ಜ್ಞಾನವೇ ನಮ್ಮ ಶಕ್ತಿಯಾಗಬೇಕು. ಮಕ್ಕಳಿಗೆ ಏನನ್ನು ಕಲಿಸಬೇಕು, ಹೇಗೆ ಕಲಿಸಬೇಕು. ನಾವು ಏನು ಕಲಿಯಬೇಕು ಎಂದು ಬೋಧಕ ಸಿಬ್ಬಂದಿಗಳಿಗೆ ತಿಳಿದಿದ್ದರೆ, ಮಕ್ಕಳಿಗೆ ಎನ್ನನ್ನು ಕಲಿಸಬೇಕು ಎಂಬುದನ್ನು ಅರಿಯಬಹುದು. ಪ್ರಶಿಕ್ಷಣಾರ್ಥಿಗಳಾದ ನಿಮ್ಮ ಪ್ರತಿಯೊಂದು ನಡವಳಿಕೆಯನ್ನು ಮಕ್ಕಳು ಗಮನಿಸುತ್ತಾರೆ. ಸಮಾಜಕ್ಕೆ ನಾವೇನು ಕೊಡುಗೆ ಕೊಡಬೇಕು ಎಂಬುದು ನಮ್ಮ ಕೈಯಲ್ಲಿದೆ. ನಮ್ಮ ಭವಿಷ್ಯದ ನಿರ್ಮಾಣಕ್ಕೆ ನಮಗೆ ಏನು ಬೇಕೋ ಅದನ್ನು ನಾವೇ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ನಾಗರಾಜು, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷ ಅಧಿಕಾರಿ ಪ್ರೊ. ಎಸ್.ಶಿವರಾಜಪ್ಪ, ವಾತ್ಸಲ್ಯ ಬಿ. ಇಡಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಸಂತೋಷ್ ಪಟೇಲ್ ಉಪಸ್ಥಿತರಿದ್ದರು.


ನಿಧನ

ಮಹದೇವು



ಮೈಸೂರು: ಮೈಸೂರು ಪಡುವಾರಹಳ್ಳಿ(ವಿನಾಯಕ ನಗರ) ನಿವಾಸಿ ದಿ. ಗಿಡ್ಡಪ್ಪನವರ ಪುತ್ರ ಮಹದೇವು (74) ಇಂದು ನಿಧನರಾದರು. ಇವರು ವಿಜಯನಗರ ಮೊದಲನೇ ಹಂತದ ನಿವಾಸಿಯಾಗಿದ್ದು, ಹೌಸಿಂಗ್ ಬೋರ್ಡ್‌ನಲ್ಲಿ ವರ್ಕ್ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಮೃತರು ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ವರ್ಗವನ್ನು ಅಗಲಿದ್ದಾರೆ. ಪತ್ರಿಕಾ ವಿತರಕ ಎಂ.ರಾಮು ಮೃತರ ಪುತ್ರರಲ್ಲಿ ಒಬ್ಬರು. ಇವರ ಅಂತ್ಯಕ್ರಿಯೆ ನಾಳೆ(ಶನಿವಾರ) ಬೆಳಗ್ಗೆ 10.30ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ರಾಜಕುಮಾರ್



ಮೈಸೂರು: ಮೈಸೂರು ಮಂಡಿಮೊಹಲ್ಲಾ ನಿವಾಸಿ ರಾಜಕುಮಾರ್.ಎನ್ (60) ಅವರು ಶುಕ್ರವಾರ ಸಂಜೆ ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ಸುನೀತಾಬಾಯಿ, ಮಕ್ಕಳಾದ ಚಂದ್ರಶೇಖರ್, ಅಮೃತ್, ಕವಿತಾ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಾ.16 (ಶನಿವಾರ) ಮಧ್ಯಾಹ್ನ 2-30ಕ್ಕೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ

- ಕೇಂದ್ರ ಸರ್ಕಾರದ ಅನುಮೋದನೆ
- ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸ್ತುತ್ಯಾರ್ಹ ಕಾರ್ಯ
- ಶೀಘ್ರವೇ ಕಾಮಗಾರಿ ಆರಂಭ
- ಕ್ರಮಿಸಿದ ಅಂತರಕ್ಕೆ ಟೋಲ್ ಪಾವತಿ
- ದೇಶದಲ್ಲೇ ಮೊದಲ ಯೋಜನೆ

ಮೈಸೂರು, ಮಾ.15(ಬಿಎಲ್‌ಯು)– ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಉಪಗ್ರಹ ಅಥವಾ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ಮಾಡುವ ದೇಶದ ಮೊದಲ ಯೋಜನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಆ ಮೂಲಕ ಎಕ್ಸ್‌ಪ್ರೆಸ್ ವೇನಲ್ಲಿ ಬಳಸಿದ ಅಂತರಕ್ಕಷ್ಟೇ ಟೋಲ್ ಶುಲ್ಕ ಪಾವತಿ ಮಾಡುವ ಎಕ್ಸಿಟ್ ಮತ್ತು ಎಂಟ್ರಿ ಟೋಲ್ ನಿರ್ಮಾಣಕ್ಕೆ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಅನುಮೋದನೆ ನೀಡಿದೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ಸಂಗ್ರಹ ದುಬಾರಿಯಾಗಿತ್ತು. ಮೈಸೂರು ಮತ್ತು ಬೆಂಗಳೂರು ಮಧ್ಯೆ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಬಿಡದಿ ಸೇರಿದಂತೆ ಯಾವುದೇ ಸ್ಥಳಗಳಿಗೆ ಹೋಗಬೇಕೆಂದರೆ ಪೂರ್ಣ ಪ್ರಮಾಣದ ಶುಲ್ಕ ಭರಿಸಬೇಕಿತ್ತು. ಇದು ಸಹಜವಾಗಿಯೇ ವಾಹನ ಸವಾರರ ಆಕ್ರೋಶಕ್ಕೆ ಕಾರಣವಾಗಿತ್ತು.



ಎಕ್ಸ್‌ಪ್ರೆಸ್ ವೇನಲ್ಲಿ ತಾವು ಕ್ರಮಿಸುವುದು ಸ್ವಲ್ಪ ದೂರವಾದರೂ ಪೂರ್ಣ ಪ್ರಮಾಣದ ಟೋಲ್ ಶುಲ್ಕ ಏಕೆ ಕೊಡಬೇಕು ಎಂದು ವಾಹನ ಸವಾರರು ಪ್ರಶ್ನಿಸುತ್ತಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರ್ಕಾರ ಈಗ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ಯೋಜನೆಗೆ ಅನುಮೋದನೆ ನೀಡಿದ್ದು, ಶೀಘ್ರವೇ ಕಾಮಗಾರಿ ಆರಂಭಗೊಳ್ಳಲಿದೆ. ಇದರಿಂದ ಎಕ್ಸ್‌ಪ್ರೆಸ್ ವೇನಲ್ಲಿ ಎಷ್ಟು ದೂರ ಕ್ರಮಿಸುತ್ತಾರೋ ಅಷ್ಟು ದೂರದ ತನಕ ವಾಹನ ಸವಾರರು ಶುಲ್ಕ ಪಾವತಿ ಮಾಡಬಹುದಾಗಿದೆ.

ಇದರಿಂದ ಎಕ್ಸ್‌ಪ್ರೆಸ್ ವೇ ಮಾರ್ಗದಲ್ಲಿರುವ ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಶ್ರೀರಂಗಪಟ್ಟಣ ನಗರಗಳ ಬಳಿ ಎಕ್ಸಿಟ್ ಮತ್ತು ಎಂಟ್ರಿ ದ್ವಾರ ನಿರ್ಮಾಣ ಮಾಡಲಾಗುತ್ತಿದೆ. ಈ ನಗರಗಳ ಸಮೀಪ ಪ್ರವೇಶ ಮತ್ತು ನಿರ್ಗಮನದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಈ ಮೂಲಕ ಬೆಂಗಳೂರು ಬಳಿಯ ಕುಂಬಳಗೋಡು ಟೋಲ್ ಪ್ಲಾಜಾ, ಬಿಡದಿ, ರಾಮನಗರದ ಕೆಂಪೇಗೌಡನದೊಡ್ಡಿ, ಚನ್ನಪಟ್ಟಣದ ತಿಟ್ಟಮಾರನಹಳ್ಳಿ ಅಥವಾ ಮತ್ತಿಕೆರೆ, ಮದ್ದೂರಿನ ನಿಡಘಟ್ಟ, ಮಂಡ್ಯದ ಬೈಪಾಸ್ ಟೋಲ್, ಶ್ರೀರಂಗಪಟ್ಟಣದ ಟೋಲ್ ಸ್ಥಳದಲ್ಲಿ ಪ್ರವೇಶ ಮತ್ತು ನಿರ್ಗಮನದ ಅವಕಾಶ ಕಲ್ಪಿಸಲು ನಿರ್ಧಾರ ಮಾಡಲಾಗಿದೆ.

ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ದೇಶದಲ್ಲೇ ಮೊದಲ ಬಾರಿಗೆ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯ ಯಶಸ್ವಿ ತರುವಾಯ ದೇಶದ ಹಲವು ಹೆದ್ದಾರಿಗಳಲ್ಲಿ ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೊಳಿಸಲು ಕೇಂದ್ರ ಸರ್ಕಾರ ನಿರ್ಧಾರ ಮಾಡಿದೆ.

ಕಳೆದ ವಾರ ಮೈಸೂರಿಗೆ ಭೇಟಿ ನೀಡಿದ್ದ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ, ಮೈಸೂರು ಬೆಂಗಳೂರು ಎಕ್ಸ್ ಪ್ರೆಸ್ ವೇನಲ್ಲಿ ಜಿಪಿಎಸ್ ಆಧಾರಿತ ಯೋಜನೆಗೆ ಅನುಮೋದನೆ ನೀಡುವುದಾಗಿ ಭರವಸೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಮೈಸೂರು ಮಿತ್ರ ಶನಿವಾರ 16 ಮಾರ್ಚ್ 2024

ವೃದ್ಧಾಪ್ಯದಲ್ಲಿ ತಾಯಿಯ ಪೋಷಣೆ ಮಕ್ಕಳ ಕರ್ತವ್ಯ

ಕನ್ನಡ-ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಸಲಹೆ



ಜೆಎಸ್‌ಎಸ್ ವಿಕಲ ಚೇತನರ ಪಾಲಿಟೆಕ್ನಿಕ್ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಉದ್ಘಾಟಿಸಿದರು.

ಮೈಸೂರು, ಮಾ.15(ಎಸ್‌ಪಿಎನ್)– ತಾಯಿ, ಪ್ರಕೃತಿ ಇದ್ದಂತೆ. ತಾಯಿಯ ವೃದ್ಧಾಪ್ಯದಲ್ಲಿ ಮಕ್ಕಳು ಅವರನ್ನು ಪೋಷಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಸಲಹೆ ನೀಡಿದರು.

ಮೈಸೂರು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಮುಚ್ಚಯದಲ್ಲಿರುವ ಜೆಎಸ್‌ಎಸ್ ವಿಕಲ ಚೇತನರ ಪಾಲಿಟೆಕ್ನಿಕ್ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಯಿ ನಮ್ಮನ್ನು ಸಾಕಿ-ಸಲುಹಿ ಉತ್ತಮ ಜೀವನ ರೂಪಿಸುತ್ತಾಳೆ. ಇದರಲ್ಲಿ ಸಮಾಜ, ಪ್ರಕೃತಿಯ ಕೊಡುಗೆಯೂ ಇದೆ. ಯುವ ಪೀಳಿಗೆ ಈ ಬಾಂಧವ್ಯವನ್ನು ಅರ್ಥ ಮಾಡಿಕೊಂಡು ಪ್ರಕೃತಿ ಉಳಿವಿಗೆ ತಮ್ಮ ಕೈಲಾದ ಕೊಡುಗೆ ನೀಡಬೇಕು. ವಿಶೇಷ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡಿ ಸಮಾಜಕ್ಕೆ ಉಪಯುಕ್ತರನ್ನಾಗಿ ಮಾಡುವ ಹೊಣೆಗಾರಿಕೆಯನ್ನು ಜೆಎಸ್‌ಎಸ್ ಸಂಸ್ಥೆ ಹೊತ್ತಿರುವುದು ಶ್ಲಾಘನೀಯ ಎಂದರು.

ವಿದ್ಯಾರ್ಥಿ ದಿಸೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಗಳು ಉತ್ತಮ ಮಾರ್ಗದರ್ಶನ ಹಾಗೂ ಸಾಮಾಜಿಕ ಪ್ರಜ್ಞೆ ತುಂಬುತ್ತದೆ. ಶಿಕ್ಷಣ ನಮಗೆ ಎಲ್ಲವನ್ನು ಕಲಿಸುವ ಉತ್ತಮ ಮಾಧ್ಯಮ. ಸಮಾಜದಿಂದ ಎಲ್ಲವನ್ನು ಪಡೆದುಕೊಂಡ ನಾವು ಸಮಾಜಕ್ಕೆ ಉತ್ತಮ ಸೇವೆ ನೀಡುವುದನ್ನು ಕಲಿಯಬೇಕು ಎಂದು ಯುವಕರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಶೇಷಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ.ಇಳಂಗೋವನ್, ಉಪನ್ಯಾಸಕರಾದ ಡಾ.ಉಮಾ, ಕೆ.ಮಹದೇವಸ್ವಾಮಿ, ಶ್ರೀಕಂಠಸ್ವಾಮಿ, ಎಂ.ಜಿ ನಯನ, ಬಿ.ಶ್ರೀನಿವಾಸ್ ಇತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಇಂದು ಲೋಕ ಸಮರ ಫಿಕ್ಸ್

ಅವರನ್ನು ಬೆಂಬಲಿಸಿತ್ತು. ಅವರು ನಂತರ ಬಿಜೆಪಿ ಬೆಂಬಲಿಸಿದ್ದರು. ಅಂದು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಜೆಡಿಎಸ್-ಕಾಂಗ್ರೆಸ್ ಮೈತ್ರಿಕೂಟ ಕ್ಷೇತ್ರ ಹೊಂದಾಣಿಕೆ ಮಾಡಿಕೊಂಡು, ಇಬ್ಬರೂ ಕೇವಲ ತಲಾ ಒಂದೊಂದು ಕ್ಷೇತ್ರದಲ್ಲಿ ಜಯ ಗಳಿಸಿದ್ದರು.

ಅಂದು ಕಾಂಗ್ರೆಸ್ ಶೇ.32.11 ರಷ್ಟು, ಜೆಡಿಎಸ್‌ಗೆ ಶೇ.9.74ರಷ್ಟು ಮತ ಗಳಿಸಿದ್ದವು. 2024ರಲ್ಲಿ ನಡೆಯುತ್ತಿರುವ ಸಾರ್ವತ್ರಿಕ ಚುನಾವಣೆಗೆ ಚಿತ್ರಣವೇ ಬದಲಾಗಿದ್ದು, ಈ ಬಾರಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಕ್ರಮವಾಗಿ 25-3 ಕ್ಷೇತ್ರಗಳಲ್ಲಿ ಕಣಕ್ಕಿಳಿಯುತ್ತಿವೆ. ಬಿಜೆಪಿ ಈಗಾಗಲೇ 20 ಕ್ಷೇತ್ರಗಳಿಗೆ, ಕಾಂಗ್ರೆಸ್ 7 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದರೆ, ಜೆಡಿಎಸ್ ಇನ್ನಷ್ಟೇ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಬೇಕಿದೆ. ಆದರೆ ಮೂರೂ ಪಕ್ಷಗಳು ಚುನಾವಣಾ ಸಿದ್ಧತೆ ಮಾಡಿಕೊಂಡು ಹೋರಾಟಕ್ಕೆ ಅಣಿಯಾಗಿವೆ. ಅದರಲ್ಲೂ ಆಡಳಿತಾರೂಢ ಕಾಂಗ್ರೆಸ್, ಸರ್ಕಾರಿ ವೆಚ್ಚದಲ್ಲೇ ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ನಡೆಸುತ್ತಿರುವ ಜೊತೆಗೆ ಸುದ್ದಿ ಮಾಧ್ಯಮಗಳಿಗೆ ಸರ್ಕಾರದ ಜಾಹೀರಾತುಗಳ ಸುರಿಮಳೆಯೇ ಆಗುತ್ತಿದೆ. ಈ ಬಾರಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಎನ್‌ಡಿಎ ಮೈತ್ರಿಕೂಟದ ನಡುವೆ ಜಿದ್ದಾಜಿದ್ದಿ ಹೋರಾಟ ನಡೆಯಲಿದೆ. ಕಾಂಗ್ರೆಸ್ ಕನಿಷ್ಠ 20 ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿದ್ದರೆ, ಮೈತ್ರಿಕೂಟ ಎಲ್ಲಾ 28 ಕ್ಷೇತ್ರಗಳ ಮೇಲೂ ಕಣ್ಣಿಟ್ಟಿದೆ.

ಮಂಡ್ಯದಿಂದ ನಿಖಿಲ್ ಸ್ಪರ್ಧೆ ಸುಳಿವು

ಪ್ರವೇಶಿಸಿದ ಕುಮಾರಸ್ವಾಮಿ, 'ನಿಮ್ಮ ಭಾವನೆಯನ್ನು ತಿಳಿಸಿದ್ದೀರಿ. ನಿಮ್ಮ ಆಸೆಗೆ ಧಕ್ಕೆ ತರುವುದಿಲ್ಲ' ಎಂದು ಹೇಳಿದಾಗಲೂ ಕಾರ್ಯಕರ್ತರ ಘೋಷಣೆ ಮುಂದುವರೆದೇ ಇತ್ತು. ಮೂರ್‍ನಾಲ್ಕು ಬಾರಿ ತಮ್ಮ ಮೊದಲಿನ ಮಾತನ್ನು ಪುನರುಚ್ಚರಿಸಿದ ಕುಮಾರಸ್ವಾಮಿ, ಇತರ ನಾಯಕರು ಮಾತನಾಡಲು ಅವಕಾಶ ನೀಡುವಂತೆಯೂ, ಕೊನೆಯದಾಗಿ ತಾವು ಮಾತನಾಡುವುದಾಗಿ ತಿಳಿಸಿದ ನಂತರ ಕಾರ್ಯಕರ್ತರು ಘೋಷಣೆ ನಿಲ್ಲಿಸಿದರು.

ಈ ಚುನಾವಣೆಯಲ್ಲಿ ವಿರೋಧಿಗಳಿಗೆ ತಕ್ಕ ಉತ್ತರ: ಸಭೆಯ ಕೊನೆಯಲ್ಲಿ ಮಾತನಾಡಿದ ಕುಮಾರಸ್ವಾಮಿ, ನಿಮ್ಮ (ಕಾರ್ಯಕರ್ತರು) ಭಾವನೆಯನ್ನು ವ್ಯಕ್ತಪಡಿಸಿದ್ದೀರಿ. ಯಾವುದೇ ಕಾರಣಕ್ಕೂ ನಿಮ್ಮ ಆಸೆಗೆ ನಾನು ಧಕ್ಕೆ ತರುವುದಿಲ್ಲ. ನಿಖಿಲ್‌ಗೂ ಕೂಡ ಹೇಳುತ್ತೇನೆ ಎಂದು ಹೇಳುವ ಮೂಲಕ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆಯ ಬಗ್ಗೆ ಪರೋಕ್ಷವಾಗಿ ಸುಳಿವು ನೀಡಿದರು. ಮಾ.19ರಂದು ಹೃದಯ ಶಸ್ತ್ರ ಚಿಕಿತ್ಸೆಗಾಗಿ ತಾವು ಚೆನ್ನೈಗೆ ಹೋಗುತ್ತಿದ್ದು, ಆಪರೇಷನ್ ಬಳಿಕ ಎರಡು ದಿನ ವಿಶ್ರಾಂತಿ ಪಡೆದು ವಾಪಸ್ಸಾಗುತ್ತಿದ್ದೇನೆ. ಮಾ.24ರ ನಂತರ ಮಂಡ್ಯ ಕಾರ್ಯಕರ್ತರ ಭಾವನೆಗೆ ತಕ್ಕಂತೆ ಅಭ್ಯರ್ಥಿ ಘೋಷಣೆ ಮಾಡುತ್ತೇನೆ. 2019ರ ಚುನಾವಣೆಯಲ್ಲಿ ನಮಗಾದ ಸೋಲಿಗೆ ಈ ಚುನಾವಣೆಯಲ್ಲಿ ಉತ್ತರ ಕೊಡಬೇಕು ಎಂದು ಕರೆ ನೀಡಿದರು.

ಜೆಡಿಎಸ್ ಕಷ್ಟದಲ್ಲಿದ್ದಾಗಲೆಲ್ಲಾ ಮಂಡ್ಯ ಜನ ಕೈಹಿಡಿದಿದ್ದಾರೆ. ಕಳೆದ ಚುನಾವಣೆಯಲ್ಲಿ ನಿಖಿಲ್ ಸೋಲಿಗೆ ಮಂಡ್ಯದ ಜನರು ಕಾರಣ ಎಂಬುದನ್ನು ನಾನು ಒಪ್ಪುವುದಿಲ್ಲ. ಇಲ್ಲಿನ ಜನರು ಅವರಿಗೆ ಐದೂಮುಕ್ಕಾಲು ಲಕ್ಷ ಮತ ಕೊಟ್ಟಿದ್ದಾರೆ. ಕುತಂತ್ರ ರಾಜಕಾರಣದಿಂದ ನಿಖಿಲ್ ಸೋತಿದ್ದಾನೆಯೇ ಹೊರತು, ಮಂಡ್ಯ ಜನರಿಂದ ಅಲ್ಲ. ಈ ಬಾರಿಯ ಚುನಾವಣೆಯಲ್ಲಿ ಮಂಡ್ಯವನ್ನು ಕಳೆದುಕೊಂಡರೆ ನಾವಿದ್ದೂ ಸತ್ತಂತೆ ಎಂದು ಭಾವನಾತ್ಮಕವಾಗಿ ನುಡಿದರು.

ದೇವೇಗೌಡರಿಗೆ ರಾಜಕೀಯ ಶಕ್ತಿ ಕೊಟ್ಟಿದ್ದು ಹಾಸನಕ್ಕಿಂತ ಮಂಡ್ಯ ಜಿಲ್ಲೆ. ನಮ್ಮ ಕುಟುಂಬ ಯಾರಿಗೂ ದ್ರೋಹ ಮಾಡಿಲ್ಲ. ಈ ಜಿಲ್ಲೆಯ ಒಬ್ಬರನ್ನು ಬೆಳೆಸಲು ನಾವು ಹಾಗೂ ನಮ್ಮ ಕುಟುಂಬ ನಮ್ಮ ಕೈಲಾದ ಶಕ್ತಿಯನ್ನು ಧಾರೆ ಎರೆದಿದ್ದೇನೆ ಎಂದ ಕುಮಾರಸ್ವಾಮಿ, ನಮ್ಮ ಕುಟುಂಬಕ್ಕೆ ಮಂಡ್ಯದ ಜನ ಎಂದೂ ಅನ್ಯಾಯ ಮಾಡಿಲ್ಲ. ರಾಜಕಾರಣದಲ್ಲಿ ನಮ್ಮಿಂದ ಕೆಲವು ತಪ್ಪುಗಳಾಗಿರಬಹುದು. ತಪ್ಪು ಮಾಡುವುದು ಸಹಜ. ಆದರೆ ಅದನ್ನು ತಿದ್ದಿಕೊಳ್ಳಬೇಕು. ಈ ಚುನಾವಣೆಯಲ್ಲಿ ಮಂಡ್ಯದ ಜನರು ಜೆಡಿಎಸ್‌ಗೆ ಅವಕಾಶ ನೀಡುತ್ತಾರೆ. ನಾವು ಗೆದ್ದೇ ಗೆಲ್ಲುತ್ತೇವೆ ಎಂಬ ವಿಶ್ವಾಸ ನನಗಿದೆ ಎಂದರು.

ಮಂತ್ರಿಸ್ಥಾನ ಬೇಡಿದ್ದರು: ಹೊಟ್ಟೆಪಾಡಿಗಾಗಿ ಬಿಜೆಪಿ ಜೊತೆ ಜೆಡಿಎಸ್‌ನವರು ಹೋಗಿದ್ದಾರೆ ಎಂಬ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಟೀಕೆಗೆ ತಿರುಗೇಟು ಕೊಟ್ಟ ಕುಮಾರಸ್ವಾಮಿ, ಇವರೇನು ಮಹಾರಾಜರ ವಂಶದಿಂದ ಬಂದವರೇ? ಇವರ ಹಿನ್ನೆಲೆ ಏನೆಂಬುದು ನನಗೆ ಗೊತ್ತಿದೆ. 2004ರ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ಮಂತ್ರಿಸ್ಥಾನಕ್ಕಾಗಿ ಅವರು ನನ್ನ ಬೆನ್ನು ಬಿದ್ದಿದ್ದರು. ಹಿರಿತನದ ಆಧಾರದಲ್ಲಿ ಅಂದು ಶ್ರೀರಂಗಪಟ್ಟಣ ಶಾಸಕಿಯಾಗಿದ್ದ ವಿಜಯಲಕ್ಷ್ಮಮ್ಮ ಅವರಿಗೆ ನೀಡಬೇಕಾದ ಮಂತ್ರಿ ಪಟ್ಟವನ್ನು ಇವರಿಗೆ ಕಟ್ಟಿದ ನಮ್ಮ ಬಗ್ಗೆ ಲಘುವಾಗಿ ಮಾತನಾಡಲು ಚಲುವರಾಯಸ್ವಾಮಿಗೆ ಯಾವ ನೈತಿಕತೆ ಇದೆ ಎಂದು ಕಿಡಿಕಾರಿದರು.

ಸುಮಲತಾ ನನ್ನ ಅಕ್ಕ ಇದ್ದಂತೆ: ಸಂಸದೆ ಸುಮಲತಾ ಅವರು ನನಗೆ ಅಕ್ಕನಿದ್ದಂತೆ. ಚುನಾವಣೆಯಲ್ಲಿ ಆಗಿರುವ ಸಣ್ಣಪುಟ್ಟ ವ್ಯತ್ಯಾಸಗಳನ್ನು ಆ ಭಗವಂತ ಮಾಡಿಸಿದ್ದಾನೆ. ಅದನ್ನೆಲ್ಲಾ ಮರೆತು ಮುಂದೆ ಸಾಗಬೇಕು. ಅಂಬರೀಷ್ ಮತ್ತು ಸ್ನೇಹ ಬಹಳ ಉತ್ತಮವಾಗಿತ್ತು. 1996ರಲ್ಲಿ ಅಂಬರೀಷ್ ಅವರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದಾಗ ಮಂಡ್ಯ ಲೋಕಸಭಾ ಕ್ಷೇತ್ರದ ಟಿಕೆಟ್ ಕೊಟ್ಟಿದ್ದು ಜೆಡಿಎಸ್ ಎಂದ ಅವರು, ಡಾ. ರಾಜ್‌ಕುಮಾರ್ ಹಾಗೂ ಅಂಬರೀಷ್ ವಿಧಿವಶರಾದಾಗ ನಾನು ಮುಖ್ಯಮಂತ್ರಿಯಾಗಿದ್ದೆ. ಅವರಿಬ್ಬರಿಗೂ ಕಂಠೀರವ ಸ್ಟುಡಿಯೋದಲ್ಲಿ ಸಮಾಧಿಗೆ ಜಾಗ ಕಲ್ಪಿಸಿಕೊಟ್ಟೆ ಎಂದು ಹೇಳಿದರು. ಕಾಂಗ್ರೆಸ್ಸಿಗರು ನಾಟಿ ಸ್ಟೈಲ್‌ನಲ್ಲಿ ಚುನಾವಣೆ ಮಾಡುತ್ತೇವೆ ಎಂದು ಹಣದ ಹೊಳೆ ಹರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಆದರೆ ಅದು ನಡೆಯುವುದಿಲ್ಲ. ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ್ ಮತ್ತು ನಮ್ಮ ಕುಟುಂಬದ ವಿರುದ್ಧ ಆರೋಪ ಮಾಡುತ್ತಿರುವ ಕಾಂಗ್ರೆಸ್ಸಿಗರಿಗೆ ಜನರೇ ತಕ್ಕ ಪಾಠ ಕಲಿಸುತ್ತಾರೆ. ಬಿಜೆಪಿ ವರಿಷ್ಠರ ಒತ್ತಾಯದ ಮೇರೆಗೆ ಡಾ. ಮಂಜುನಾಥ್ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದು, ಅವರು ಮುಂದಿನ ಕೇಂದ್ರ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿ ದೇಶಕ್ಕೆ ಉತ್ತಮ ಸೇವೆ ಸಲ್ಲಿಸುತ್ತಾರೆ ಎಂಬ ಆತ್ಮವಿಶ್ವಾಸ ನಮಗಿದೆ ಎಂದರು.

ವೇದಿಕೆಯಲ್ಲಿ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಹೆಚ್.ಪಿ.ಮಂಜು, ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಡಾ. ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಕೆ.ಟಿ. ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್. ರಾಮಚಂದ್ರ, ಉಪಾಧ್ಯಕ್ಷ ಎಂ.ಎಸ್. ರಘುನಂದನ್, ಮುಖಂಡರಾದ ಅಪ್ಪೇರಹಳ್ಳಿ ವಿವೇಕಾನಂದ ಎಂ.ಎಸ್.ಗುರುಚರಣ್, ನೆಲ್ಲಿಗೆರೆ ಬಾಲು, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ನಗರ ಸಭೆ ಮಾಜಿ ಅಧ್ಯಕ್ಷ ಮಂಜು ಇನ್ನಿತರರಿದ್ದರು.

ಪಠ್ಯೇತರ ಚಟುವಟಿಕೆಗಳಿಂದ ಬದುಕುವ ಕಲೆ ಕರಗತ

ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ॥ ಕೆ.ಎಂ.ಮಹದೇವನ್



ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಶುಕ್ರವಾರ ಕಾಲೇಜಿನ 'ಜ್ಞಾನವಾಹಿನಿ' ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್ ಚಟುವಟಿಕೆ ಹಾಗೂ ಕನ್ನಡ ನುಡಿಹಬ್ಬ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್ ಉದ್ಘಾಟಿಸಿದರು.

ಮೈಸೂರು,ಮಾ.15(ಎಂಟಿವೈ)– ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕಾದರೆ ವಿದ್ಯಾರ್ಥಿಗಳು ಶಾಲಾ-ಕಾಲೇಜು ಅವಧಿಯಲ್ಲಿಯೇ ಪಠ್ಯೇತರ ಚಟುಚಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ. ಕೆ.ಎಂ.ಮಹದೇವನ್ ಸಲಹೆ ನೀಡಿದ್ದಾರೆ.

ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಶುಕ್ರವಾರ ಕಾಲೇಜಿನ 'ಜ್ಞಾನವಾಹಿನಿ' ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್ ಚಟುವಟಿಕೆ ಹಾಗೂ ಕನ್ನಡ ನುಡಿಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದು ಒಂದು ಭಾಗವಾದರೆ, ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಮತ್ತೊಂದು ಭಾಗವಾಗಿದೆ. ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳು ವಿಕಾಸವಾಗುವ ದರೊಂದಿಗೆ ಬದುಕುವ ಕಲೆಯನ್ನು ಕರಗತ ಮಾಡಿಕೊಳ್ಳಬಹುದು. ಇತ್ತೀಚಿನ ದಿನಗಳಲ್ಲಿ ಕರಕುಶಲ, ಯೋಗ, ನೃತ್ಯ, ಸಂಗೀತ, ಪ್ರದರ್ಶಕ ಕಲೆ ಸೇರಿದಂತೆ ಇನ್ನಿತರ ಪಠ್ಯೇತರ ಚಟುವಟಿಕೆಗಳಿಗೂ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ. ಇದರಿಂದ ಪ್ರದರ್ಶಕ ಕಲೆಗಳಿಗೂ ಮಹತ್ವ ಹೆಚ್ಚಾಗಿರುವುದನ್ನು ಮನಗಾಣಬಹುದು ಎಂದರು.

ವಿಜ್ಞಾನ, ಕಲಾ ಹಾಗೂ ವಾಣಿಜ್ಯ ವಿಷಯ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಆಸಕ್ತಿಯಿದ್ದರೆ ಪ್ರದರ್ಶಕ ಕಲೆಗಳನ್ನು ಕಲಿಯಬಹುದು. ಉಪನ್ಯಾಸಕನಾದರೆ ಯುಜಿಸಿ ಶ್ರೇಣಿಯ ವೇತನ ಪಡೆಯಬಹುದು ಎಂದುಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ ಆದರೆ, ವಿಜ್ಞಾನದೊಂದಿಗೆ ಪ್ರದರ್ಶಕ ಕಲೆಗಳತ್ತ ಗಮನ ಹರಿಸಬೇಕು ಎಂದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಭಾಷಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಭೀಮರಾಜು ಈರೇಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ತಾಳ್ಮೆ ಇರಬೇಕು. ಅದರಲ್ಲೂ ಪರಿಶ್ರಮ ಪಟ್ಟು ಸಾಧನೆ ಮಾಡುವ ಕನಸು ಕಾಣಬೇಕು. ಇಂದಿನ ಪರಿಸ್ಥಿತಿಯಲ್ಲಿ ವಿಜ್ಞಾನ, ತಂತ್ರಜ್ಞಾನ ಮುಂದುವರೆದಿದ್ದು, ಬೆರಳ ತುದಿಯಲ್ಲಿಯೇ ಪ್ರಪಂಚದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ತಿಳಿಯಬಹುದಾಗಿದೆ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸೃಜನಶೀಲತೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಕನಸು ಕಾಣುವಿಕೆಯಲ್ಲೂ ಹೊಸತನ ಇರಬೇಕು. ಅದರಲ್ಲಿ ಸೃಜನಶೀಲತೆ ಮೆರೆಯಬೇಕು. ಹೊಸತನದ ತುಡಿತ ಸದಾ ಇರಬೇಕು. ಎಲ್ಲಾ ಕ್ಷೇತ್ರಗಳಲ್ಲಿ ಹೊಸತನದ ಅನಿವಾರ್ಯತೆ ಸೃಷ್ಟಿಯಾಗಿದೆ. ಆ ನಿಟ್ಟಿನಲ್ಲಿ ಓದಿನೊಂದಿಗೆ ಸಾಧನೆ ಮಾಡುವ ಹಂಬಲ ನಿಮ್ಮದಾಗಿರಲಿ. ಪೋಷಕರು ಹಾಗೂ ವಿದ್ಯಾರ್ಜನೆ ಮಾಡುತ್ತಿರುವ ಬೋಧಕ ವರ್ಗವನ್ನು ಕಡೆಗಣಿಸದೇ, ಸದಾ ಗೌರವದಿಂದ ಕಂಡಾಗ ಮಾತ್ರ ಸತ್ಪ್ರಜೆಗಳಾಗಿ ಹೊರಹೊಮ್ಮಬಹುದು ಎಂದರು.

ಯುವರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಕೆ ಮಹೇಶ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ನೌಕಾದಳದ ಲೆಫ್ಟಿನೆಂಟ್ ಕಮಾಂಡರ್ ಆರ್. ವಿನಯ್, ಜ್ಞಾನವಾಹಿನಿ ಸಮಿತಿ ಸಂಚಾಲಕ ಜಿ.ಕೃಷ್ಣಮೂರ್ತಿ, ಐಕ್ಯೂಎಸಿ ಸಂಯೋಜಕ ಪ್ರೊ.ಬಿ.ಎಂ.ವೆಂಕಟೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಕೆ.ಅಜಯ್‌ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನ ಮೂವರು ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮಟ್ಟದ ಗೌರವ



ಮೈಸೂರು, ಮಾ.15–ಭಾರತ ಸರ್ಕಾರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯದಿಂದ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಮೂವರು ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಮುಂಬೈನ ಠಾಕೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿಯಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆಯ ವತಿಯಿಂದ ಆಯೋಜಿಸಿದ್ದ ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆಯಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪಿಯೂಷ್ ಗೋಯಲ್, ಡಿಸಿಎ ಕಾರ್ಯದರ್ಶಿ ಭಾರತ್ ಹರಮ್ಸ್ ಲಾಲ್ ಖೇರಾ ಅಡ್ಡಲ್, ಸಹ ಕಾರ್ಯದರ್ಶಿ ಶಾಂತಮನು, ಎಂಓಸಿಎ, ಎಫ್ ಮತ್ತು ಪಿಡಿ ಹಣಕಾಸು ಸಲಹೆಗಾರ ನಿಧಿ ಖರೆ, ಓಎಸ್‌ಡಿ, ಡಿಓಸಿಎ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್, ಜಂಟಿ ಕಾರ್ಯದರ್ಶಿ ಅನೂಪ್ ಮಿಶ್ರಾ ಅವರು ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿ ಗಳಾದ ಅಮೂಲ್ಯ ಎನ್.ಪ್ರಸಾದ್, ನಿಖಿತಾ ಸುಸಾನ್ ಈಪೆನ್ ಮತ್ತು ರೋಹನ್ ವಿ.ಗಂಗಾಡ್ಕರ್ ಅವರನ್ನು ಗೌರವಿಸಿದರು. ಈ ವಿದ್ಯಾರ್ಥಿಗಳು ಇತ್ತೀಚೆಗೆ ಪುದುಚೇರಿಯ ಡಾ. ಅಂಬೇಡ್ಕರ್ ಸರ್ಕಾರಿ ಕಾನೂನು ಕಾಲೇಜಿನಲ್ಲಿ ನಡೆದಿದ್ದ ಅಖಿಲ ಭಾರತ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ವಿಜೇತರಾಗಿದ್ದರು. ಜೊತೆಗೆ ರೋಹನ್ ವಿ.ಗಂಗಾಡ್ಕರ್ ಅವರು ಅತ್ಯುತ್ತಮ ಕಾನೂನು ಸಂಶೋಧಕ ಗೌರವಕ್ಕೆ ಪಾತ್ರರಾಗಿದ್ದಾರೆ.

ಮಹಿಳೆಯರು ಸಮಾಜದಲ್ಲಿ ಮಾದರಿಯಾಗಿರಬೇಕು

ಎಂಎಲ್‌ಸಿ ಮಂಜೇಗೌಡ



ಮೈಸೂರು, ಮಾ.15– ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹ ನೀಡುತಿರುವುದರಿಂದ ಮಹಿಳೆಯರು ಸಮಾಜದಲ್ಲಿ ಮಾದರಿಯಾಗಿರಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ನಗರದ ಜಗನ್ಮೋಹನ ಅರಮನೆಯಲ್ಲಿ ಶ್ರೀರಾಂಪುರದ ನವೋದಯ ಚಾರಿಟೇಬಲ್ ಸೊಸೈಟಿ ವತಿಯಿಂದ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಸಮಾನತೆ ಬರಬೇಕಾದರೆ ಹೆಣ್ಣು ಮಕ್ಕಳಿಗೆ ಸಮಾನ ಪ್ರಾಶಸ್ತ್ಯ ನೀಡಬೇಕು. ಇಂದು ಹೆಣ್ಣು ಮಕ್ಕಳು ಎಲ್ಲಾ ರಂಗಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಆದರೆ ಕಡಿಮೆ ಪ್ರಮಾಣದಲ್ಲಿದ್ದಾರೆ. ರಾಜಕೀಯ, ಸರ್ಕಾರಿ ಕೆಲಸ ಎಲ್ಲದರಲ್ಲೂ ಮಹಿಳೆಯರಿಗೆ ಸರ್ಕಾರ ಶೇ.50 ಮೀಸಲಾತಿಯನ್ನು ಕೊಡಬೇಕು ಎಂದರು. ಬದುಕಿನ ಎಲ್ಲಾ ಸವಾಲುಗಳನ್ನು ಎದುರಿಸುತ್ತಾ, ನೋವುಗಳನ್ನು ನುಂಗಿಕೊಂಡು ಗಂಡ, ಮಕ್ಕಳಿಗೋಸ್ಕರ ತನ್ನ ಜೀವನವನ್ನೇ ತ್ಯಾಗ ಮಾಡುವ ಮಹಾತಾಯಿ ಹೆಣ್ಣು. ಆ ಹೆಣ್ಣನ್ನು ಪ್ರತಿಯೊಬ್ಬರು ಗೌರವಿಸಬೇಕು. ಮಗಳಾಗಿ, ಪತ್ನಿಯಾಗಿ, ಪತ್ನಿಯಾಗಿ, ತಂಗಿಯಾಗಿ, ತಾಯಿಯಾಗಿ, ಸ್ನೇಹಿತೆಯಾಗಿ ಎಲ್ಲಾ ಸ್ಥಾನಗಳನ್ನು ತುಂಬುವ ಏಕೈಕ ಶಕ್ತಿ ಮಹಿಳೆಯರಿಗಿದೆ. ಆದ್ದರಿಂದ ಹೆಣ್ಣು ತ್ಯಾಗಮಯಿಯಾಗಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಣ್ಣನ್ನು ಎದುರು ಹಾಕಿಕೊಂಡು ಸರ್ಕಾರ ನಡೆಸಲು ಸಾಧ್ಯವಿಲ್ಲದ್ದರಿಂದ ಹೆಣ್ಣಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದಾರೆ. ಸರ್ಕಾರದ ಎಲ್ಲಾ ಯೋಜನೆ ಸವಲತ್ತುಗಳನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಒಗ್ಗಟ್ಟಿನಲ್ಲಿ ಬಲವಿದೆ ಎಲ್ಲರು ಸಂಘಟಿತರಾಗಿ ನಿಮ್ಮ ಹಕ್ಕುಗಳನ್ನು ಪಡೆಯಿರಿ. ಹೊರ ದೇಶದ ಮಹಿಳೆಯರು ಭಾರತದ ಮಹಿಳೆಯರ ಸಂಸ್ಕೃತಿಯನ್ನು ಅನುಸರಿಸುತ್ತಿದ್ದಾರೆ. ನಿಮ್ಮ ಮಕ್ಕಳಿಗೆ ಶಿಕ್ಷಣ ನೀಡಿ, ಬೇರೆ ಮಕ್ಕಳೊಂದಿಗೆ ನಿಮ್ಮ ಮಕ್ಕಳನ್ನು ಹೋಲಿಕೆ ಮಾಡಬೇಡಿ ಎಂದ ಅವರು, ಎಲ್ಲರಿಗೂ ಶುಭಾಶಯ ಕೋರಿದರು.

ಸಮಾರಂಭದಲ್ಲಿ ಸಿಸ್ಟರ್ ಜ್ಯೋತಿ, ಸ್ವಾಮಿ, ದೇವಸ್ಸಿ ಕಾಡ ಪರಂಬಿಲ್, ಉಷಾದೇವಿ, ಶೈನಿ ಮಂಗರಿಲ್, ವೀಣಾ ವಿಲಿಯಂ, ಫಾದರ್ ಜಾನ್ ಫೀಟರ್, ಶೋಭಾ, ದಿನೇಶ್‌ಗೌಡ ಹಾಜರಿದ್ದರು.

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಡಿವೈಡರ್ ಹಾರಿ ಬಸ್‌ಗೆ ಡಿಕ್ಕಿ ಹೊಡೆದ ಕಾರು

● ನಾಲ್ಕರಿಗೆ ಗಾಯ ● ರಾಮನಗರ ಬಳಿ ಅಪಘಾತ



ಮೈಸೂರು, ಮಾ.15(ಎಂಕೆ)– ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕೆಎಸ್‌ಆರ್‌ಟಿಸಿ ಬಸ್‌ಗೆ ಕಾರೊಂದು ಡಿಕ್ಕಿ ಹೊಡೆದು ನಾಲ್ವರು ಗಾಯಗೊಂಡಿರುವ ಘಟನೆ ರಾಮನಗರ ತಾಲೂಕಿನ ತಾಲೂಕಿನ ಬಿಡದಿ ಬಳಿಯ ಮಾದಾಪುರ ಗೇಟ್ ಬಳಿ ಸಂಭವಿಸಿದೆ.

ಮೈಸೂರಿನಿಂದ ಬೆಂಗಳೂರು ಕಡೆಗೆ ಹೊರಟಿದ್ದ ಕೆಎಸ್‌ಆರ್‌ಟಿಸಿಯ ಅಶ್ವಮೇಧ ಬಸ್‌ಗೆ ಬೆಂಗಳೂರು ಕಡೆಯಿಂದ ಮೈಸೂರು ಕಡೆಗೆ ಬರುತ್ತಿದ್ದ ಕಾರೊಂದು ಶುಕ್ರವಾರ ಮಧ್ಯಾಹ್ನ 12.15ರ ಸುಮಾರಿಗೆ ಡಿವೈಡರ್ ಹಾರಿ ಬಂದು ಬಸ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನಲ್ಲಿದ್ದ ನಾಲ್ವರು ಗುಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಕಾರು ಸಂಪೂರ್ಣ ಜಖಂ ಆಗಿದ್ದು, ಬಸ್ ಮುಂಭಾಗ ಜಖಂ ಆಗಿದೆ. ಈ ಸಂಬಂಧ ರಾಮನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತೀಯ ವಿದ್ಯಾಭವನದಲ್ಲಿ ಇಂದು ಭಕ್ತಿ ಸಂಗೀತ



ಮೈಸೂರು, ಮಾ.15– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು ಸಹಯೋಗದೊಂದಿಗೆ ನಾಳೆ (ಮಾ.16) 125ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸಂಜೆ 6 ಗಂಟೆಗೆ ವಿದುಷಿ ಸ್ಫೂರ್ತಿ ರಾವ್ ಮತ್ತು ತಂಡದಿಂದ 'ಭಕ್ತಿ ಸಂಗೀತ' ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಇದಕ್ಕೆ ಮುಕ್ತ ಪ್ರವೇಶಾವಕಾಶವಿದೆ.

ಮುಡಾ ಯೋಜಕ ಪ್ರಭಾರ ಸದಸ್ಯರಾಗಿ ಆರ್.ಶೇಷ ನೇಮಕ



ಮೈಸೂರು, ಮಾ.15–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಯೋಜಕ ಪ್ರಭಾರ ಸದಸ್ಯರಾಗಿ ಆರ್.ಶೇಷ ಅವರನ್ನು ನೇಮಕ ಮಾಡಲಾಗಿದೆ. ಜೊತೆಗೆ ಮುಡಾ ಅಧೀಕ್ಷಕ ಅಭಿಯಂತರರ ಪ್ರಭಾರ ಹುದ್ದೆಯನ್ನು ಹೆಚ್ಚುವರಿಯಾಗಿ ಅವರಿಗೆ ನೀಡಲಾಗಿದೆ.

ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧ ಪೋಕ್ಸೋ ಕೇಸ್

ಬೆಂಗಳೂರು, ಮಾ.15(ಕೆಎಂಶಿ)– ಲೋಕಸಭಾ ಚುನಾವಣೆ ಅಖಾಡ ಸಜ್ಜುಗೊಂಡಿರುವ ಬೆನ್ನಲ್ಲೇ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಗುರಿಯಾಗಿದ್ದು, ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಅಲೋಕ್ ಮೋಹನ್ ಅವರು ಈ ಬಗ್ಗೆ ಸಿಐಡಿ ತನಿಖೆಗೆ ಆದೇಶಿಸಿದ್ದಾರೆ. ಅಲ್ಲದೆ ಈ ಬಗ್ಗೆ ಮಹಿಳಾ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಸೂಚನೆ ನೀಡಿದ್ದಾರೆ.

ಯಡಿಯೂರಪ್ಪ ಅವರು ಕಳೆದ ಫೆಬ್ರವರಿ ತಿಂಗಳಲ್ಲಿ ನನ್ನ ಅಪ್ರಾಪ್ತ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಸಂತ್ರಸ್ತೆಯ ತಾಯಿ ಮಾರ್ಚ್ 14ರ ರಾತ್ರಿ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ದೂರಿನ ಆಧಾರದ ಮೇಲೆ ಸದಾಶಿವನಗರ ಪೊಲೀಸರು ಯಡಿಯೂರಪ್ಪ ವಿರುದ್ಧ ಪೋಕ್ಸೋ ಕಾಯ್ದೆ ದಾಖಲಿಸಿದ್ದಾರೆ.

ತಮ್ಮ ಅಪ್ರಾಪ್ತ ಮಗಳ ಮೇಲೆ ಈ ಹಿಂದೆ ಅತ್ಯಾಚಾರ ನಡೆದಿದೆ. ಆರೋಪಿಗಳಿಗೆ ಶಿಕ್ಷೆಯಾಗಿಲ್ಲ. ಈ ವಿಚಾರದಲ್ಲಿ ನಮಗೆ ಅನ್ಯಾಯವಾಗಿದ್ದು, ನ್ಯಾಯ ಒದಗಿಸುವಂತೆ ಯಡಿಯೂರಪ್ಪ ಅವರಿಗೆ ಮನವಿ ಪತ್ರ ನೀಡಲು ನನ್ನ ಅಪ್ರಾಪ್ತ ಮಗಳೊಂದಿಗೆ ಕಳೆದ ಫೆಬ್ರವರಿ 2ರಂದು ಅವರ ಮನೆಗೆ ಹೋಗಿದ್ದೆ. ಆ ವೇಳೆ ಸುಮಾರು 9 ನಿಮಿಷಗಳ ಕಾಲ ನಮ್ಮೊಂದಿಗೆ ಯಡಿಯೂರಪ್ಪ ಮಾತನಾಡಿದ್ದರು. ಇಬ್ಬರಿಗೂ ಟೀ ಕುಡಿಸಿದರು. ನಾನು ಯಡಿಯೂರಪ್ಪನವರನ್ನು ಅಪ್ಪಾಜಿ ಎಂದು ಸಂಭೋದಿಸಿದರೆ, ನನ್ನ ಮಗಳು ಅವರನ್ನು ತಾತಾ ಎಂದು ಕರೆಯುತ್ತಿದ್ದಳು.

ನಮ್ಮ ಅಹವಾಲು ಕೇಳುವ ವೇಳೆ ಯಡಿಯೂರಪ್ಪ ಅವರು ಬಾಲಕಿಯ ಕೈ ಹಿಡಿದುಕೊಂಡೇ ಇದ್ದರು. ಇದಾದ ನಂತರ ಬಾಲಕಿಯನ್ನು ತನ್ನ ರೂಮಿಗೆ ಕರೆದುಕೊಂಡು ಹೋದರು. ಸುಮಾರು 5 ನಿಮಿಷಗಳ ಕಾಲ ಬಾಗಿಲು ಹಾಕಿಕೊಂಡಿದ್ದರು. ನಂತರ ನನ್ನ ಮಗಳು ಆಘಾತದಿಂದ ಕೊಠಡಿಯಿಂದ ಹೊರ ಬಂದಳು ಎಂದು ಸಂತ್ರಸ್ತೆಯ ತಾಯಿ ದೂರಿನಲ್ಲಿ ತಿಳಿಸಿದ್ದಾರೆ. ಇವರ ದೂರು ಆಧರಿಸಿ ಸದಾಶಿವನಗರ ಠಾಣೆ ಪೊಲೀಸರು, ಪೋಕ್ಸೋ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದಾರೆ.

ಕಾನೂನು ಪ್ರಕಾರ ಎದುರಿಸುತ್ತೇನೆ

ಇನ್ನು ತಮ್ಮ ವಿರುದ್ಧ ಕೇಳಿಬಂದಿರುವ ಆರೋಪದ ಬಗ್ಗೆ ಸ್ಪಷ್ಟನೆ ನೀಡಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ನನ್ನ ವಿರುದ್ಧ ಹೆಣ್ಣುಮಗಳೊಬ್ಬಳು ದೂರು ನೀಡಿದ್ದು, ಎಫ್‌ಐಆರ್ ಕೂಡ ದಾಖಲಾಗಿದೆ, ಕಾನೂನು ಪ್ರಕಾರ ಅದನ್ನು ಎದುರಿಸುತ್ತೇನೆ. ಇದರಲ್ಲಿ ರಾಜಕೀಯ ಪಿತೂರಿ ಇದೆ ಎಂದು ಭಾವಿಸುವುದಿಲ್ಲ ಎಂದಿದ್ದಾರೆ.

ಸುಮಾರು ಒಂದೂವರೆ ತಿಂಗಳ ಹಿಂದೆ ನನ್ನ ಮನೆಯ ಬಳಿ ತಾಯಿ-ಮಗಳು ಬಹಳ ಸಲ ಬಂದು ಹೋಗಿದ್ದರು, ಒಂದು ದಿನ ಕಣ್ಣೀರು ಹಾಕುತ್ತಾ ನಿಂತಿದ್ದರು. ಅವರನ್ನು ಕರೆಸಿ ಏನಮ್ಮ ಸಮಸ್ಯೆ ಎಂದು ಕೇಳಿದ್ದೆ ತಮಗೆ ಅನ್ಯಾಯ ಆಗಿದೆ ಎಂದು ಹೇಳಿಕೊಂಡರು. ತಕ್ಷಣವೇ ಪೊಲೀಸ್ ಕಮಿಷನರ್ ದಯಾನಂದ ಅವರಿಗೆ ಕರೆ ಮಾಡಿ, ಈ ವಿಚಾರ ತಿಳಿಸಿ ಅವರ ಬಳಿ ಕಳಿಸಿದೆ. ಈಗ ಬೇರೆ ರೀತಿಯಲ್ಲಿ ನನ್ನ ವಿರುದ್ಧ ದೂರು ದಾಖಲು ಮಾಡಿದ್ದಾರೆ. ಕಷ್ಟ ಎಂದು ಹೇಳಿಕೊಂಡಾಗ ಹಣವನ್ನೂ ಕೊಟ್ಟು ಕಳಿಸಿದ್ದೆ. ಉಪಕಾರ ಮಾಡಲು ಹೋಗಿ ಏನೋ ಆಯಿತು. ಕಾನೂನು ಪ್ರಕಾರವೇ ಎಲ್ಲವನ್ನು ಎದುರಿಸುತ್ತೇನೆ ಎಂದು ಹೇಳಿದ್ದಾರೆ.

ಪೋಕ್ಸೋ ಪ್ರಕರಣ ಸಿಐಡಿಗೆ ವರ್ಗಾವಣೆ

ಬೆಂಗಳೂರು, ಮಾ.15– ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ. ಕರ್ನಾಟಕ ಪೊಲೀಸ್ ಮಹಾನಿರ್ದೇಶಕರ ಕಚೇರಿಯು ಪ್ರಕರಣವನ್ನು ಅಪರಾಧ ತನಿಖಾ ಇಲಾಖೆಗೆ ವರ್ಗಾಯಿಸಲು ಆದೇಶಿಸಿದೆ. ಮಾಜಿ ಸಿಎಂ ವಿರುದ್ಧ ಪೋಕ್ಸೊ ಮತ್ತು 354 (ಎ) ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ತೇಜೋವಧೆ ಸರಿಯಲ್ಲ



ವಿನಾಕಾರಣ ಒಬ್ಬರ ತೇಜೋವಧೆ ಮಾಡುವುದು ಸರಿಯಲ್ಲ ಪ್ರಕರಣ ದಾಖಲಾದಕೂಡಲೇ ದೋಷಿ, ನಿರ್ದೋಷಿ ಎಂದು ಹೇಳುವುದು ಸರಿಯಲ್ಲ. ಈ ಪ್ರಕರಣದ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ಸರಿಯಾಗಿ ತನಿಖೆಯಾಗಬೇಕು. ವಿನಾಕಾರಣ ಯಾರನ್ನೂ ತೇಜೋವಧೆ ಮಾಡುವುದು ಸರಿಯಲ್ಲ.

-ದಿನೇಶ ಗುಂಡೂರಾವ್
ಆರೋಗ್ಯ ಸಚಿವ

ತನಿಖೆ ಮಾಡಲಾಗುತ್ತಿದೆ



ನಿನ್ನೆ ರಾತ್ರಿ ಮಹಿಳೆ ದೂರು ಕೊಟ್ಟಿದ್ದು, ಅದನ್ನು ಪರಿಶೀಲಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಪೊಲೀಸರು ಅದರ ಬಗ್ಗೆ ತನಿಖೆ ಮಾಡುತ್ತಿದೆ. ಅದುವರೆಗೂ ಯಾವುದೇ ವಿಷಯ ತಿಳಿಸಲು ಆಗುವುದಿಲ್ಲ. ಇದು ಒಬ್ಬ ಮಾಜಿ ಮುಖ್ಯಮಂತ್ರಿಗಳ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದು, ಬಹಳ ಸೂಕ್ಷ್ಮ ವಿಷಯ. ಯಡಿಯೂರಪ್ಪ ಒಬ್ಬ ಹಿರಿಯ ರಾಜಕಾರಣಿ, ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶ ಇಲ್ಲ. ದೂರು ಕೊಟ್ಟಿರುವ ಮಹಿಳೆ ಮಾನಸಿಕ ಅಸ್ವಸ್ಥೆ ಎಂದು ಕೆಲವರು ಹೇಳಿದ್ದಾರೆ, ಈ ಬಗ್ಗೆ ನಾನು ಪೊಲೀಸ್ ಅಧಿಕಾರಿಗಳ ಜತೆ ಮಾತನಾಡಿದ್ದೇನೆ. ಆ ಮಹಿಳೆ ಕೈಬರಹದ ದೂರು ಕೊಟ್ಟಿಲ್ಲ ಟೈಪ್ ಮಾಡಿದ ದೂರಿನ ಪ್ರತಿಯನ್ನು ಸಲ್ಲಿಸಿದ್ದರು. ಅಗತ್ಯ ಕಂಡುಬಂದರೆ ದೂರುದಾರ ಮಹಿಳೆಗೆ ಪೊಲೀಸ್ ರಕ್ಷಣೆ ಒದಗಿಸಲಾಗುತ್ತದೆ ಯಡಿಯೂರಪ್ಪ ಅವರನ್ನು ವಶಕ್ಕೆ ಪಡೆಯಬೇಕೇ, ಬೇಡವೇ ಎಂಬುದನ್ನು ಪೊಲೀಸರು ನಿರ್ಧರಿಸುತ್ತಾರೆ. ಈ ಕುರಿತು ತಾವು ಏನನ್ನೂ ಹೇಳಲಾಗದು.

-ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಮೈಸೂರು ಮಿತ್ರ ಶನಿವಾರ 16 ಮಾರ್ಚ್ 2024

ಮಡಿಕೇರಿಯಲ್ಲಿ ಬಿಜೆಪಿ ಜಿಲ್ಲಾ ಹಿಂದುಳಿದ ವರ್ಗದ ಸಮಾವೇಶ

ಕೊಡಗಿನ ಸಂಸ್ಕೃತಿ, ಪರಂಪರೆ ಸಂರಕ್ಷಣೆಯೊಂದಿಗೆ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ: ಯದುವೀರ್ ಭರವಸೆ

ಕೊಡಗಿನಲ್ಲಿ ಪ್ರಪ್ರಥಮ ರಾಜಕೀಯ ಭಾಷಣ ಮಾಡಿದ ಬಿಜೆಪಿ ಅಭ್ಯರ್ಥಿ ಒಡೆಯರ್



ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾ ಸಮಾವೇಶದಲ್ಲಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸನ್ಮಾನಿಸಲಾಯಿತು.

ಮಡಿಕೇರಿ, ಮಾ.15– ಕೊಡಗಿನ ಶ್ರೀಮಂತ ಸಂಸ್ಕೃತಿ, ಪರಂಪರೆ ಮತ್ತು ಪರಿಸರದ ಸಂರಕ್ಷಣೆಯೊಂದಿಗೆ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆದ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದರು.

ನಗರದ ಕಾವೇರಿ ಹಾಲ್‌ನಲ್ಲಿ ಶುಕ್ರವಾರ ನಡೆದಬಿಜೆಪಿ ಹಿಂದುಳಿದವರ್ಗಗಳ ಮೋರ್ಚಾದ ಜಿಲ್ಲಾ ಸಮಾವೇಶದಲ್ಲಿ ಮಾತನಾಡುವ ಮೂಲಕ ತಮ್ಮ ಪ್ರಪ್ರಥಮ ರಾಜಕೀಯ ಸಮಾವೇಶ ಭಾಷಣ ಮಾಡಿದ ಅವರು, ಮೈಸೂರು ಸಂಸ್ಥಾನದೊಂದಿಗೆ ಕೊಡಗು ಇರಲಿಲ್ಲ ಎಂಬ ಮಾತುಗಳಿವೆ. ಆದರೆ, ನಾನು ನನ್ನ ಬಾಲ್ಯದಿಂದಲೂ ಕೊಡಗಿನ ನಾಗರಹೊಳೆ, ಬ್ರಹ್ಮಗಿರಿ ಸೇರಿದಂತೆ ವಿವಿಧೆಡೆಗಳಿಗೆ ಭೇಟಿ ನೀಡುತ್ತಿದ್ದೇನೆ. ಇಲ್ಲಿನ ಪ್ರಕೃತಿಯ ಸೊಬಗನ್ನು ಅನುಭವಿಸಿದ್ದೇನೆ. ಕಾವೇರಿ ನಾಡಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದೇನೆ ಎಂದರು.

ಕೊಡಗು ವೀರ ಪರಂಪರೆಯನ್ನು ಹೊಂದಿರುವ ನಾಡಾಗಿದ್ದು, ದೇಶದ ಸೇನೆಗೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮತ್ತು ಜನರಲ್ ಕೆ.ಎಸ್.ತಿಮ್ಮಯ್ಯ ಅವರನ್ನು ಮಾತ್ರವಲ್ಲದೇ ಹಲವಾರು ಲೆಫ್ಟಿನೆಂಟ್ ಜನರಲ್‌ಗಳನ್ನು, ವೀರ ಸೈನಿಕರನ್ನು ನೀಡಿದ ಪುಣ್ಯ ಭೂಮಿಯಾಗಿದೆ ಎಂದು ಬಣ್ಣಿಸಿದರು.

ಕೊಡಗನ್ನು ಇಲ್ಲಿನ ಸುಂದರ ಪರಿಸರದೊಂದಿಗೆ ಕೊಡಗಾಗಿಯೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಇಲ್ಲಿನ ಸಂಸ್ಕೃತಿ, ಪರಂಪರೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಕಾರ್ಯದಲ್ಲಿ ನಾನು ನಿಮ್ಮೊಂದಿಗೆ ಇರುತ್ತೇನೆ ಕೊಡಗಿನ ವನ್ಯಜೀವಿ ಮತ್ತು ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ. ಇಲ್ಲಿನ ಪರಿಸರ ಸಂರಕ್ಷಣೆಯ ಜೊತೆಯಲ್ಲೇ ಅಭಿವೃದ್ಧಿಯನ್ನು ಕಾಣಬೇಕು ಎಂದರು.

ಮಾಜಿ ಸಚಿವ ಎಸ್.ಎ.ರಾಮದಾಸ್ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ದೇಶದಲ್ಲಿ 586 ರಾಜವಂಶಸ್ಥರು ಆಳ್ವಿಕೆ ನಡೆಸುತ್ತಿದ್ದರು. ಅಂತಹ ಸಂದರ್ಭ ಮೈಸೂರು ರಾಜರು ಪ್ರಥಮವಾಗಿ ಭಾರತ ಗಣರಾಜ್ಯದೊಂದಿಗೆ ಮೈಸೂರು ಸಂಸ್ಥಾನವನ್ನು ವಿಲೀನಗೊಳಿಸಿದರು. ಅಂತಹ ರಾಜಮನೆತನದ ಕುಡಿ ಇಂದು ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದು, ಇವರ ಗೆಲುವಿಗೆ ಎಲ್ಲರೂ ಶ್ರಮಿಸಬೇಕು ಎಂದರು.

ಮಾಜಿ ಸಚಿವ ಅಪ್ಪಚ್ಚು ರಂಜನ್ ಮಾತನಾಡಿ, ಕೊಡಗು–ಮಂಗಳೂರು ಮತ್ತು ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದ ಎಲ್ಲಾ ಚುನಾವಣೆಯಲ್ಲೂ ಕೊಡಗು ಜಿಲ್ಲೆ 1 ಲಕ್ಷ ಲೀಡ್ ಮತಗಳನ್ನು ಬಿಜೆಪಿ ಅಭ್ಯರ್ಥಿಗೆ ನೀಡಿದೆ. ಈ ಬಾರಿಯೂ ನಿರೀಕ್ಷೆಗೂ ಮೀರಿದ ಬಹುಮತವನ್ನು ಬಿಜೆಪಿ ಅಭ್ಯರ್ಥಿಗೆ ನೀಡಬೇಕು. ನರೇಂದ್ರ ಮೋದಿ ಅವರು 3ನೇ ಬಾರಿಗೆ ಪ್ರಧಾನಿ ಹುದ್ದೆಗೇರಬೇಕೆಂಬ ಉದ್ದೇಶ ನಮ್ಮೆಲ್ಲರದಾಗಿದೆ ಎಂದರು.

ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ. ಬೋಪಯ್ಯ ಮಾತನಾಡಿ, ಪ್ರಧಾನಿ ಮೋದಿ ಅವರ ಜನಪರ ಕೆಲಸಗಳನ್ನು ಜನರಿಗೆ ತಿಳಿಸುವ ಕೆಲಸ ಕಾರ್ಯಕರ್ತರಿಂದ ನಡೆಯಬೇಕು. ಇದೀಗ ವ್ಯವಸ್ಥಿತವಾಗಿ ಬಿಜೆಪಿ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದ್ದು, ಯಾರೂ ಇಂತಹ ಅಪಪ್ರಚಾರಗಳಿಗೆ ಕಿವಿಕೊಡಬಾರದು. ಯದುವೀರ್ ಅವರನ್ನು 3 ಲಕ್ಷ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದರು.

ಸಮಾವೇಶದಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಎಂಎಲ್‌ಸಿ ಸುನೀಲ್ ಸುಬ್ರಮಣಿ, ಎಸ್.ಜಿ.ಮೇದಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ಸಂಚಾಲಕ ರವಿಶಂಕರ್, ಜಿಪಂ ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಬಿ.ಬಿ. ಭಾರತೀಶ್ ಇದ್ದರು.

ಒಬಿಸಿ, ಅಲ್ಪಸಂಖ್ಯಾತರ ಪ್ರಗತಿಗೆ ಬಿಜೆಪಿ

ಭಾರತೀಯ ಜನತಾ ಪಾರ್ಟಿ ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯದ ಸರ್ವಾಂಗೀಣ ಪ್ರಗತಿಗೆ ಶ್ರಮಿಸುತಿದೆ. ಆದರೆ, ಕಾಂಗ್ರೆಸ್ ಹಿಂದುಳಿದ ವರ್ಗಗಳ ಅಭಿವೃದ್ಧಿಯನ್ನು ರಾಜಕೀಯ ಹೇಳಿಕೆಗಳಿಗಷ್ಟೇ ಸೀಮಿತಗೊಳಿಸಿದೆ. ಮೈಸೂರು–ಕೊಡಗು ಕ್ಷೇತ್ರಕ್ಕೆ ಮೈಸೂರಿನ ರಾಜವಂಶಸ್ಥ ಯದುವೀರ್ ಅವರ ಸ್ಪರ್ಧೆಗೆ ಪಕ್ಷ ಅವಕಾಶ ನೀಡಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ ತಿಳಿಸಿದರು.

ಪ್ರಜಾಪ್ರಿಯ, ಪ್ರಜಾಪ್ರಭುತ್ವದ ಮಹಾರಾಜರು....

ತಮಿಳುನಾಡಿಗೆ ಹರಿದು ಹೋಗುತ್ತಿದ್ದ ಕೊಡಗಿನ ಕಾವೇರಿಯನ್ನು ಮೈಸೂರು ಮಹಾರಾಜರು ಕನ್ನಂಬಾಡಿ ಕಟ್ಟೆ ಮೂಲಕ ಹಿಡಿದಿಟ್ಟುಕೊಂಡು ಹಳೇ ಮೈಸೂರು ಭಾಗಕ್ಕೆ ಜಲಸಂಪತ್ತು, ಧಾನ್ಯ ಸಂಪತ್ತು, ಸಸ್ಯ ಸಂಪತ್ತನ್ನು ವೃದ್ಧಿಸುವಂತೆ ಮಾಡಿದರು. ಈ ಮೂಲಕ ಜನರ ಬದುಕನ್ನು ಹಸನು ಮಾಡಿ, ನಾಡನ್ನು ಸಮೃದ್ಧಿಗೊಳಿಸಿ, ತ್ರೇತಾಯುಗದ ರಾಮರಾಜ್ಯದ ಕಲ್ಪನೆಯನ್ನು ಅಕ್ಷರಷಃ ಸಾಕಾರಗೊಳಿಸಿದರು. ಸಂವಿಧಾನ ರಚನೆಯಾಗುವ ಮುಂಚೆಯೇ ರಾಜ್ಯಾಡಳಿತದಲ್ಲಿ ಅಣ್ಣ ಬಸವಣ್ಣನವರ ಸಮಾನತೆಯ ಕ್ರಾಂತಿಯನ್ನು ಪ್ರತಿಬಿಂಬಿಸಿ ಮೀಸಲಾತಿಯನ್ನು ನೀಡಿ, ಸರ್ವಜನ ಸಮಾನತೆ ಸಾರಿದ್ದು ಮೈಸೂರು ಮಹಾರಾಜರು. ಈ ವಂಶದ ಕುಡಿ ಯದುವೀರ್ ಇಂದಿನ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಭಾಗಿಯಾಗಿದ್ದು ಖುಷಿ ತಂದಿದೆ. ಕೊಡಗು ಅವರ ಸಂಸ್ಥಾನಕ್ಕೆ ಸೇರಿರದಿದ್ದರೂ ಕೊಡಗಿನ ಬಗ್ಗೆ ಭಾವನಾತ್ಮಕವಾದ ನಂಟಿತ್ತು. ಮನೆಯ ಚಿನ್ನಾಭರಣವನ್ನು ಮಾರಿ ಕನ್ನಂಬಾಡಿ ಕಟ್ಟೆ, ಕೆರೆಕಟ್ಟೆ ನಿರ್ಮಿಸುವ ಮೂಲಕ ಪ್ರಜಾಪ್ರಿಯ ರಾಜರಾದರು. ಹಾಗಾಗಿ ಅವರು ಪ್ರಜಾಪ್ರಭುತ್ವದ ಮಹಾರಾಜರು.

–ರಘು ಕೌಟಿಲ್ಯ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ.

ಯದುವೀರ್‌ಗೆ ಅದ್ದೂರಿ ಸ್ವಾಗತ



ಕುಶಾಲನಗರದ ಕಾವೇರಿ ಸೇತುವೆಯ ಬಳಿಯ ಮೈಸೂರು ಗಡಿ ಮತ್ತು ಕೊಡಗು ಪ್ರವೇಶದ್ವಾರದ ಕಾವೇರಿ ಮಾತೆ ಪ್ರತಿಮೆಗೆ ಯದುವೀರ್ ಪೂಜೆ ಸಲ್ಲಿಸಿದರು.

ಕುಶಾಲನಗರ, ಮಾ.15–ಶುಕ್ರವಾರ ಕೊಡಗು ಜಿಲ್ಲೆಗೆ ಆಗಮಿಸಿದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಪಕ್ಷದ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.

ಮಡಿಕೇರಿಯ ಬಿಜೆಪಿ ಹಿಂದುಳಿದ ವರ್ಗಗಳ ಜಿಲ್ಲಾ ಸಮಾವೇಶದಲ್ಲಿ ಪಾಲ್ಗೊಳ್ಳಲು ಆಗಮಿಸಿ ಯದುವೀರ್ ಅವರನ್ನು ಬಿಜೆಪಿಯ ಸೋಮವಾರಪೇಟೆ ಮಂಡಲ ಮತ್ತು ಕುಶಾಲನಗರ ಮಹಾಶಕ್ತಿ ಕೇಂದ್ರದ ಮುಖಂಡರು ಹಾಗೂ ಕಾರ್ಯಕರ್ತರು ಪಟ್ಟಣದ ಕಾವೇರಿ ಸೇತುವೆಯ ಬಳಿ ಮೈಸೂರು ಗಡಿ ಮತ್ತು ಕೊಡಗು ಪ್ರವೇಶದ್ವಾರದಲ್ಲಿ ಅವರನ್ನು ಹೂವಿನ ಹಾರ ಹಾಕಿ ಬರಮಾಡಿಕೊಂಡರು. ಇದೇ ಸಂದರ್ಭ ಕಾವೇರಿ ಮಾತೆ ಪ್ರತಿಮೆಗೆ ಯದುವೀರ್ ಪೂಜೆ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯವಾಗಿ ಇದೇ ಪ್ರಥಮ ಬಾರಿಗೆ ಜಿಲ್ಲೆಗೆ ಆಗಮಿಸಿದ್ದೇನೆ. ಆದರೆ, ಕೊಡಗಿನ ಪರಿಚಯ ಹಿಂದಿನಿಂದಲೂ ಇದೆ. ಬಿಜೆಪಿಯಿಂದ ಟಿಕೆಟ್ ದೊರೆತಿದ್ದು, ಸಂಸದ ಪ್ರತಾಪ್ ಸಿಂಹ ಸೇರಿದಂತೆ ಎಲ್ಲಾ ಮುಖಂಡರ ಸಹಕಾರವಿದೆ. ನದಿ, ಪರಿಸರ ಸಂರಕ್ಷಣೆಯೊಂದಿಗೆ ಪ್ರಕೃತಿಗೆ ಪೂರಕವಾದ ಪ್ರವಾಸೋದ್ಯಮದೊಂದಿಗೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಚಿಂತನೆ ಹೊಂದಲಾಗಿದೆ. ರಾಜಕೀಯಕ್ಕೆ ನನ್ನನ್ನು ಸ್ವಾಗತಿಸಿರುವ ಕ್ಷೇತ್ರದ ಜನತೆಗೆ ಧನ್ಯವಾದ ತಿಳಿಸಿದರು.

ಇದೇ ವೇಳೆ ಸೋಮವಾರಪೇಟೆ ಬಿಜೆಪಿ ಮಂಡಲ ಅಧ್ಯಕ್ಷ ಗೌತಮ್, ಉಪಾಧ್ಯಕ್ಷ ಭುವನೇಂದ್ರ, ನಿತ್ಯಾನಂದ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪ್ರವೀಣ್, ಜಿಲ್ಲಾ ಪ್ರಮುಖರಾದ ಬಿ.ಎಸ್.ಅನಂತಕುಮಾರ್, ಇಂದಿರಾ ರಮೇಶ್, ಜೈವರ್ಧನ್, ತಾಲೂಕು ಪ್ರಮುಖರಾದ ಅಜೇಶ್ ಕುಮಾರ್, ಅರುಣಾ ಕುಮಾರಿ, ಎಂ.ಡಿ.ಕೃಷ್ಣಪ್ಪ, ಯುವ ಮೋರ್ಚಾದ ಪದ್ಮನಾಭ ಚಂದ್ರಶೇಖರ್, ತಾಲೂಕು ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ನಿಸಾರ್, ಪ್ರಮುಖರಾದ ಅಮೃತ್ ರಾಜ್, ಕೆ.ಜಿ.ಮನು, ವೈಶಾಖ್, ಪ್ರವೀಣ್, ಚರಣ್, ನವನೀತ್, ಜಿ.ಎಲ್. ನಾಗರಾಜ್, ಕುಮಾರಪ್ಪ, ಮಧುಸೂದನ್, ರಾಮು, ಮಾವಾಜಿ ರಕ್ಷಿತ್ ಇದ್ದರು.

ಸುಂಟಿಕೊಪ್ಪ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಸುಂಟಿಕೊಪ್ಪದಲ್ಲಿ ಬಿಜೆಪಿ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.

ಪಟ್ಟಣದ ಕನ್ನಡ ವೃತ್ತದಲ್ಲಿ ಸುಂಟಿಕೊಪ್ಪ ನಗರ ಬಿಜೆಪಿ ಅಧ್ಯಕ್ಷ ಧನುಕಾವೇರಪ್ಪ ಮತ್ತು ಸೋ.ಪೇಟೆ ಮಂಡಲ ಓಬಿಸಿ ಅಧ್ಯಕ್ಷ ಪಿ.ಆರ್. ಸುನಿಲ್‌ಕುಮಾರ್, ಯದುವೀರ್ ಅವರಿಗೆ ಮಾಲಾರ್ಪಣೆ ಮಾಡಿ ಬರಮಾಡಿಕೊಂಡರು.

ಚಿಕ್ಕಮರಳಿ ಗ್ರಾಮದಲ್ಲಿ ಗ್ರಾಮದೇವತೆ ಹಬ್ಬ ವಿಜೃಂಭಣೆಯಿಂದ ಆಚರಣೆ



ಪಾಂಡವಪುರ ತಾಲೂಕಿನ ಚಿಕ್ಕಮರಳಿ ಗ್ರಾಮದಲ್ಲಿ ಶ್ರೀಪಟ್ಟಲದಮ್ಮನ ಹಬ್ಬದ ಅಂಗವಾಗಿ ದೇವರ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಪಾಂಡವಪುರ,ಮಾ.15– ತಾಲೂಕಿನ ಚಿಕ್ಕಮರಳಿ ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀ ಪಟ್ಟಲದಮ್ಮನ ಮೊದಲನೇ ವರ್ಷದ ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಪಟ್ಟಲದಮ್ಮನ ಹಬ್ಬದ ಅಂಗವಾಗಿ ಗುರುವಾರ ಬೆಳಗ್ಗೆ ಪಟ್ಟಲದಮ್ಮ ದೇವಸ್ಥಾನದ ಬಳಿ ಹೋಮ ನಡೆಯಿತು. ಶ್ರೀ ಪಟ್ಟಲದಮ್ಮನ ದೇವಸ್ಥಾನ ಸ್ಥಾಪನೆಯಾದ ಬಳಿಕ ಮೊದಲ ಬಾರಿಗೆ ಶ್ರೀ ಪಟ್ಟಲದಮ್ಮನ ಹಬ್ಬ ನಡೆಸುತ್ತಿರುವುದರಿಂದ ಗ್ರಾಮಸ್ಥರು ವಿಜೃಂಭಣೆಯಿಂದ ಹಬ್ಬವನ್ನು ಆಚರಣೆ ಮಾಡಿದರು. ಹಬ್ಬದ ಅಂಗವಾಗಿ ಗುರುವಾರ ಸಂಜೆ ಗ್ರಾಮದ ಹೊರವಲಯದಲ್ಲಿ 16 ಕೂಟದ ದೊರೆ ಶ್ರೀಚನ್ನಿಗರಾಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಗ್ರಾಮಸ್ಥರು ಶ್ರೀಪಟ್ಟಲದಮ್ಮನ ದೇವರ ಉತ್ಸವಕ್ಕೆ ಹೂ ಮತ್ತು ಹೊಂಬಾಳೆ ಮುಡಿಸುವ ಮೂಲಕ ದೇವಿಯ ಮೂರ್ತಿಯನ್ನು ಅಲಂಕರಿಸಲಾಯಿತು.

ಬಳಿಕ ದೇವರ ಮೂರ್ತಿಗೆ ಪೂಜೆ ಸಲ್ಲಿಸಿ ಉತ್ಸವ ಆರಂಭಿಸಿದ್ದು, ದೇವಸ್ಥಾನದ ಆವರಣದಲ್ಲಿಯೇ ದೇವಿಗೆ ಪಂಜಿನ ಸಲಾಂ ಸಲ್ಲಿಸಲಾಯಿತು. ಬಳಿಕ 16 ಕೂಟದ ದೊರೆ ಶ್ರೀ ಚನ್ನಿಗರಾಯಸ್ವಾಮಿಗೆ ಸಲಾಂ ಸಲ್ಲಿಸಿ ಕೆಲಕಾಲ ಮೆರವಣಿಗೆ ನಡೆಸಿದರು.

ಕೊಂಡೋತ್ಸವ ಶ್ರೀ ಪಟ್ಟಲದಮ್ಮನ ಉತ್ಸವದ ಅಂಗವಾಗಿ ಪಟ್ಟಲದಮ್ಮ ದೇವಸ್ಥಾನದ ಆವರಣದಲ್ಲಿ ಕೊಂಡೋತ್ಸವ ನಡೆಸಲಾಯಿತು. ದೇವಿ ಉತ್ಸವದ ಮೂರ್ತಿಯನ್ನು ತಲೆ ಮೇಲೆ ಹೊತ್ತಿಕೊಂಡು ಮೆರವಣಿಗೆ ನಡೆಸಿದ ದೇವಸ್ಥಾನದ ಗುಡ್ಡಪ್ಪ ಆವರಣದಲ್ಲಿ ಹಾಕಲಾಗಿದ್ದ ಕೊಂಡ ಹಾದುಹೋಗುವ ಮೂಲಕ ಭಕ್ತಿ ಪ್ರದರ್ಶಿಸಿದರು.

ಗುಡ್ಡಪ್ಪ ದೇವರ ಮೂರ್ತಿಯೊಂದಿಗೆ ಕೊಂಡ ಹಾದ ಬಳಿಕ ಹರಕೆ ಹೊತ್ತ ಭಕ್ತರು ಕೊಂಡ ಹಾದುಹೋಗುವ ಮೂಲಕ ದೇವರಿಗೆ ಭಕ್ತಿ ಸಮರ್ಪಸಿದರು. ನಂತರ ಗ್ರಾಮದ 16 ಕೂಟದ ದೊರೆ ಶ್ರೀಚನ್ನಿಗರಾಯ ಸ್ವಾಮಿ ದೇವರ ಗುಡ್ಡಪ್ಪನವರ ಮನೆಯವರು ದೇವಿಗೆ ತಂಬಿಟ್ಟು ಆರತಿಪೂಜೆ ಸಲ್ಲಿಸಿದ ಬಳಿಕ ಗ್ರಾಮದ ಎಲ್ಲಾ ಭಕ್ತರು ದೇವಿಗೆ ತಂಬಿಟ್ಟು ಆರತಿಯ ಪೂಜೆ ಸಲ್ಲಿಸಿದರು, ನಂತರ ಭಕ್ತರು ದೇವರಿಗೆ ಧೂಳು ಮರಿ ಬಲಿ ಅರ್ಪಿಸಿದರು. ಬಳಿಕ ಗ್ರಾಮಸ್ಥರು ದೇವಿಗೆ ಕೋಳಿ ಹಾಗೂ ಮರಿಗಳ ಬಲಿ ಅರ್ಪಿಸುವ ಮೂಲಕ ವಿಜೃಂಭಣೆಯಿಂದ ದೇವರಿಗೆ ಭಕ್ತಿಭಾವ ಸಮರ್ಪಿಸಿದರು.

ಕಳೆದ ಬಾರಿ ನನ್ನನ್ನು ಮಂಡ್ಯದಲ್ಲಿ ಕುತಂತ್ರದಿಂದ ಸೋಲಿಸಿದರು

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಣ್ಣೀರು



ಪೂರ್ವಭಾವಿ ಸಭೆಯಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ಮಂಡ್ಯ, ಮಾ.15–ಕಳೆದ ಲೋಕಸಭಾ ಚುನಾವಣೆಯಲ್ಲಿ ಮಂಡ್ಯದಲ್ಲಿ ಸ್ಪರ್ಧಿಸಿದ್ದ ನನ್ನನ್ನು ಕುತಂತ್ರದಿಂದ ಸೋಲಿಸಿದರು. ಆ ಸೋಲಿನ ನೋವು ನನಗೆ ಇನ್ನೂ ಮರೆಯಲಾಗುತ್ತಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಣ್ಣೀರಿಟ್ಟರು.

ಮಂಡ್ಯ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ತಮ್ಮ ಭಾಷಣದ ಮಧ್ಯೆ ಮೂರ್‍ನಾಲ್ಕು ಬಾರಿ ಸೋಲಿನ ದುಃಖ ತಡೆಯಲಾರದೇ ಕಣ್ಣೀರಿಟ್ಟಿದ್ದು ಕಾರ್ಯಕರ್ತರ ಮನ ಕಲಕಿತು. 2019ರಲ್ಲಿ ನನಗೆ ರಾಜಕಾರಣದ ಅನುಭವವೇ ಇರಲಿಲ್ಲ. ಮಂಡ್ಯ ಜಿಲ್ಲೆಯ ನಾಯಕರ ಅಭಿಲಾಷೆಯಂತೆ ನಾನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ. ಮಂಡ್ಯದ ಜನರು ಐದೂಮುಕ್ಕಾಲು ಲಕ್ಷ ಮತ ಕೊಟ್ಟರಾದರೂ, ಬೇರೆಯವರ ಕುತಂತ್ರದಿಂದ ನಾನು ಸೋಲಬೇಕಾಯಿತು ಎಂದರು.

ಮಂಡ್ಯದಲ್ಲಿ ಇತ್ತೀಚೆಗೆ ನಡೆದ ಗ್ಯಾರಂಟಿ ಸಮಾವೇಶದಲ್ಲಿ ಸುಮಲತಾ ಗೆಲುವಿಗೆ ಕಾಂಗ್ರೆಸ್ಸಿಗರು ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದರೆ, ಅದೇ ವೇದಿಕೆಯಲ್ಲಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಿಖಿಲ್ ಗೆಲುವಿಗಾಗಿ ನಾನು ಮತ್ತು ಕುಮಾರಸ್ವಾಮಿ ಒಟ್ಟಿಗೆ ಶ್ರಮಿಸಿದ್ದೇವೆ ಎಂದು ಹೇಳಿದ್ದಾರೆ. ಒಂದೇ ಪಕ್ಷದ ಇಬ್ಬರು ನಾಯಕರು ಒಂದೇ ವೇದಿಕೆಯಲ್ಲಿ ತದ್ವಿರುದ್ಧವಾಗಿ ಮಾತನಾಡಿದ್ದಾರೆ. ಇನ್ನು ಮುಂದಾದರೂ 2019ರ ಲೋಕಸಭಾ ಚುನಾವಣೆಯ ಬಗ್ಗೆ ಮಾತನಾಡುವ ಮುನ್ನ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ಯೋಚಿಸಿ, ಚರ್ಚಿಸಿ ನಂತರ ಮಾತನಾಡಲಿ ಎಂದು ಸಲಹೆ ನೀಡಿದರು.

ಮಂಡ್ಯದಲ್ಲಿ ಶಾಂತಿಯುತವಾಗಿ ಈ ಬಾರಿ ಚುನಾವಣೆ ನಡೆಯಲಿ ಎಂದ ಅವರು, ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮೊದಲಿನಂತೆ ಓಡಾಡಲು ಆಗುವುದಿಲ್ಲ. ಸದ್ಯದಲ್ಲೇ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಲಿರುವ ಅವರು, ಪ್ರಚಾರದಲ್ಲಿ ಹೆಚ್ಚು ಭಾಗಿಯಾಗಲು ಸಾಧ್ಯವಾಗದ ಕಾರಣ, ನಾನು ಪ್ರಚಾರದಲ್ಲಿ ತೊಡಗಬೇಕಾಗುತ್ತದೆ. ಹೀಗಾಗಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ನಾನು ಅಥವಾ ಕುಮಾರಸ್ವಾಮಿಯವರು ಸ್ಪರ್ಧಿಸಲೇಬೇಕೆಂದು ಒತ್ತಾಯ ಮಾಡುತ್ತಿದ್ದೀರಿ. 2019ರ ಸೋಲನ್ನು ಮರೆಸಲು ನನ್ನನ್ನು ಮತ್ತೆ ಸ್ಪರ್ಧಿಸುವಂತೆ ಕರೆಯುತ್ತಿರುವ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ದೇವರು ನನ್ನ ಹಣೆಯಲ್ಲಿ ಬರೆದಿದ್ದರೆ ನಾನು ಶಾಸಕ ಅಥವಾ ಸಂಸದನಾಗುತ್ತೇನೆ. ಯೋಗ್ಯತೆ ಇದ್ದಾಗ ಅಧಿಕಾರ ನನ್ನ ಬಳಿಗೆ ಬಂದೇ ಬರುತ್ತದೆ ಒಂದಲ್ಲಾ ಒಂದು ದಿನ ನನಗೆ ಅಧಿಕಾರ ಸಿಕ್ಕೇ ಸಿಗುತ್ತದೆ. ಆದರೆ ಸ್ವಾಭಿಮಾನದ ಹೆಸರಿನಲ್ಲಿ ಮಂಡ್ಯ ಜನರಿಗೆ ಮೋಸ ಮಾಡುವುದಿಲ್ಲ ಎಂದು ಭಾವುಕರಾಗಿ ನುಡಿದರು.

ಸಹಾಯವಾಣಿ ಪ್ರಾರಂಭ

ಮಂಡ್ಯ: ಜಿಲ್ಲೆಯ 7 ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕುಗಳು ಎಂದು ಸರ್ಕಾರ ಘೋಷಿಸಿದೆ.

ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಲ್ಲಿ ಸಾರ್ವಜನಿಕರು ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ದೂ.ಸಂ: 08232–224655, ತಾಲೂಕು ಕಚೇರಿಗಳಾದ ಮಂಡ್ಯ ದೂ.ಸಂ: 08232–291655, ಮದ್ದೂರು ದೂ.ಸಂ: 08232–291466, ಮಳವಳ್ಳಿ ದೂ.ಸಂ: 08231–242267, ಪಾಂಡವಪುರ ದೂ.ಸಂ: 08236–255128, ಶ್ರೀರಂಗಪಟ್ಟಣ ದೂ.ಸಂ: 08236–253001, ನಾಗಮಂಗಲ ದೂ.ಸಂ: 08234–298105, ಕೆ.ಆರ್. ಪೇಟೆ ದೂ.ಸಂ: 08230–262227 ಅನ್ನು ಸಂಪರ್ಕಿಸಿ ತಮ್ಮ ಸಮಸ್ಯೆಗಳನ್ನು ದಾಖಲಿಸಿಕೊಳ್ಳಬಹುದು ಎಂದು ಮಂಡ್ಯ ಜಿಲ್ಲಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವೇಗೌಡರು, ಕುಮಾರಸ್ವಾಮಿ ಹೃದಯ ಸದಾ ರೈತರಿಗಾಗಿ ಮಿಡಿಯುತ್ತವೆ

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಜಿ.ಟಿ.ದೇವೇಗೌಡರ ಅಭಿಮತ



ಮಂಡ್ಯ, ಮಾ.15–ಕಳೆದ ಲೋಕಸಭಾ ಚುನಾವಣೆಯ ಸೋಲಿನ ನೋವನ್ನು ಅನುಭವಿಸುತ್ತಿರುವ ನಿಖಿಲ್ ಕುಮಾರಸ್ವಾಮಿ ಅವರನ್ನು ಈ ಚುನಾವಣೆಯಲ್ಲಿ ಗೆಲ್ಲಿಸಲು ಮಂಡ್ಯ ಜನತೆ ಪಣ ತೊಡಬೇಕೆಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಮನವಿ ಮಾಡಿದರು.

ಜಿ.ಟಿ.ದೇವೇಗೌಡರು ಆರಂಭದಲ್ಲಿ 2019ರ ಲೋಕಸಭಾ ಚುನಾವಣೆಯ ಸೋಲಿನ ಬಗ್ಗೆ ಮಾತನಾಡುತ್ತಾ, ರೈತರಿಗಾಗಿ ಸದಾ ಮಿಡಿಯುವ ಹೃದಯ ಹೆಚ್.ಡಿ. ದೇವೇಗೌಡರು ಮತ್ತು ಕುಮಾರಸ್ವಾಮಿ ಅವರದ್ದು. ರೈತರ ಸಾಲ ಮನ್ನಾ ಮಾತ್ರವಲ್ಲದೆ, ಅನೇಕ ರೈತ ಪರ ಯೋಜನೆಗಳನ್ನು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ನೀಡಿದ್ದರು. ರೈತರು ಆತ್ಮಹತ್ಯೆ ಮಾಡಿಕೊಂಡಾಗ ಅವರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳುವುದರ ಜೊತೆಗೆ ಸ್ವಂತ ಹಣದಲ್ಲಿ ಪರಿಹಾರ ಕೊಟ್ಟಿದ್ದರು. ಇಂತಹ ದೇವೇಗೌಡರ ಕುಟುಂಬವನ್ನು ಕೈಬಿಡಬೇಡಿ ಎಂದು ಮನವಿ ಮಾಡಿದರಲ್ಲದೆ, ಜಿ.ಟಿ.ದೇವೇಗೌಡ ಕಾಂಗ್ರೆಸ್‌ಗೆ ಹೋಗುತ್ತಾರೆ ಎಂಬ ವದಂತಿ ಈಗಲೂ ನಿಂತಿಲ್ಲ. ಆದರೆ ನಾನು ಬೇರೆ ಪಕ್ಷಕ್ಕೆ ಹೋಗಿ ಮಂತ್ರಿಯಾಗುವುದಕ್ಕಿಂತ ದೇವೇಗೌಡರು ಹಾಗೂ ಕುಮಾರಸ್ವಾಮಿ ಜೊತೆ ನೆಮ್ಮದಿಯಾಗಿರುತ್ತೇನೆ ಎಂದರು.

ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಮಂಡ್ಯದಿಂದ ಕುಮಾರಸ್ವಾಮಿ ಅಥವಾ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಬೇಕೆಂಬ ಒಂದೇ ವಾಕ್ಯದ ನಿರ್ಣಯವನ್ನು ಜಿಲ್ಲೆಯಿಂದ ಈಗಾಗಲೇ ರಾಜ್ಯದ ನಾಯಕರಿಗೆ ಕಳುಹಿಸಿದ್ದೇವೆ. ಇವರಿಬ್ಬರಲ್ಲಿ ಒಬ್ಬರು ಸ್ಪರ್ಧಿಸಬೇಕು ಎಂಬುದು ಹಾಲಿ ಹಾಗೂ ಮಾಜಿ ಶಾಸಕರ ಪರವಾಗಿ ನನ್ನ ಒತ್ತಡವೂ ಆಗಿದೆ. ಕಾರ್ಯಕರ್ತರ ಭಾವನೆಗೆ ತಕ್ಕಂತೆ ಕುಮಾರಸ್ವಾಮಿ ನಿರ್ಧಾರ ಕೈಗೊಳ್ಳುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದರು.

ಕುಡಿಯುವ ನೀರಿಗೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸೂಚನೆ



ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ನಡೆದ ಬರ ಪರಿಹಾರ ನಿರ್ವಹಣೆ ಸಮಿತಿ ಸಭೆಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿದರು. ತಹಸೀಲ್ದಾರ್ ಬಸವರಾಜು, ನಗರಸಭೆ ಪೌರಾಯುಕ್ತ ರಾಮದಾಸ್, ತಾಪಂ ಇಓ ಕೃಷ್ಣಪ್ಪ ಇದ್ದರು.

ಚಾಮರಾಜನಗರ, ಮಾ.15–ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಬರಪರಿಹಾರ ನಿರ್ವಹಣೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬರಪರಿಹಾರದಲ್ಲಿ ಸಾಕಷ್ಟು ಹಣವಿದೆ. ಟೆಂಡರ್ ಆಗಿರುವ ಬೋರ್‌ವೆಲ್ ಕೊರೆಸುವುದು, ಚಾಮರಾಜನಗರದಲ್ಲಿ 25 ಲಕ್ಷ ರೂ. ಅನುದಾನದಲ್ಲಿ ಎಲ್ಲಿ ಅದ್ಯತೆ ಇದೆ ಅಲ್ಲಿ ತಕ್ಷಣ ಹೊಸ ಬೋರ್‌ವೆಲ್ ಕೊರೆಸಿ ನೀರು ಪೂರೈಕೆ ಮಾಡಬೇಕು ಎಂದು ತಿಳಿಸಿದರು.

ಅಲ್ಲದೆ ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯಲ್ಲಿ 40 ಲಕ್ಷ ರೂ. ಅನುದಾನವಿದ್ದು, ಬರ ಹಾಗೂ ಮಳೆ ಇಲ್ಲದ ಕಾರಣ ಅಂತರ್ಜಲ ಮಟ್ಟ ಕುಸಿದು ಕುಡಿಯುವ ನೀರಿನ ಸಮಸ್ಯೆ ತಲೆದೋರಿರುವುದರಿಂದ ಅಧಿಕಾರಿಗಳು ಅಗತ್ಯ ಕ್ರಮಕೊಳ್ಳಬೇಕು. ಕ್ಷೇತ್ರದ ಚಾಮರಾಜನಗರ ಹಾಗೂ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಗಮನಕ್ಕೆ ಬಂದಿದೆ. ಕ್ಷೇತ್ರದಲ್ಲಿ ಜನ–ಜಾನುವಾರುಗಳಿಗೆ ನೀರು ಪೂರೈಸುವುದು ನಮ್ಮ ಜವಾಬ್ದಾರಿಯಾಗಿದೆ. ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಕುಡಿಯುವ ನೀರಿಗೆ ಸರ್ಕಾರ ಅನುದಾನ ಕೊಡಲು ಸಿದ್ಧವಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಡಿಯುವ ನೀರಿಗೆ ಹಣ ನೀಡುವುದಾಗಿ ತಿಳಿಸಿದ್ದಾರೆ. ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡಿಸಲು ನಾನು ಬದ್ಧನಾಗಿದ್ದೇನೆ. ಚಾಮರಾಜನಗರ ವಾರ್ಡ್‌ಗಳಿಗೆ ಕುಡಿಯುವ ನೀರು ಒದಗಿಸಲು ವಿಶೇಷ ಒತ್ತು ನೀಡಲಾಗಿದೆ. ಹಳೆಯ ಬೋರ್‌ವೇಲ್‌ನಲ್ಲಿ ನೀರು ಬರುತ್ತೆ ಎಂದರೆ ಅದನ್ನೇ ಸರಿಪಡಿಸಿ, ಎಲ್ಲೆಲ್ಲಿ ಹೊಸ ಬೋರ್‌ವೆಲ್, ಪೈಪ್‌ಲೈನ್ ಅವಶ್ಯಕತೆ ಇದೆ ಅಂತಹ ಕಡೆ ತುರ್ತಾಗಿ ಕಾಮಗಾರಿ ನಡೆಸಿ ಜನರಿಗೆ ನೀರಿನ ಸಮಸ್ಯೆಯಾದಂತೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಸಭೆಯಲ್ಲಿ ತಹಸೀಲ್ದಾರ್ ಬಸವರಾಜು, ನಗರಸಭೆ ಪೌರಾಯುಕ್ತ ರಾಮದಾಸ್, ತಾಪಂ ಇಓ ಕೃಷ್ಣಪ್ಪ, ಜೆಇ ನಟರಾಜು ಹಾಜರಿದ್ದರು.

ಸಿಎಎ ಕಾಯ್ದೆ ವಿರೋಧಿಸಿ ಎಸ್‌ಡಿಪಿಐ ಪ್ರತಿಭಟನೆ



ಚಾಮರಾಜನಗರದಲ್ಲಿ ಸಿಎಎ ಕಾಯ್ದೆ ವಿರೋಧಿಸಿ ಎಸ್‌ಡಿಪಿಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮಾ.15–ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಸಿಎಎ ಕಾಯ್ದೆ ವಿರೋಧಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಸುಲ್ತಾನ್ ಷರೀಫ್ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಸಿಎಎ ಕಾಯ್ದೆ ವಿರೋಧಿಸಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಹಾರ್ ಅಹಮದ್ ಮಾತನಾಡಿ, ಸಿಎಎ ಕೇವಲ ಮುಸ್ಲಿಂ ವಿರೋಧಿ ನೀತಿಯಲ್ಲ. ಅದು ದಲಿತರು, ಆದಿವಾಸಿಗಳು ಮತ್ತು ಕಡುಬಡವರ ಪೌರತ್ವ ಮತ್ತು ಮತದಾನದ ಹಕ್ಕು ಕಸಿಯುವ ಕಾಯ್ದೆಯಾಗಿದೆ. ಧರ್ಮದ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡಬಾರದು ಎಂದು ಸಂವಿಧಾನದ ಮೂಲ ಆಶಯದಲ್ಲಿ ನಮೂದಿಸಲಾಗಿದೆ. ಆದರೂ ಫ್ಯಾಸಿಸ್ಟ್ ಮನಸ್ಥಿತಿಯ ಬಿಜೆಪಿ ತನ್ನ ಸೈದ್ಧಾಂತಿಕ ಗುರು ಆರ್‌ಎಸ್‌ಎಸ್ ಅಣತಿಯ ಮೇರೆಗೆ ಸಿಎಎ ಕರಾಳ ಕಾಯ್ದೆಯನ್ನು ಜಾರಿಗೆತಂದಿದೆ. ಇದು ಸಂಪೂರ್ಣ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಕಾಯ್ದೆಯಾಗಿದೆ ಎಂದು ಆರೋಪಿಸಿದರು.

ಪೌರತ್ವ ನಿರೂಪಿಸಲು ಸರ್ಕಾರ ಕೇಳುತ್ತಿರುವ ಕಾಗದ ಪತ್ರಗಳು ಸಾಕಷ್ಟು ದಲಿತರು, ಆದಿವಾಸಿಗಳು ಮತ್ತು ಕಡುಬಡವರಲ್ಲೂ ಲಭ್ಯವಿಲ್ಲ. ಈ ಮೂಲಕ ದಲಿತರು, ಆದಿವಾಸಿಗಳು ಮತ್ತು ಕಡುಬಡವರಿಗೆ ಪೌರತ್ವ ವಿಚಾರದಲ್ಲಿ ಅನಗತ್ಯ ತೊಂದರೆ ನೀಡುವುದು ಕೇಂದ್ರ ಸರ್ಕಾರದ ದುರುದ್ದೇಶವಾಗಿದೆ ಎಂದರು.

ಮೂಲ ನಿವಾಸಿಗಳ ಮೇಲೆ ಅಕ್ರಮ ವಲಸಿಗರು ಎಂಬ ಮುದ್ರೆಯನ್ನು ಒತ್ತಿ ಅವರನ್ನು ದೇಶದ ಭಿನ್ನ ಪ್ರಜೆಗಳು ಎಂಬಂತೆ ಬಿಂಬಿಸಲು ಸರ್ಕಾರ ಸಂವಿಧಾನ ವಿರೋಧಿ ಕರಾಳ ಕಾನೂನು ತಂದಿದೆ. ತಕ್ಷಣ ಕೇಂದ್ರ ಸರ್ಕಾರ ಈ ವಿರೋಧಿ ಕಾಯ್ದೆಯನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಎಸ್‌ಡಿಪಿಐ ವತಿಯಿಂದ ಉಗ್ರ ಹೋರಾಟ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಅರೀಫ್, ಪ್ರಧಾನ ಕಾರ್ಯದರ್ಶಿ ಮಹೇಶ್, ರಂಗಕರ್ಮಿ ಕೆ.ವೆಂಕಟರಾಜು, ಮುಖಂಡರಾದ ಸಂಘ ಸೇನಾ, ಬಂಗಾರಸ್ವಾಮಿ, ಜಮೀನೂರ್, ಸೈಯದ್ ಇರ್ಫಾನ್, ರಫಿ, ನಸ್ರುಲ್ಲಾ, ಅಪ್ಸರ್ ಪಾಷ, ಮಹಮದ್ ಅಮೀಕ್ ಇತರರು ಭಾಗವಹಿಸಿದ್ದರು.

ಸುನೀಲ್ ಬೋಸ್‌ಗೆ ಟಿಕೆಟ್ ನೀಡಲು ಒತ್ತಾಯ



ಗುಂಡ್ಲುಪೇಟೆ: ಈ ಬಾರಿ ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದಿಂದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್‌ಗೆ ಕಾಂಗ್ರೆಸ್ ಟಿಕೆಟ್ ನೀಡಬೇಕು ಎಂದು ಬೇಗೂರು ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಮೇಶ್ ಬೇಗೂರು ಒತ್ತಾಯಿಸಿದ್ದಾರೆ. ರಾಜ್ಯ ರಾಜಕಾರಣದಲ್ಲಿ ಸಚಿವ ಮಹದೇವಪ್ಪ ಅವರ ಪಾತ್ರ ಹಿರಿದಾಗಿದೆ. ಅವರ ಪುತ್ರ ಸುನೀಲ್ ಬೋಸ್‌ಗೆ ಈ ಬಾರಿ ಚಾಮರಾಜನಗರ ಕ್ಷೇತ್ರದಿಂದ ಟಿಕೆಟ್ ನೀಡಿದರೆ ಕಾಂಗ್ರೆಸ್ ಗೆಲುವು ಗ್ಯಾರಂಟಿ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುನೀಲ್ ಬೋಸ್‌ಗೆ ಟಿಕೆಟ್ ಕೊಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಾಮಾಣಿಕತೆ ಪ್ರತಿರೂಪ ಶಾಂತವೇರಿ ಗೋಪಾಲಗೌಡ



ಚಾಮರಾಜನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆದ ಶಾಂತವೇರಿ ಗೋಪಾಲಗೌಡರ ಜೀವನ ಮತ್ತು ಸಾಧನೆ ಕುರಿತ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ ಮಾ.15–ಶಾಂತವೇರಿ ಗೋಪಾಲಗೌಡರು ಅತ್ಯಂತ ಆದರ್ಶ ವ್ಯಕ್ತಿ. ಸತ್ಯ, ನಿಷ್ಠೆ, ಪ್ರಾಮಾಣಿಕತೆಯ ಪ್ರತಿರೂಪ ಎಂದು ಅಖಿಲ ಕರ್ನಾಟಕ ಕನ್ನಡ ಮಹಾಸಭೆ ರಾಜ್ಯಾಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ತಿಳಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಕರ್ನಾಟಕ ಸೇನಾಪಡೆ, ಕನ್ನಡಪರ ಸಂಘಟನೆ ವತಿಯಿಂದ ನಡೆದ ಶಾಂತವೇರಿ ಗೋಪಾಲಗೌಡರ ಜೀವನ ಮತ್ತು ಸಾಧನೆ ಕುರಿತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಲೆನಾಡಿನವರಾದ ಶಾಂತವೇರಿ ಗೋಪಾಲಗೌಡರು ಮೂರು ಬಾರಿ ಶಾಸಕರಾಗಿದ್ದರು. ಸಮಾಜವಾದಿ ಸಿದ್ಧಾಂತದ ಮೂಲಕ ಹೋರಾಟ ನಡೆಸಿದವರು. ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಇವರ ಪಾತ್ರ ಅನನ್ಯ. ಶಾಸನಸಭೆಯಲ್ಲಿ ಮಹತ್ವಪೂರ್ಣ ಚರ್ಚೆಗಳ ಮೂಲಕ ರೈತರ, ಕಾರ್ಮಿಕರ, ಬಡವರ ಪರ ಕಾಳಜಿ ವಹಿಸಿದ್ದರು. ಇವರ ಕಾರ್ಯ ಸಾಧನೆ ಇಂದಿಗೂ ಜನಮಾನಸದಲ್ಲಿ ಹಾಸು ಹೊಕ್ಕಾಗಿದೆ ಎಂದರು.

ತಾಲೂಕು ಕಸಾಪ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮಾತನಾಡಿ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದ ಮಹಾನ್ ವ್ಯಕ್ತಿ ಶಾಂತವೇರಿ ಗೋಪಾಲಗೌಡರು. ಸ್ವಾತಂತ್ರ್ಯ ಚಳವಳಿಯ ನಂತರ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಭಾಗವಹಿಸಿ ಕನ್ನಡ ಏಕೀಕರಣದ ಮೂಲಕ ಕನ್ನಡಿಗರಿಗೆ ಶಾಶ್ವತವಾದ ರಾಜ್ಯ ನಿರ್ಮಾಣದಲ್ಲಿ ಗೋಪಾಲಗೌಡರು ಒಬ್ಬರು. ಕುತೂಹಲ ಹೆಚ್ಚಿಸುವ ಅವರ ಜೀವಂತ ಘಟನೆಗಳು ಎಲ್ಲರಿಗೂ ಇಂದಿಗೂ ಮಾದರಿ ಎಂದರು. ಬರಹಗಾರ ಲಕ್ಷ್ಮಿ ನರಸಿಂಹ, ಕನ್ನಡಪರ ಸಂಘಟನೆ ಮುಖಂಡರಾದ ಚಾ.ವೆಂ. ರಾಜ್‌ಗೋಪಾಲ, ಕಸಾಪ ನಿರ್ದೇಶಕ ರವಿಚಂದ್ರ ಪ್ರಸಾದ್ ಕಹಳೆ, ಕನ್ನಡ ಸಂಘಟನೆಗಳ ಒಕ್ಕೂಟದ ಮಹೇಶ್‌ಗೌಡ, ಪುಣ್ಯದಹುಂಡಿ ರಾಜು, ಪರಮೇಶ್ವರಪ್ಪ, ಸುರೇಶ್‌ಗೌಡ, ಬೊಮ್ಮಾಯಿ, ಮೂಡಲಪುರರವಿ, ಪ್ರಕಾಶ್ ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೊಸ ಮನೆ ಮಾರಾಟಕ್ಕಿದೆ
20x30 ಸಾತಗಳ್ಳಿ 'ಬಿ' ಜೋನ್, ನಾರ್ತ್ ಫೇಸ್, ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್. ಸಂಪರ್ಕಿಸಿ:
Mob: 9535184616

ಹೊಸ ಮನೆ ಮಾರಾಟಕ್ಕಿದೆ
ಶಾಂತವೇರಿ ಗೋಪಾಲಗೌಡ ನಗರ 20x30 ಡ್ಯೂಪ್ಲೆಕ್ಸ್, ಮೂರು ಬೆಡ್ ರೂಂ, ಸೌತ್ ಫೇಸ್, ಈಸ್ಟ್ ಡೋರ್.
Mob: 9535184616

New House for Sale
In Vijayanagar 1st Stage, 1st Main, 40x60 East facing, 60 eet road, 4 rooms all attached 20x30 big hall. Price: Rs. 3.6 Cr. with registration. Slightly negotiable. Contact:
Mob: 98807 18980

SITE FOR SALE
60x40 North face, site for sale Srirampura, SP Enclave, near Ring Road, fully constructed layout. Ready for construction. Direct owner. *Brokers Excuse.*
Mob: 9964205255

SITE FOR SALE
40x60 Bapuji Layout, attached BEML Layout, New Kant Urs Layout.
Mob: 9740088990

FOR SALE
8 3/4 Gunta RTC. Land Fully Compounded with 500Sq.ft RCC House, thar Road facing, 1.2Km from Mysore-Banglore Express Highway. 7.5 Km From Mysore Railway Station, contact
6364215455, 9845692555

SITE FOR SALE
MUDA Approved
Site No. 55, 1153 sq.ft - S/F, Adhishwar Nagar Layout at Vijayanagar 4th Stage, Mysore
Price: 3800/sq.ft.
Contact: BHARATH (Owner)
Mob: 80194-51366

ಮಳಿಗೆ ಬಾಡಿಗೆಗೆ ದೊರೆಯುತ್ತದೆ
ಮೈಸೂರು ನಗರ ತ್ಯಾಗರಾಜ ಮುಖ್ಯ ರಸ್ತೆಯಲ್ಲಿ ಅರಸು ಮಂಡಳಿ ಸಹಕಾರ ಸಂಘದ ಕಟ್ಟಡದ ಪೂರ್ವಾಭಿಮುಖವಾಗಿರುವ 12x10 ಅಳತೆಯ ಮೇಲೆ ಅಂತಸ್ತಿನ ಮಳಿಗೆ ಬಾಡಿಗೆಗೆ ದೊರೆಯುತ್ತದೆ.
0821-2439609
7019480195

ಮನೆ ಮಾರಾಟಕ್ಕಿದೆ
ಮೈಸೂರು ಕಲ್ಯಾಣಗಿರಿ ನಗರ ರಾಜಕುಮಾರ್‌ರಸ್ತೆ ಪಶ್ಚಿಮ ವಿಭಾಗಕ್ಕೆ 40x25 ಅಡಿ ನಿವೇಶನದಲ್ಲಿ 4 ಚದರ ಮನೆ ಅಂತಿಮವಾಗಿ ರೂ.49 ಲಕ್ಷಕ್ಕೆ ಮಾರಾಟಕ್ಕಿದೆ
9880793880

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ ನಂ. 172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ, ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ, ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

ಸೈಟುಗಳು ಮಾರಾಟಕ್ಕಿದೆ
40x60 N/F ಜಿಲ್ಲಾ ಎಂಪ್ಲಾಯೀಸ್ ಲೇಔಟ್
30x40 ಕಾರ್ನರ್ KSRTC ಲೇಔಟ್ ಶ್ರೀರಾಂಪುರ
9538412881
9845699944

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ ಫೀಲ್ಡ್ ಎಕ್ಸಿಕ್ಯೂಟೀವ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್‌ಸೆಂಟಿವ್ ಇರುತ್ತದೆ. ಅನುಭವ ಇದ್ದವರಿಗೆ ಮೊದಲ ಆದ್ಯತೆ
8553738081
8951019994

SITE FOR SALE
30x80; West Face Between KSRTC and Nandini Layout Alanahalli T.Narasipura Road
9686831338

CONSTRUCTION
SKANDA PROPERTIES
ಆಕರ್ಷಕ ಬೆಲೆ, ಗುಣಮಟ್ಟ ದೃಢೀಕರಣ ಮತ್ತು ಉಚಿತ Maintenance ನೊಂದಿಗೆ ಮನೆ ನಿರ್ಮಿಸಲಾಗುವುದು
9379888558

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು GF+FF (2+2 ರೂಮ್ಸ್) ರೈಲ್ವೆ ಲೇಔಟ್, ಜೆ.ಪಿ.ನಗರ, ಮೈಸೂರು
9538956060
8660108796

ಮುಡಾ ಅಪ್ರೂವ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ A ಬ್ಲಾಕ್ 60 ಅಡಿ ರಸ್ತೆ, (ಪೂ.ಪ 46 ಅಡಿ, ದ.ಉ 127 ಅಡಿ) 2 ವಿಸ್ತೀರ್ಣ 2900 ಸ್ಕೈರ್ ಫೀಟ್, ಚದರ ಅಡಿಗೆ 2000
8618644886
9880280299

WANTED/AVAILABLE
JOINT VENTURE (JV)
Lands- 2 To 8 Acre Within 14km - Suitable For Layouts
5000 To 20000 Sft & Above - With In Ring Road - for Apartments
Buy/sell COMMERCIAL SITES @ 8000 To 15000 /sft
9886697052

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ 13,448 ESI & PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ
8453408502,9108100117

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

2.5 BHK HOME INTERIORS @
Starting @ ₹2.5 Lacs*
Home Space Mart™
TALK TO OUR DESIGN TEAM
9108923123

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸೈಟು ಮಾರಾಟಕ್ಕಿದೆ
40x30 ಅಳತೆಯ DTCP 'A' ಖಾತೆ ಸೊಸೈಟಿ E/F ಸೈಟು ಮಾರಾಟಕ್ಕಿದೆ 15 ಲಕ್ಷದ 50 ಸಾವಿರಗಳು ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಆಡಿಟರ್ ಆಫೀಸ್‌ನಲ್ಲಿ ಕೆಲಸ ಮಾಡಲು ಬಿ.ಕಾಂ, ಕಂಪ್ಯೂಟರ್ ನಾಲೆಡ್ಜ್ ತಿಳಿದಿರುವ ಮಹಿಳೆ ಬೇಕಾಗಿದ್ದಾರೆ. ಕುವೆಂಪುನಗರ ಸುತ್ತಮುತ್ತಲಿನವರಿಗೆ ಆದ್ಯತೆ
9880692485

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

SITE FOR SALE
Bogadi Gaddige road Jattihundi 30x40, 30x50, 40x60, 40x40 Near St. Francis School
9008474797
8431531684

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

AQUAGUARD AND KENT
Sales and Service.
Service charge :300/-
9901200444

WANTED
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿ ಅನುಭವ ಇರುವವರು ಮಹಿಳೆಯರು ಬೇಕಾಗಿದ್ದಾರೆ. Salary: 10,000K. Time: 10 am to 7 pm. Akbar Road, Near Ashoka Road, Mysore.
Mob: 9916514950

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552

ಮಾರಾಟಕ್ಕಿದೆ
ಮೈಸೂರು ತಾ॥ ಜಯಪುರ ಹೋ॥ ಮಾವಿನಹಳ್ಳಿ 3 ಎಕರೆ 7 ಗುಂಟೆ 4 ಎಕರೆ 02 ಗುಂಟೆ ತಳ್ಳೂರು ಸರ್ಕಲ್ ಮುಂದೆ 1 ಎಕರೆ 04 ಗುಂಟೆ, ಮುಳ್ಳೂರು ಮಹಾಲಕ್ಷ್ಮಿ ಲೇಔಟ್ ಪಕ್ಕ, 20 ಗುಂಟೆ, ಕಂಚಮಳ್ಳಿ ಮುಖ್ಯರಸ್ತೆಯಲ್ಲಿ 1 ಎಕರೆ 20 ಗುಂಟೆ ಮತ್ತು ಕಪಿಲ ಹೊಳೆಪಕ್ಕ 1 ಎಕರೆ 02 ಗುಂಟೆ ದೂರ ಗ್ರಾಮದಲ್ಲಿ 19 ಗುಂಟೆ ಮಾರಾಟಕ್ಕಿದೆ
9945661696,9663793666

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267 98454 26862

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಬ್ಯಾಂಕಿಂಗ್ ಸೆಕ್ಟರ್‌ಗೆ ಟೆಲಿಕಾಲರ್ ಬೇಕಾಗಿದ್ದಾರೆ. Experienced & Freshers (SSLC and above) ಹುಡುಗ ಮತ್ತು ಹುಡುಗಿಯರು ಹಾಗೂ ಕಲೆಕ್ಷನ್ ಮತ್ತು ರಿಕವರಿ ಹುದ್ದೆಗಳಿಗೆ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರಬೇಕು.
9591425134

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

SITE FOR SALE
Bapuji Layout 40x60 S/F, Opp. park 40 ft. road. Anand Nagar 40x60 W/F, 30x40 S/F, 30x40 E/F. Railway Layout, Bogadi 40x50 N/E Corner.
Mob: 9945148025

ಕ್ರಿಶ್ಚಿಯನ್ ವಧು ಬೇಕಾಗಿದೆ
ಮಂಗಳೂರಿನ ಕ್ಯಾಥೋಲಿಕ ಕ್ರಿಶ್ಚಿಯನ್ 35 ವರ್ಷದ ವಿದೇಶದಲ್ಲಿ ಉತ್ತಮ ಉದ್ಯೋಗದಲ್ಲಿರುವ ಶ್ರೀಮಂತ ಸುಂದರ ವರನಿಗೆ 32 ವರ್ಷದ ಒಳಗಿನ ಕ್ರಿಶ್ಚಿಯನ್ (ಕ್ಯಾಥೋಲಿಕ, CSI, Protestant) ವಧು ಬೇಕಾಗಿದೆ.
9483788737

ತಕ್ಷಣ ಬೇಕಾಗಿದ್ದಾರೆ
ಪ್ರಸಿದ್ಧ ಕಂಪನಿಗಳಿಗೆ Cashier Billing, Data Entry, Admin, Accounts, HR, Q/C, Packing, Helper, Drivers ಬೇಕಾಗಿದ್ದಾರೆ. 7th, 10th, ITI Diploma, Any Degree, M.Com, MBA Pass & Fail ಯುವಕ ಯುವತಿಯರು ಬೇಕಾಗಿದ್ದಾರೆ. (ESI+PF+OT) ನೊಂದಿಗೆ ಸಂಬಳ 15,000 ರಿಂದ 30,000 /–
9916641959,9035143190

SITES for SALE
JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

RS CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ ಇಂದೇ ಸಂಪರ್ಕಿಸಿ
9538575009
7019151884

HOUSE SALE near JP Nagar Ring Road
3 BHK Duplex 1 Year Old House, Corner, East Door, 30x40, MUDA Approved,
Price - 1.25 Cr,
At Gurukula Layout
8660105902

REQUIRED
For a Reputed Firm in Hebbal Industrial Estate, Mysore.
1. OFFICE ASSISTANT(Female) - 1No
Qualification : B.Com., B.Sc, M.Com
Experience : Minimum 1-2years
Excellent Communication in Kannada English, Hindi. Salary - Rs. 15,000/-
99720 29007

ಬೇಕಾಗಿದ್ದಾರೆ
ಟೀ ಶಾಪ್‌ನಲ್ಲಿ ಕೆಲಸ ಮಾಡಲು ಟೀ ಮೇಕರ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: 9606077068

ಮನೆ ಬಾಡಿಗೆಗೆ ಇದೆ
30x40 ಅಳತೆ ಪೂರ್ವಕ್ಕೆ ಬಾಗಿಲು ಗ್ರೌಂಡ್ ಫ್ಲೋರ್ (2BHK) ಸಸ್ಯಹಾರಿಗಳಿಗೆ ಮಾತ್ರ ಮಧ್ಯವರ್ತಿಗಳಿಗೆ ಅವಕಾಶವಿಲ್ಲ ನೀರು, ಸೋಲಾರ್ ಮತ್ತು ವಾಲ್‌ಡ್ರೋಬ್ ವ್ಯವಸ್ಥೆ ಇರುತ್ತದೆ. ಶಿಕ್ಷಕರ ಬಡಾವಣೆ
9035085532,9901259464

ಸೈಟ್ ಮಾರಾಟಕ್ಕಿದೆ
30x43 ಸೌತ್‌ಫೇಸ್ BEML ಲೇಔಟ್ ರಾಜರಾಜೇಶ್ವರಿ ನಗರ ದಟ್ಟಗಳ್ಳಿ
9741561111

ಸೈಟುಗಳು ಮಾರಾಟಕ್ಕಿದೆ
30x40, 20x30 ದಟ್ಟಗಳ್ಳಿ
30x40 Dulpex New House
ಹಳೆ ಮನೆ/ಹೊಸ ಮನೆ ಸೈಟು ಮಾರುವವರು/ಕೊಳ್ಳುವವರು
9945042875
ಶ್ರೀ ಬನಶಂಕರಿ ರಿಯಲ್ ಎಸ್ಟೇಟ್

Two independent houses for lease
2 BHK & 3 BHK at N.R. Mohalla, Opp. Park, Mysore.
Owner whatsapp only
BROKERS EXCUSE
7760107867

ಕೃಷಿ ಭೂಮಿ ಮಾರಾಟಕ್ಕೆ
12 ಎಕರೆ ಅಥವಾ ಅದರ ಭಾಗ, ಬನ್ನೂರು ರಿಂಗ್ ರೋಡ್ ಜಂಕ್ಷನ್‌ನಿಂದ 25 ಕಿಮೀ, ಮೈಸೂರು, ರಂಗಸಮುದ್ರ ಗ್ರಾಮದಿಂದ 8 ಕಿಮೀ, ತಿನರಸೀಪುರ ತಾಲೂಕು. ರೂ. 40 ಲಕ್ಷ ಪ್ರತಿ ಎಕರೆಗೆ. Negotiable.
Mob: 9740897213, 9980149812, 9242901691

Wanted (Manager)
J.P. Nagar Service Apartment ನಲ್ಲಿ ಕೆಲಸ ಮಾಡಲು Manager ಬೇಕಾಗಿದ್ದಾರೆ. Male / Female. Age below 35 years. Language: Kannada, English, Hindi fluency. Computer knowledge must. Contact:
Mob: 9686225522

Commercial Building for Sale
1st, 2nd, 3rd & 4th Floor, 1200 sq. Ring Road, Ananda Nagar.
Contact:
9844713445, 9066637156

ನಿವೇಶನಗಳು ಮಾರಾಟಕ್ಕಿದೆ
ಬನ್ನೂರು ರಸ್ತೆಯಲ್ಲಿ ವಾಜಮಂಗಲ ಗೇಟ್ ಹತ್ತಿರ, ಮುಡಾ ಅನುಮೋದಿತ ನಿವೇಶನಗಳು ಮಾರಾಟಕ್ಕಿದೆ. 30x40, 30 ಲಕ್ಷ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ದೊರೆಯುತ್ತದೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಮೈಸೂರು ಈಸ್ಟ್ ಪ್ರಾಪರ್ಟೀಸ್
9916766389
6363400519

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಸೇವಾ ಮನೋಭಾವುಳ್ಳ ಯುವಕ/ಯುವತಿಯರು ಮಹಿಳೆಯರು/ವಿಧವೆ/ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಆಧಾರ್ ಕಾರ್ಡ್ ಕಡ್ಡಾಯ ಊಟ ವಸತಿಯೊಂದಿಗೆ ಸಂಬಳ 12000ರಿಂದ 15000 ರವರೆಗೆ ಕೂಡಲೇ ಸಂಪರ್ಕಿಸಿ:
9035324777,7259306665
(ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ)

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಎಲ್ಲಾ ಜನಾಂಗದ ವಧು–ವರರು, ವಿಚ್ಛೇದಿತರು ಹಾಗೂ ವಿಧವಾ–ವಿಧವೆಯರು ಸಂಪರ್ಕಿಸಿ. (2nd Marriage Also). B.E, MBA, M.Tech, MD, MS ಹಾಗೂ ಎಲ್ಲಾ Degree, USA, UK, Germany, Canada 55 ವರ್ಷ ವಿಧವೆಗೆ ವರ ಬೇಕು (Caste no bar).
Mob: 8951241381

ನಿವೇಶನಗಳು ಬೇಕಾಗಿವೆ
ವಿಜಯನಗರ 4ನೇ ಹಂತ, 2ನೇ ಘಟ್ಟದಲ್ಲಿ ಎಲ್ಲಾ ಅಳತೆಯ ಮುಡಾ ನಿವೇಶನಗಳು ಬೇಕಾಗಿದೆ.
6360633036, 8088689211

ಕೃಷ್ಣಂ ಹಿಲ್ ವೀವ್
ಬಂಡಿಪಾಳ್ಯ ರಿಂಗ್ ರಸ್ತೆಯಿಂದ ಕೇವಲ 300 ಮೀ ಅಂತರದಲ್ಲಿ ಆರ್‌ಎಂಸಿಗೆ ಹೊಂದಿಕೊಂಡಂತೆ ಮುಡಾ ಮತ್ತು ಸಾಲ ಸೌಲಭ್ಯವುಳ್ಳ ನಿವೇಶನಗಳು ಮಾರಾಟಕ್ಕಿವೆ.
9353843772, 7022718593

ಮೈನಗರ...ಮೈನಗರ...ಮೈನಗರ
ಬನ್ನೂರು ರಸ್ತೆ ವಾಜಮಂಗಲದ ಮೈನಗರ ಬಡಾವಣೆಯಲ್ಲಿ ನೊಂದಣಿಗೆ ಸಿದ್ಧವಿರುವ ಮುಡಾ ನಿವೇಶನಗಳು ಮಾರಾಟಕ್ಕಿವೆ.
8088187466, 8660160225

SITE FOR SALE
MUDA SITES FOR SALE 30/40 , 40/60 Near Dattagalli, Mysore.
30/50, 30/50 Sites 35lakhs Bogadi road, Mysore.
PH: 90193 99331

Change of Name
I, Gopala Govind Prasad, S/o Late R. Gopal Prasad, residing at No. 17, 2nd Main, 2nd Cross, Vijayashreepura, Mysore, have changed my name from G. Govind Prasad to Gopala Govind Prasad on my own free will, sworn in before Notary Bose M.A. Madappa, Mysore, vide affidavit dated 14-3-2024.
Sd/- Gopala Govind Prasad

WANTED
Operator - ITI / Diploma, freshers can also apply. Only male operators.
Mail: bilvashree24@gmail.com
Whatsapp: 9606062178

ನಿವೇಶನಗಳು ಬೇಕಾಗಿವೆ
ಇಲವಾಲದ ಸುತ್ತ ಮುತ್ತ ಮುಡಾ ಹಾಗೂ ಡಿಟಿಸಿಪಿ ಎಲ್ಲಾ ಅಳತೆಯ ನಿವೇಶನಗಳು ತಕ್ಷಣವೇ ಬೇಕಾಗಿವೆ.
7760591291, 6363798472

"ಓಂ ನಮಃ ಶಿವಾಯ"
ಶಿವಂ ಬಡಾವಣೆ ಮೈಸೂರು–ನಂಜನಗೂಡು ಹೈವೆ ರಸ್ತೆಯಿಂದ ಕೇವಲ 1 ಕಿ.ಮೀ. ಅಂತರದಲ್ಲಿ ಮುಡಾ ಮತ್ತು ಸಾಲ ಸೌಲಭ್ಯವುಳ್ಳ ನಿವೇಶನಗಳು ಮಾರಾಟಕ್ಕಿವೆ.
8431146597, 9591429166

ಬಾಲಾಜಿ ಕೃಪ ಪ್ರಾಪರ್ಟೀಸ್
ಮೈಸೂರಿನ ಚಾಮುಂಡಿ ಬೆಟ್ಟ ತಪ್ಪಲಿನಲ್ಲಿ ಲಲಿತಾದ್ರಿಪುರ ರಿಂಗ್ ರಸ್ತೆಗೆ ಹತ್ತಿರವಿರುವ ಮುಡಾ ನಿವೇಶನಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9019562901, 8217596732

30x65 Vidyaranyapuram
Commercial Site, North East Corner Old Demolish House for Sale, Price - 2.28 Cr
Sewage Farm Road,60 Feet Road
8660105902

New HOUSE For SALE, BOGADI
4 BHK Duplex, 40x60, MUDA, E/F Door, 40 Ft Road, Price- 2.95 Cr
Near Harsha Bar, Within Ring Road
8660105902

Change of Name
I, Smt. Malashree. M, W/o Sri Prabhandan M., residing at No. EWS 208, KHB, 2nd Stage, Kuvempunagar, Mysuru-570 023, have changed my name from Nagamani M. to Malashree M. on my own free will sworn in before Notary P.O. Adinarayana, Mysuru vide affidavit dated 29-2-2024.
Sd/- Malashree. M.

TO LET
1700 Sq.ft., 1st Floor, 600 sq.ft. IInd Floor, main road, suitable for office, finance, showroom with lift, opp. D.F.R.L. Qtrs., T.N. Pura Road, Siddartha Nagar, Mysore-570 011.
Mob: 9886394079

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

FOR SALE
1) 20x30, 30x40, 30x50 near Defence Apartment H.D. Kote Road.
2) 30x50 Varuna Lake near Narasipura Road.
3) 2, 3 BHK flats in Ramakrishnanagar.
4) 100x100 Farm house KRS Back Water attach 19 Lakhs starts.
5) 40x72 house Vidyaranyapuram.
6) 20x30 House Giridarshini Layout, Alanahalli attach.
PRAKRUTHI PROPERTIES
9538690359, 9035990359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

SITES FOR SALE
MUDA APPROVED
30x40 - 40 Lakhs
30x50 - 70 Lakhs
Near Ring Road, Srirampura, Mysore.
Mob: 8296832513

WANTED
1) Medical Typist - Female USG / Lab (1-2 years experience)
2) Marketing PRO - Male, (1-2 years experience). 3) Administrative Officer - Male (1-2 years experience)
Add: 1869, S.S. Complex, 1st Floor, Opp. Sathyanarayana Temple, Near RMC Bus Stand, New Sayyaji Rao Road, Mysore
9845272844, 9739400641

ಪ್ರಸಿದ್ಧ ಮಾಹಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಪಂಡಿತ್॥ ಪ್ರಸಾದ್ ಪೊದುವಾಳ್
9731839596
ಇವರು ಸ್ತ್ರೀ–ಪುರುಷ, ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ, ಸಾಲಬಾಧೆ, ಭೂಮಿ, ಕೋರ್ಟು, ತನ್ನವರೆ ತನಗೆ ಶತ್ರು ಪ್ರೇತಬಾದೆ, ಇನ್ನೂ ಮುಂತಾದ ಸರ್ವ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ನೇರ ಭೇಟಿಯಾಗಿ ಪರಿಹಾರಸಿಕೊಳ್ಳಿ
ಮನೆ ವಿಳಾಸ: ಲಕ್ಷ್ಮಿ ನಿವಾಸ # 19/ಡಿ2, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ ಡಿ.ಸಿ ಆಫೀಸ್ ಎದುರು ಸಿದ್ಧಾರ್ಥ ಲೇಔಟ್, ಮೈಸೂರು

BRIDE WANTED
Roman Catholic Boy 1991 born / 5'9" / Software Engineer (13 Lakhs annually) settled in Mysore.
Please call:
7204180606, 8123502561

ಶಿರಡಿ ಪ್ರವಾಸ
5 ದಿನಗಳು. 11–4–2024. ಕೊಲ್ಹಾಪುರ, ಪಂಡರಾಪುರ, ತುಳಜಾ ಭವಾನಿ, ಶನಿಸಿಂಗನಾಪುರ, ಎಲ್ಲೋರ, ನಾಸಿಕ್, 3 ಜ್ಯೋತಿರ್ಲಿಂಗ.
ಮೈತ್ರಿ ಟ್ರಾವೆಲ್ಸ್
Mob: 6360422209

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಜಿ.ಎಂ.ಎಸ್ ಕೋರಿಯರ್ ಕಂಪನಿಗೆ ಡೆಲಿವರಿ ಸ್ಟಾಪ್ ಅಂಡ್ ಸಿ ಎಸ್ ಡಿ ಸ್ಟಾಫ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ:
9845996622, 9741903773
8050645717

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಯದುವೀರ್‌ಗೆ ನೀಡುವ ಒಂದೊಂದು ಮತವೂ ಚಾಮುಂಡೇಶ್ವರಿ ಮಡಿಲಿಗೆ ಹೂ ಹಾಕಿದಂತೆ...

● ಜೆಡಿಎಸ್ ಹಿರಿಯ ಮುಖಂಡರೂ ಆದ ಶಾಸಕ ಜಿ.ಟಿ.ದೇವೇಗೌಡರ ಮನವಿ ● ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್; ಚಾ.ನಗರ ಅಭ್ಯರ್ಥಿ ಬಾಲರಾಜ್ ಅಭಿನಂದಿಸಿದ ಜಿಟಿಡಿ

ಮೈಸೂರು, ಮಾ.15(ಎಂಕೆ)– ರಾಜ್ಯ ಹಾಗೂ ದೇಶಕ್ಕೆ ಅಪಾರ ಕೊಡುಗೆಯನ್ನು ನೀಡಿರುವ ಮೈಸೂರು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿರುವುದೇ ನಮ್ಮ ಸೌಭಾಗ್ಯ. ನಾವೆಲ್ಲರೂ ಅವರಿಗೆ ಮತ ನೀಡಿ ಋಣ ತೀರಿಸುವ ಅವಕಾಶವನ್ನು ತಾಯಿ ಚಾಮುಂಡೇಶ್ವರಿಯೇ ಕರುಣಿಸಿದ್ದಾಳೆ. ಯಾವುದೇ ಆಸೆ–ಆಮಿಷಗಳಿಗೆ ಒಳಗಾಗದೆ 'ನಮ್ಮ ಓಟು ನಮ್ಮ ಯುವರಾಜರಿಗೆ' ಎಂದು ಶಪಥ ಮಾಡಿ, ದೇಶದಲ್ಲಿಯೇ ಅತೀ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವಂತೆ ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಮತದಾರರಿಗೆ ಕರೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ತಮ್ಮ ಕಚೇರಿಗೆ ಶುಕ್ರವಾರ ಭೇಟಿ ನೀಡಿದ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳನ್ನು ಅತ್ಯಂತ ಆತ್ಮೀಯವಾಗಿ ಸ್ವಾಗತಿಸಿ, ಅಭಿನಂದಿಸಿದ ಬಳಿಕ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಎಂಪಿ ಯಾರೆಂದರೆ.. ನಮ್ಮ ಯುವರಾಜರು ಎನ್ನುವಂತಾಗಬೇಕು. ಇದರಿಂದ ನಮ್ಮೆಲ್ಲರಿಗೂ ಗೌರವ ದೊರೆಯಲಿದೆ. ಬುದ್ಧಿವಂತರೂ ಆಗಿರುವ ಅವರು ಲೋಕಸಭೆ ಪ್ರವೇಶ ಮಾಡಿದರೆ, ಅವರಿಗಾಗಿ ಪ್ರಧಾನಿ ಮೋದಿಯವರ ಕಚೇರಿ ಬಾಗಿಲು ಸದಾ ತೆರೆದಿರುತ್ತದೆ. ನಿಮ್ಮೆಲ್ಲರ ಸಮಸ್ಯೆಗಳು ಸುಲಲಿತವಾಗಿ ಬಗೆಹರಿದು, ರಾಜ್ಯದ ಅಭಿವೃದ್ಧಿಯೂ ಆಗಲಿದೆ ಎಂದರು.

ನನಗೆ ವಿಶ್ವಾಸವಿದೆ. ಇಲ್ಲಿಯವರೆಗಿನ ಯಾವ ಎಂಪಿಯೂ ಮಾಡದ ರೀತಿಯಲ್ಲಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ಜನಸೇವೆ ಮಾಡಲಿದ್ದಾರೆ. ಸಣ್ಣ ಸಣ್ಣ ಸಮಾಜವನ್ನೂ ಪ್ರೀತಿಸಲಿದ್ದಾರೆ. ಮಹಾರಾಜರು ಮನೆಯಿಂದ ಹೊರಗೆ ಬರಲ್ಲ... ಅವರು ಗೆಲ್ತಾರಾ ಎಂಬ ಮಾತುಗಳಿಗೆ ಕಿವಿಕೊಡದೆ 'ನಮ್ಮ ರಾಜ, ನಮ್ಮ ಊರು, ನಮ್ಮ ಅರಮನೆ' ಎನ್ನುವ ಮೂಲಕ ಗೆಲ್ಲಿಸಬೇಕು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಓಟು ಬಿಜೆಪಿಗೆ, ಮಂಡ್ಯದಲ್ಲಿ ಬಿಜೆಪಿ ಓಟು ಜೆಡಿಎಸ್‌ಗೆ, ಹಾಸನದಲ್ಲಿ ಬಿಜೆಪಿ ಓಟು ಜೆಡಿಎಸ್‌ಗೆ, ಚಾಮರಾಜನಗರದಲ್ಲಿ ಜೆಡಿಎಸ್ ಓಟು ಬಿಜೆಪಿಗೆ ಹಾಕಿಸಲು ಪಾತೊಡಿ ಎಂದು ಕರೆ ನೀಡಿದರು.



ಜಾತ್ಯಾತೀತ ಬಂಧುಗಳು ಸಹಕಾರ ನೀಡಿ...

ಚಾಮರಾಜನಗರ ಮತ್ತು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಬಲಗೊಳಿಸಿ, ನರೇಂದ್ರ ಮೋದಿಯವರನ್ನು ಮೂರನೇ ಬಾರಿ ಪ್ರಧಾನಿಗಳನ್ನಾಗಿ ಮಾಡಲು ಎಲ್ಲಾ ವರ್ಗದ ಜನರನ್ನು ಒಳಗೊಂಡು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಆಶೀರ್ವಾದ ಮತ್ತು ಮಾರ್ಗದರ್ಶನ, ಹೆಚ್.ಡಿ.ಕುಮಾರಸ್ವಾಮಿ ಹಾಗೂ ಜಿ.ಟಿ.ದೇವೇಗೌಡರ ಸಾರಥ್ಯದಲ್ಲಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಸಾರ್ವಜನಿಕವಾಗಿ ಅಪಾರ ಕೊಡುಗೆ ನೀಡಿದ್ದಾರೆ. ಅಂತಹ ಕುಟುಂಬದಿಂದ ಬಂದಿರುವ ಯದುವೀರ್ ಸೇರಿ ಮೈಸೂರು ಪ್ರಾಂತ್ಯದ ಎಲ್ಲಾ ಅಭ್ಯರ್ಥಿಗಳ ಗೆಲುವಿಗೆ ಜಾತ್ಯಾತೀತ ಬಂಧುಗಳು ಸಹಕಾರ ನೀಡಿ.

- **ಎಸ್.ಬಾಲರಾಜ್,** ಬಿಜೆಪಿ ಅಭ್ಯರ್ಥಿ, ಚಾಮರಾಜನಗರ ಲೋಕಸಭಾ ಕ್ಷೇತ್ರ

ಮನೆ ಮನೆಗೆ ಬರುತ್ತಿದ್ದಾರೆ: ಯದುವೀರ್ ಅವರು, ಅಭ್ಯರ್ಥಿಯೆಂದು ಘೋಷಣೆಯಾದ ಮೂರೇ ದಿನದಲ್ಲಿ ಮನೆ ಮನೆಗೆ ಬರುತ್ತಿದ್ದಾರೆ. ರಸ್ತೆ ಬದಿಯಲ್ಲಿ ಟೀ ಕುಡಿದು ಜನರೊಂದಿಗೆ ಬೆರೆಯುತ್ತಿದ್ದಾರೆ. ಮೈಸೂರು ರಾಜವಂಶಸ್ಥರಾದ ಯದುವೀರ್ ಅವರಿಗೆ ಎಷ್ಟು ಮತಗಳು ಲೀಡ್ ಬರಲಿವೆ ಎಂಬುದನ್ನು ಲೆಕ್ಕ ಹಾಕಲು ಆಗಬಾರದು. ದೇಶದಲ್ಲಿಯೇ ಅತೀ ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಿಸಬೇಕು. ಚಾಮುಂಡೇಶ್ವರಿ ಆರಾಧಕರೂ ಆಗಿರುವ ಅವರಿಗೆ ಮತ ನೀಡುವುದು, ದೇವಿಯ ಮಡಿಲಿಗೆ ನಾವುಗಳು ಹೂ ಹಾಕಿದಂತೆ. ಹಾಗೆಯೇ ಅತ್ಯಂತ ಸ್ನೇಹ ಜೀವಿಯೂ ಆಗಿರುವ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ಅವರನ್ನೂ ಗೆಲ್ಲಿಸಬೇಕು ಎಂದರು.

ಶಕ್ತಿ ಮೀರಿ ಕೆಲಸ: ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದ ಪ್ರತಾಪ್ ಸಿಂಹ ಲೋಕಸಭಾ ಚುನಾವಣೆಗೆ ನಿಂತಾಗ ಒಂದೇ ಒಂದು ರೂಪಾಯಿ ಪಡೆಯದೆ ಗೆಲ್ಲಿಸಿದ್ದೇವೆ. ಎರಡನೇ ಬಾರೀ ಚುನಾವಣೆಗೆ ನಿಂತಾಗಲೂ ಚಾಮುಂಡೇಶ್ವರಿ ಕ್ಷೇತ್ರದ ಮತದಾರರು ಏಕ ಮನಸ್ಸಿನಿಂದ ಮತ ನೀಡಿ ಗೆಲ್ಲಿಸಿದ್ದಾರೆ. ಅದರಂತೆ ಪ್ರತಾಪ್ ಸಿಂಹ ಕೂಡ 10 ವರ್ಷಗಳ ಕಾಲ ಶಕ್ತಿ ಮೀರಿ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಯದುವೀರ್ ಅವರು ಅರಮನೆಯೊಳಗಿದ್ದರೂ ಸಾಮಾಜಿಕ ಕಳಕಳಿ ಅವರಲ್ಲಿದೆ. ಮೈಸೂರು ಸಂಸ್ಥಾನದವನ್ನಾಳಿದ ಹಿಂದಿನ ಮಹಾರಾಜರ ಕೊಡುಗೆ, ಇತಿಹಾಸವನ್ನು ತಿಳಿಸಿದುಕೊಂಡಿದ್ದಾರೆ. ಮೈಸೂರು ಮಹಾರಾಜರ ಕೊಡುಗೆ ಈ ಕಾಲಕ್ಕೆ ಮರೆಯುವಂತಹದಲ್ಲ. ಸ್ವಾರ್ಥಕ್ಕಾಗಿ ಯಾವುದನ್ನು ಬಳಸದೆ ಜನರ ಕಲ್ಯಾಣಕ್ಕಾಗಿಯೇ ಸೇವೆ ಮಾಡಿದವರು ಎಂದು ಸ್ಮರಿಸಿದರು.

ಕೈ ಮುಗಿಯುತ್ತಿದೆ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಚುನಾವಣೆಗೆ ನಿಂತಾಗ ಹಳ್ಳಿ ಹಳ್ಳಿಗಳಲ್ಲಿ ರಂಗೋಲಿ ಇಟ್ಟು ಸ್ವಾಗತ ಮಾಡುತ್ತಿದ್ದರು. ನಮ್ಮ ಪಕ್ಷದಿಂದಲೂ 1996ರಲ್ಲಿ ಅವರ ವಿರುದ್ಧ ಅಭ್ಯರ್ಥಿಯನ್ನಾಗಿ ನನ್ನನ್ನು ನಿಲ್ಲಿಸಿದ್ದರು. ಅವರು ಪ್ರಚಾರ ಮುಗಿಸಿ ಎದುರು ಬರುವಾಗ ನಾನು ಅವರಿಗೆ ಭಕ್ತಿಯಿಂದ ಕೈ ಮುಗಿಯುತ್ತಿದ್ದೆ. ಅವರ ವಿರುದ್ಧ ನಾನು ಸೋತಿದ್ದು ಒಳ್ಳೆಯದೇ ಆಯಿತೆಂದು, ಅವರು ಗೆದ್ದ ಕೂಡಲೇ ಅಭಿನಂದನೆ ಸಲ್ಲಿಸಿದ್ದೆ. ನಗರದಲ್ಲಿರುವ ಸಹಕಾರ ಭವನ ಮಹಾರಾಜರ ಕೊಡುಗೆ. ಅದರ ಪಕ್ಕದಲ್ಲಿ ಮತ್ತೊಂದು ಕಟ್ಟಡ ನಿರ್ಮಾಣಕ್ಕೆ 10 ಲಕ್ಷ ರೂ.ಅನುದಾನವನ್ನು ನೀಡಿದ್ದರು. ಮೊದಲಿಂದಲೂ ಮಹಾರಾಜವಂಶಸ್ಥರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದೇನೆ ಎಂದು ನೆನೆದರು.

> ಮೈಸೂರು ರಾಜಮನೆತನ ಮತ್ತು ಜಿ.ಟಿ.ದೇವೇಗೌಡರ ನಡುವೆ ಮೊದಲಿನಿಂದಲೂ ಅವಿನಾಭಾವ ಸಂಬಂಧ ಹಾಗೂ ಒಡನಾಟವಿದೆ. ರಾಜಕೀಯ ಕ್ಷೇತ್ರದಲ್ಲಿ ಅಪಾರ ಅನುಭವ ಇರುವ ಅವರ, ಮಾರ್ಗದರ್ಶನದೊಂದಿಗೆ ಮುನ್ನಡೆಯುತ್ತಿರುವುದು ಸಂತಸದ ವಿಚಾರವಾಗಿದೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟ ಯಶಸ್ವಿಯಾಗಲಿ. ಹಾಸನ, ಮಂಡ್ಯ ಸೇರಿದಂತೆ ಶ್ರೇಷ್ಠ ಭಾರತ ನಿರ್ಮಾಣಕ್ಕಾಗಿ ತಾಯಿ ಚಾಮುಂಡೇಶ್ವರಿ ಆಶೀರ್ವಾದೊಂದಿಗೆ ಫಲಿತಾಂಶ ನಮ್ಮ ಕಡೆ ಬರಲಿ ಎಂದು ಪಾರ್ಥಿಸುತ್ತೇನೆ.
>
> - **ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್,** ಬಿಜೆಪಿ ಅಭ್ಯರ್ಥಿ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ

28 ಕ್ಷೇತ್ರ ಗೆಲ್ಲುವುದೇ ಗುರಿ: ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಅಪಾರ ಪ್ರೀತಿ ಇಟ್ಟಿರುವ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರು, ಸೀಟು ಹಂಚಿಕೆ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲದೆ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಕರೆ ನೀಡಿದ್ದಾರೆ. ಅದರಂತೆ 28ಕ್ಕೆ 28 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲಲೇಬೇಕು. ದೇಶದಲ್ಲಿ ಕಾಂಗ್ರೆಸ್ ತೆಗೆಯಲೇಬೇಕು ಎಂದು ಜನರಿಂದಲೇ ಬಂದಿರುವ ಕೂಗಿನಂತೆ ಬಿಜೆಪಿ–ಜೆಡಿಎಸ್ ಒಂದಾಗಿವೆ. ಅದರಂತೆ ಮೈಸೂರು ಪ್ರಾಂತ್ಯದಲ್ಲಿ ಯುವರಾಜರು ನನ್ನ ಮೂಲಕ ಚಾಮುಂಡೇಶ್ವರಿ ಕ್ಷೇತ್ರದ ಮತದಾರರ ಬಳಿಗೆ ಬಂದಿದ್ದಾರೆ. ನೀವೆಲ್ಲರೂ ಏನೇ ಆಸೆ–ಅಮಿಷಗಳ ಬಂದರೂ... ಅವರು ಕೊಟ್ಟಿರುವ ಕೊಡುಗೆಯ ಋಣ ತೀರಿಸುವ ಅವಕಾಶವೆಂದು ಮತ ನೀಡಿ ಎಂದರು.

10 ರೂ.ಅನುದಾನವೂ ಬಂದಿಲ್ಲ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 10 ತಿಂಗಳಾದರೂ ಅಭಿವೃದ್ಧಿಗಾಗಿ 10 ರೂ. ಅನುದಾನವನ್ನೂ ನೀಡಿಲ್ಲ. ಇನ್ನೇನು ಲೋಕಸಭಾ ಚುನಾವಣೆ ಇರುವುದರಿಂದ ಮುಂದಿನ ಎರಡೂ ತಿಂಗಳು ರಾಜ್ಯ ಸರ್ಕಾರದ ಅನುದಾನವಿಲ್ಲ ಎಂದು ಕಿಡಿಕಾರಿದರು. ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್, ಮಾಜಿ ಸಚಿವ ಎಸ್.ಎ.ರಾಮದಾಸ್, ಬಿಜೆಪಿ ಹಾಗೂ ಜೆಡಿಎಸ್‌ನ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಐದು ವರ್ಷವೂ 'ಗ್ಯಾರಂಟಿಗಳ' ಕೊಡ್ತೇವೆ...



ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಹೀಗೆ ಎಲ್ಲರೂ ಲೋಕಸಭೆ ಚುನಾವಣೆ ಬಳಿಕ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುತ್ತಾರೆ ಎಂದರು. ಆದರೆ ಇದೆಲ್ಲಾ ಅಪ್ಪಟ ಸುಳ್ಳು. ನಾಡಿನ ಜನ ವಿಧಾನಸಭೆ ಚುನಾವಣೆಯಲ್ಲಿ 136 ಸ್ಥಾನಗಳನ್ನು ಗೆಲ್ಲಿಸಿ, ಕಾಂಗ್ರೆಸ್‌ಗೆ ಬಹುಮತ ನೀಡಿದ್ದೀರಿ. ಲೋಕಸಭೆ ಚುನಾವಣೆ ನಂತರವೂ ಸಂಪೂರ್ಣ ಐದು ವರ್ಷ ಗ್ಯಾರಂಟಿ ಯೋಜನೆಗಳು ಮುಂದುವರೆಯಲಿವೆ ಎಂದು ಭರವಸೆ ನೀಡಿದರು.

ವಿಧಾನಸಭಾ ಚುನಾವಣೆ ಪೂರ್ವದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದೆವು. ಬೆಲೆ ಏರಿಕೆಯಿಂದ ಬಡವರಿಗೆ ಜೀವನ ನಿರ್ವಹಣೆ ಕಷ್ಟವಾಗಿದೆ. ಹಣವಿಲ್ಲದೆ ಅವರಿಗೆ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಮಹಿಳೆಯರು, ರೈತರು, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ತೀವ್ರ ಸಂಕಷ್ಟದಲ್ಲಿರುವವರಿಗೆ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿ ತುಂಬುವುದು ನಮ್ಮ ಗ್ಯಾರಂಟಿ ಯೋಜನೆಗಳ ಪ್ರಮುಖ ಉದ್ದೇಶವಾಗಿತ್ತು. ಹಾಗಾಗಿ ನಾನು ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಬ್ಬರೂ ಸಹಿ ಹಾಕಿದ ಗ್ಯಾರಂಟಿ ಕಾರ್ಡ್ ಅನ್ನು ಮನೆ ಮನೆಗೆ ಹಂಚಿದೆವು. ಆಗ ಪ್ರಧಾನಿ ಮೋದಿ ರಾಜಸ್ಥಾನದಲ್ಲಿ ಭಾಷಣ ಮಾಡುತ್ತಾ ಗ್ಯಾರಂಟಿ ಯೋಜನೆ ಜಾರಿ ಆಗಲ್ಲ. ಇದಕ್ಕೆ ಹಣ ಹೊಂದಿಸಲು ಸಾಧ್ಯವಿಲ್ಲ. ಒಂದು ವೇಳೆ ಜಾರಿ ಮಾಡಿದರೆ ಕರ್ನಾಟಕದ ಖಜಾನೆ ಖಾಲಿಯಾಗುತ್ತದೆ. ಹಾಗಾಗಿ ಯಾವ ಕಾರಣಕ್ಕೂ ಜಾರಿ ಮಾಡಲು ಸಾಧ್ಯವಿಲ್ಲ ಎಂದರು. ಆದರೆ ನಾವು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದನ್ನು ಜನ ಒಪ್ಪಿದರು ಎಂದು ತಿಳಿಸಿದರು.

ಮಾತು ಉಳಿಸಿಕೊಂಡಿದ್ದೇವೆ: ಜನರ ಆಶೀರ್ವಾದದಿಂದ 2023ರ ಮೇ 20ರಂದು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿತು. ಜೂನ್ 11 ಶಕ್ತಿ ಯೋಜನೆ ಜಾರಿಮಾಡಿ, ಎಲ್ಲಾ ಮಹಿಳೆಯರಿಗೂ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಉಚಿತ ಪ್ರಯಾಣಕ್ಕೆ ಆದೇಶಿಸಿದೆವು. ಅದಕ್ಕಾಗಿ ಸಾರಿಗೆ ಸಂಸ್ಥೆಗೆ ಸರ್ಕಾರ ಹಣ ಕಟ್ಟಿದೆ. ಬಿಜೆಪಿ ರಾಜ್ಯಸಭಾ ಸದಸ್ಯರಾಗಿರುವ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರೇ ಪತ್ರ ಬರೆದು ಶಕ್ತಿ ಯೋಜನೆಯನ್ನು ಪ್ರಶಂಸಿಸಿದರು. ದೇವಸ್ಥಾನಕ್ಕೆ ಭಕ್ತಾಧಿಗಳ ಸಂಖ್ಯೆ ಹೆಚ್ಚಾಗಿದೆ, ಹೋಟೆಲ್ ಅಂಗಡಿ ವ್ಯಾಪಾರ ಜಾಸ್ತಿಯಾಗಿದೆ. ಪ್ರೇಕ್ಷಣೀಯ ಸ್ಥಳಗಳಲ್ಲಿ ಜನ ಹೆಚ್ಚಾಗಿದ್ದಾರೆ. ಇದರಿಂದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ಬಣ್ಣಿಸಿದ್ದರು. ನಾನು ಮೊದಲ ಬಾರಿ ಸಿಎಂ ಆಗಿದ್ದಾಗ ನೀಡುತ್ತಿದ್ದ ಏಳು ಕೆಜಿ ಅಕ್ಕಿಯನ್ನು ಬಿಜೆಪಿಯವರು ಐದು ಕೆಜಿಗೆ ಇಳಿಸಿದ್ದರು. ನಮ್ಮ ಸರ್ಕಾರ ಬಂದಾಗ ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಕೊಡುವುದಾಗಿ ಭರವಸೆ ನೀಡಿದ್ದೆವು. ಆದರೆ ಬಿಜೆಪಿಯವರು ಭಾರತೀಯ ಆಹಾರ ನಿಗಮದಿಂದ ಅಕ್ಕಿ ಸಿಗದಂತೆ ಮಾಡಿ, ಬಡವರ ಹೊಟ್ಟೆಗೆ ಕಲ್ಲು ಹಾಕಿದರು. ಈಗ ಐದು ಕೆಜಿ ಅಕ್ಕಿ ಬದಲು ತಲಾ 170 ರೂ. ನೀಡುತ್ತಿದ್ದೇವೆ. ಜುಲೈನಲ್ಲಿ ಗೃಹಜ್ಯೋತಿ, ಆಗಸ್ಟ್‌ನಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿದೆವು. ವಿವೇಕಾನಂದರ ಜನ್ಮದಿನದಂದು ಯುವನಿಧಿ ಯೋಜನೆಗೆ ಚಾಲನೆ ನೀಡಲಾಯಿತು. ಎರಡು ವರ್ಷದವರೆಗೆ ಭತ್ಯೆ ನೀಡುವುದರ ಜೊತೆಗೆ ಕೌಶಲ ತರಬೇತಿ ನೀಡಲಿದ್ದೇವೆ. ಇದರಿಂದ ಉದ್ಯೋಗ ಸಿಗಲಿದೆ. ನಾವು ಗ್ಯಾರಂಟಿ ಜಾರಿಯ ಮೂಲಕ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ ಎಂದರು.

ಬಿಜೆಪಿಯವರಿಗೆ ಹೊಟ್ಟೆ ಉರಿ: ಮೋದಿ ವರ್ಷಕ್ಕೆ ಎರಡು ಕೋಟಿ ಉದ್ಯೋಗ ನೀಡುತ್ತೇವೆ ಎಂದರು. ಹಾಗಾಗಿದ್ದರೆ ಈವರೆಗೆ ಇಪ್ಪತ್ತು ಕೋಟಿ ಉದ್ಯೋಗ ನೀಡಬೇಕಿತ್ತು. ಅವರು ಸುಳ್ಳು ಹೇಳಿದರು. ಬಡವರು, ದಲಿತರಿಗೆ ಒಳ್ಳೆಯ ದಿನ ಬರಲೇ ಇಲ್ಲ. ವಿದೇಶದಲ್ಲಿ ಕಪ್ಪು ಹಣ ತಂದು ಒಂದು ಕುಟುಂಬಕ್ಕೆ ಹದಿನೈದು ಲಕ್ಷ ಹಾಕ್ತೀವಿ ಅಂದರು. ಈವರೆಗೆ ಹದಿನೈದು ಪೈಸೆ ಕೊಡಲಿಲ್ಲ. ಒಂದು ಕಡೆ ಯತ್ನಾಳ್, ಒಂದು ಸಮುದಾಯದವರನ್ನು ಕಚೇರಿಗೆ ಬರಬೇಡಿ ಎನ್ನುತ್ತಾರೆ. ಸಂವಿಧಾನದ ಬಗ್ಗೆ ಬಿಜೆಪಿಯವರಿಗೆ ನಂಬಿಕೆ, ವಿಶ್ವಾಸ, ಗೌರವವಿಲ್ಲ. ಸಮಾನತೆ, ಸಮ ಸಮಾಜ, ಜಾತಿ ನಿರ್ಮೂಲನೆ ಹೇಳುವ ಸಂವಿಧಾನ ಇರಬಾರದು ಎನ್ನುವುದು ಅವರ ಉದ್ದೇಶ. ಅಂದಿನಿಂದ ಒಂದಲ್ಲ ಒಂದು ರೀತಿ ಸಂವಿಧಾನ ಬದಲಾವಣೆ ಮಾತನಾಡುತ್ತಾರೆ. ಅನಂತ್ ಕುಮಾರ್ ಹೆಗಡೆ ಮೂಲಕ ಬಿಜೆಪಿ ನಾಯಕರು ಹಾಗೆ ಹೇಳಿಸುತ್ತಿದ್ದಾರೆ. ಇದು ಸುಳ್ಳಾಗಿದ್ದರೆ ಅನಂತ್ ಕುಮಾರ್ ಹೆಗಡೆ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ. ಅಂದರೆ ಸಂವಿಧಾನ ಬದಲಾವಣೆ ಬಿಜೆಪಿಯ ಹಿಡನ್ ಅಜೆಂಡಾ ಹಾಗೂ ಅವರ ಅಚಲವಾದ ನಿಲುವು ಎನ್ನುವುದು ಸ್ಪಷ್ಟವಾಗುತ್ತದೆ. ಎಲ್ಲರೂ ಸೇರಿ ಸಂವಿಧಾನ ಉಳಿಸಿಕೊಳ್ಳಬೇಕಿದೆ ಎಂದರು.

ಸಂಶಯ ಬೇಡ: ಬಡವರ ಕೈಗೆ ಹಣ ಸಿಗುತ್ತಿರುವುದಕ್ಕೆ ಬಿಜೆಪಿಯವರಿಗೆ ಹೊಟ್ಟೆ ಉರಿ. ಎಲ್ಲಾ ಧರ್ಮ, ಜಾತಿ ಹಾಗೂ ಬಿಜೆಪಿ ಪಕ್ಷದ ಬಡವರು ಹಾಗೂ ಮಹಿಳೆಯರಿಗೂ ಗ್ಯಾರಂಟಿ ಯೋಜನೆ ನೀಡುತ್ತಿದ್ದೇವೆ. ಕೊಂಡುಕೊಳ್ಳುವ ಶಕ್ತಿ, ತಲಾ ಆದಾಯ, ಆರ್ಥಿಕ ಚಟುವಟಿಕೆ ಹೆಚ್ಚಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನಲ್ಲಿ ಹಣ ಇಟ್ಟಿದ್ದೇವೆ. ಐದು ವರ್ಷವೂ ಗ್ಯಾರಂಟಿ ಯೋಜನೆಗಳು ಇರಲಿವೆ. ಈ ಬಗ್ಗೆ ಸಂಶಯ ಬೇಡ. ನಮಗೆ ಬಸವಾದಿ ಶರಣರು ಪ್ರೇರಣೆ. ಹಾಗಾಗಿ ವಿಶ್ವಗುರು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದೇವೆ. ಬಿ.ಎಸ್.ಯಡಿಯೂರಪ್ಪ, ವೀರೇಂದ್ರ ಪಾಟೀಲ್, ನಿಜಲಿಂಗಪ್ಪ ಸೇರಿದಂತೆ ಯಾರೂ ಮಾಡಿಲ್ಲ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬೆಂಬಲ ನೀಡಿ, ಸರ್ಕಾರದ ಶಕ್ತಿ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ